ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2091
2. ಸದಸ್ಯರ ಹೆಸರು : ಶ್ರೀ ಲಿಂಗೇಶ ಕೆ.ಎಸ್. (ಬೇಲೂರು)
3. ಉತ್ತರಿಸಬೇಕಾದ ದಿನಾಂಕ : 19–03–2021
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

ಕ್ರ ಸಂ.	ಪ್ರಶ್ನೆ	ಉತ್ತರ
ಅ)	ಕರ್ನಾಟಕ ರಾಜ್ಯ ಉಗ್ರಾಣ ನಿಗಮದಿಂದ ಬೇಲೂರಿನಲ್ಲಿ ಉಗ್ರಾಣ ನಿಗಮದ ಶಾಖೆಯನ್ನು ತೆರೆಯದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಬಂದಿದೆ.
ಆ)	ಬಂದಿದ್ದಲ್ಲಿ, ಇಲ್ಲಿಯವರೆಗೆ ಉಗ್ರಾಣ ನಿಗಮ ಶಾಖೆಯನ್ನು ತೆರೆಯದಿರಲು ಕಾರಣವೇನು ?	ಕರ್ನಾಟಕ ರಾಜ್ಯ ಉಗ್ರಾಣ ನಿಗಮವು ಬೇಲೂರಿನಲ್ಲಿ ಉಗ್ರಾಣ ನಿರ್ಮಾಣ ಮಾಡಲು ನಿಗಮದ ಸ್ವಂತ ಜಮೀನು ಇರುವುದಿಲ್ಲ. ನಿಗಮವು ಹಾಸನ ಜಿಲ್ಲೆಯ ಕೇಂದ್ರಸ್ಥಾನದಲ್ಲಿ 51,734 ಮೆ.ಟನ್, ಜಾವಗಲ್‌ನಲ್ಲಿ 9,591 ಮೆ.ಟನ್, ಗಂಡಸಿಯಲ್ಲಿ 7,228 ಮೆ.ಟನ್, ಹೊಳೆನರಸೀಪುರದಲ್ಲಿ 7,836 ಮೆ.ಟನ್ ಮತ್ತು ಅರಕಲಗೂಡಿನಲ್ಲಿ 9,770 ಮೆ.ಟನ್ ಸಾಮರ್ಥ್ಯದ ಉಗ್ರಾಣಗಳೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಇದಲ್ಲದೆ ಬೇಲೂರಿಗೆ ಹತ್ತಿರವಿರುವ ಚಿಕ್ಕಮಗಳೂರು ಕೇಂದ್ರಸ್ಥಾನದಲ್ಲೂ ಸಹ ನಿಗಮವು 18,500 ಮೆ.ಟನ್ ಸಾಮರ್ಥ್ಯದ ಉಗ್ರಾಣಗಳನ್ನು ಹೊಂದಿದ್ದು ಇದರ ಸದುಪಯೋಗವನ್ನು ರೈತರು ಮತ್ತು ವ್ಯಾಪಾರಿಗಳು ಪಡೆಯಬಹುದಾಗಿದೆ.
ಇ)	ರೈತರಿಗೆ ಹಾಗೂ ವ್ಯವಹಾರಸ್ಥರಿಗೆ ಅನುಕೂಲವಾಗುವಂತೆ ಬೇಲೂರು ತಾಲ್ಲೂಕಿನಲ್ಲಿ ಉಗ್ರಾಣ ನಿಗಮದ ಶಾಖೆಯನ್ನು ಯಾವಾಗ ತೆರೆಯಲಾಗುವುದು? (ಸಂಪೂರ್ಣ ವಿವರ ನೀಡುವುದು)	ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಸದ್ಯದ ಆರ್ಥಿಕ ಪರಿಸ್ಥಿತಿ ಹಾಗೂ ಬೇಲೂರಿನಲ್ಲಿ ಉಗ್ರಾಣ ನಿರ್ಮಾಣ ಮಾಡಲು ನಿಗಮದ ಸ್ವಂತ ಜಮೀನು ಇಲ್ಲದೇ ಇರುವುದರಿಂದ ಬೇಲೂರಿನಲ್ಲಿ ಉಗ್ರಾಣ ನಿರ್ಮಾಣ ಮಾಡುವ ಪ್ರಸ್ತಾವನೆಯು ಇರುವುದಿಲ್ಲ.

No. CO 16 WHC 2021

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2284
ಸದಸ್ಯರ ಹೆಸರು : ಶ್ರೀ ನಾಗೇಂದ್ರ ಎಲ್. (ಚಾಮರಾಜ)
ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು
ಉತ್ತರಿಸುವ ದಿನಾಂಕ : 19.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಮೈಸೂರಿನಲ್ಲಿರುವ "ಫಾಲ್‌ಕಾನ್" ಕಾರ್ಖಾನೆಯನ್ನು ಮುಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಈ ಕಾರ್ಖಾನೆಯನ್ನು ಮುಚ್ಚಿರುವುದಕ್ಕೆ ಸೂಕ್ತ ಕಾರಣವೇನು;	ಮೈಸೂರಿನಲ್ಲಿರುವ "ಫಾಲ್‌ಕಾನ್" ಕಾರ್ಖಾನೆಯು ಖಾಸಗಿ ಕಂಪನಿಯಾಗಿದ್ದು, ಸಧ್ಯ ಮುಚ್ಚಿರುತ್ತದೆ.
ಆ	ಈ ಕಾರ್ಖಾನೆಯನ್ನು ಮುಚ್ಚಿರುವುದರಿಂದ ಸಾವಿರಾರು ಕಾರ್ಮಿಕರು ಕೆಲಸವಿಲ್ಲದೆ ಬೀದಿ ಪಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕಾರ್ಮಿಕರಿಗೆ ಯಾವ ಪರಿಹಾರವನ್ನು ನೀಡಲಾಗಿದೆ;	ಈ ಕಾರ್ಖಾನೆಯನ್ನು ಮುಚ್ಚಿರುವುದರಿಂದ 555 ಮಂದಿ ಕಾರ್ಮಿಕರು ಕೆಲಸ ಕಳೆದುಕೊಂಡಿರುತ್ತಾರೆ. ಇಲಾಖೆಯಲ್ಲಿರುವ ಮಾಹಿತಿಯಂತೆ, ಸದರಿ ಪ್ರಕರಣವು NCLT ಯಲ್ಲಿದ್ದು, NCLT ಯು ಕಂಪನಿಯನ್ನು Liquidate ಮಾಡಲು ಆದೇಶಿಸಿದ್ದು, ಅದರಂತೆ Official Liquidator ಮುಂದಿನ ಕ್ರಮ ತೆಗೆದುಕೊಳ್ಳುತ್ತಿದ್ದಾರೆ.
ಇ	ಈ ಕಾರ್ಖಾನೆಯನ್ನು ಪುನರ್ ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇಲ್ಲದಿದ್ದಲ್ಲಿ ಸೂಕ್ತ ಕಾರಣ ತಿಳಿಸುವುದು?	

ಸಿಐ 111 ಎಸ್‌ಪಿಐ 2021

(ಜಗದೀಶ್ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	: 2285
ವಿಧಾನ ಸಭೆ ಸದಸ್ಯರ ಹೆಸರು	: ಶ್ರೀ ಪ್ರಿಯಾಂಕ್ ಎಂ.ಖರ್ಗೆ (ಚಿತ್ತಾಪುರ)
ಉತ್ತರಿಸಬೇಕಾದ ದಿನಾಂಕ	: 19.03.2021
ಉತ್ತರಿಸುವ ಸಚಿವರು	: ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಸರ್ಕಾರದ ನ್ಯಾಯಬೆಲೆ ಅಂಗಡಿ ಮುಖಾಂತರ ಬಡವರಿಗೆ ನೀಡುವ ಅನ್ನಭಾಗ್ಯ ಯೋಜನೆಯ ಅಕ್ಕಿಯನ್ನು ಬ್ಲಾಕ್‌ನಲ್ಲಿ ಖರೀದಿಸಿ, ಅದನ್ನು ರೀ ಪಾಲೀಶ್ ಮಾಡಿ ಅಕ್ರಮವಾಗಿ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅಕ್ರಮ ಮಾರಾಟಗಾರರ ಮೇಲೆ ಸರ್ಕಾರದ ಕ್ರಮ ಕೈಗೊಂಡಿದೆಯೇ;	ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ.
ಆ	ಕಲಬುರಗಿ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಈ ರೀತಿ ಅನ್ನ ಭಾಗ್ಯ ಯೋಜನೆಯ ಅಕ್ಕಿಯನ್ನು ಬ್ಲಾಕ್‌ನಲ್ಲಿ ಖರೀದಿಸಿ, ಅದನ್ನು ರೀ-ಪಾಲಿಶ್ ಮಾಡಿ ಅಕ್ರಮವಾಗಿ ಹೆಚ್ಚಿನ ದರಕ್ಕೆ ಮಾರಾಟ ಮಾಡುತ್ತಿರುವವರಿಗೆ ಸಂಬಂಧಪಟ್ಟಂತೆ ಯಾರ ಯಾರ ಮೇಲೆ ಎಷ್ಟು ಪ್ರಕರಣಗಳು ದಾಖಲಾಗಿವೆ; (ಹೆಸರು ಸಮೇತ ಸಂಪೂರ್ಣ ವಿವರ ನೀಡುವುದು)	ಉದ್ಭವಿಸುವುದಿಲ್ಲ.

ಆನಾಸ 26 ಆನಾಸ 2021 (ಇ-ಆಫೀಸ್)

(ಉಮೇಶ್ ವಿ. ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2299
ಸದಸ್ಯರ ಹೆಸರು : ಶ್ರೀ ದೊಡ್ಡಗೌಡರ ಮಹಾಂತೇಶ್ ಬಸವಂತರಾಯ (ಕಿತ್ತೂರು)
ಉತ್ತರಿಸುವ ದಿನಾಂಕ : 19.03.2021.
ಉತ್ತರಿಸುವ ಸಚಿವರು : ಮಾನ್ಯ ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಕಿತ್ತೂರು ತಾಲ್ಲೂಕಿಗೆ ವಾರ್ತಾ ಭವನ ನಿರ್ಮಾಣಕ್ಕೆ ಪ್ರಸ್ತಾವನೆ ಇರುವುದು ನಿಜವೇ;	ಕಿತ್ತೂರು ತಾಲ್ಲೂಕಿಗೆ ವಾರ್ತಾ ಭವನ ನಿರ್ಮಾಣಕ್ಕೆ ಪ್ರಸ್ತಾವನೆ ಇರುವುದಿಲ್ಲ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ತಾಲ್ಲೂಕು ಮಟ್ಟದಲ್ಲಿ ಯಾವುದೇ ಕಚೇರಿಗಳನ್ನು ಹೊಂದಿರುವುದಿಲ್ಲ. ಆಯಾ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುವ ಜಿಲ್ಲಾ ಕಚೇರಿಗಳ ಮೂಲಕವೇ ಎಲ್ಲಾ ತಾಲ್ಲೂಕಿನಲ್ಲಿ ಹಮ್ಮಿಕೊಳ್ಳುವ ಕಾರ್ಯಕ್ರಮಗಳ ಕುರಿತು ವ್ಯಾಪಕ ಪ್ರಚಾರ ಕೈಗೊಳ್ಳಲಾಗುತ್ತಿದೆ.
(ಆ)	ಹಾಗಿದ್ದಲ್ಲಿ, ಕಿತ್ತೂರು ತಾಲ್ಲೂಕಿಗೆ ವಾರ್ತಾ ಭವನ ನಿರ್ಮಾಣಕ್ಕೆ ಅನುದಾನ ಮಂಜೂರು ಮಾಡಲು ಸರ್ಕಾರದ ಕ್ರಮವೇನು?	ಪ್ರಶ್ನೆ ಉದ್ಭವಿಸುವುದಿಲ್ಲ.

KCI-PIP/85/2021-INFO-KC-SEC

(ಸಿ.ಸಿ.ಪಾಟೀಲ)
ಮಾನ್ಯ ಸಣ್ಣ ಕೈಗಾರಿಕೆ ಹಾಗೂ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಎಸ್.ಎನ್ ನಾರಾಯಣಸ್ವಾಮಿ ಕೆ.ಎಂ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2305

ಉತ್ತರಿಸಬೇಕಾದ ದಿನಾಂಕ : 19.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್ ನಿಯಮಿತ (DCC) ಮುಖಾಂತರ ವ್ಯವಸಾಯ ಹಾಗೂ ವಾಣಿಜ್ಯ ಉದ್ದೇಶಕ್ಕೆ ವಿತರಿಸಿರುವ ಸಾಲಗಳಲ್ಲಿ ಅಕ್ರಮವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ಸದರಿ ಬ್ಯಾಂಕು ಮುಖಾಂತರ ಬಂಗಾರಪೇಟೆ ತಾಲ್ಲೂಕು ಹಾಗೂ ಕೆ.ಜಿ.ಎಫ್ ತಾಲ್ಲೂಕುಗಳಿಗೆ 2018 ರಿಂದ 2021ನೇ ಸಾಲಿನವರೆಗೆ ವ್ಯವಸಾಯ ಹಾಗೂ ವ್ಯಾಪಾರದ ಉದ್ದೇಶಕ್ಕೆ ಫಲಾನುಭವಿಗಳಿಗೆ, ರೈತರು ಸೊಸೈಟಿಗಳು ಹಾಗೂ ಸಂಘ ಸಂಸ್ಥೆಗಳಿಗೆ ವಿತರಿಸಿರುವ ಸಾಲಗಳೆಷ್ಟು; (ಫಲಾನುಭವಿಗಳ ಸಮೇತ ಮಾಹಿತಿ ನೀಡುವುದು)	ಬಂಗಾರಪೇಟೆ ಮತ್ತು ಕೆ.ಜಿ.ಎಫ್ ತಾಲ್ಲೂಕಿನ ಸಹಕಾರ ಸಂಘಗಳ ಮುಖಾಂತರ ವ್ಯವಸಾಯ ಹಾಗೂ ವ್ಯಾಪಾರದ ಉದ್ದೇಶಕ್ಕಾಗಿ ರೈತರ ಸಹಕಾರ ಸಂಘಗಳಿಗೆ ಹಾಗೂ ಸಂಘ ಸಂಸ್ಥೆಗಳಿಗೆ 2018 ರಿಂದ 2021ನೇ ಸಾಲಿನವರೆಗೆ ವಿತರಿಸಿರುವ ಸಾಲದ ವಿವರ ಫಲಾನುಭವಿವಾರು ತಾಲ್ಲೂಕುವಾರು ಮತ್ತು ಸಾಲವಾರು ವಿವರಗಳನ್ನು ಸಿ.ಡಿ. ರೂಪದಲ್ಲಿ ನೀಡಲಾಗಿದೆ.
ಇ)	ಸದರಿ ಬ್ಯಾಂಕಿನಿಂದ ವಾಣಿಜ್ಯ ಉದ್ದೇಶಕ್ಕೆ ಹಾಗೂ ಯಾವ ಯಾವ ಉದ್ದೇಶಗಳಿಗಾಗಿ ಯಾವ ಯಾವ ಸಂಘ ಸಂಸ್ಥೆಗಳಿಗೆ ಹಾಗೂ ಇನ್ನಿತರ ಸಂಸ್ಥೆ ಮತ್ತು ವೈಯುಕ್ತಿಕವಾಗಿ ನೀಡಿರುವ ಸಾಲಗಳೆಷ್ಟು; ಅವರು ಪಡೆದಿರುವ ಸಾಲದ ಮೊತ್ತ ಎಷ್ಟು?	ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಿಂದ ವಾಣಿಜ್ಯ ಹಾಗೂ ಇನ್ನಿತರೆ ಉದ್ದೇಶಗಳಿಗೆ ನೀಡಿರುವ ಸಾಲದ ವಿವರಗಳನ್ನು ಫಲಾನುಭವಿವಾರು ಮಾಹಿತಿಯನ್ನು ಸಿ.ಡಿ. ರೂಪದಲ್ಲಿ ನೀಡಲಾಗಿದೆ.

ಸಂಖ್ಯೆ: ಸಿಓ 92 ಸಿಎಲ್ಎಸ್ 2021

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಎಸ್.ಎನ್ ನಾರಾಯಣಸ್ವಾಮಿ ಕೆ.ಎಂ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2306

ಉತ್ತರಿಸಬೇಕಾದ ದಿನಾಂಕ : 19.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ (ಡಿ.ಸಿ.ಸಿ) ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕು ಮತ್ತು ಕೆ.ಜಿ.ಎಫ್ ತಾಲ್ಲೂಕುಗಳಲ್ಲಿರುವ ಸೊಸೈಟಿಗಳಲ್ಲಿ ಅಕ್ರಮ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಆ	ಬಂಗಾರಪೇಟೆ – ಕೆ.ಜಿ.ಎಫ್ ತಾಲ್ಲೂಕಿನಲ್ಲಿ ವಿ.ಎಸ್.ಎಸ್.ಎನ್ ಸೊಸೈಟಿಗಳು ಎಷ್ಟು; ಅದರ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಯಾರು; (ಸಂಪೂರ್ಣ ಮಾಹಿತಿ ನೀಡುವುದು)	ಬಂಗಾರಪೇಟೆ ತಾಲ್ಲೂಕಿನಲ್ಲಿ ಒಟ್ಟು 16 ವ್ಯವಸಾಯ ಸೇವಾ ಸಹಕಾರ ಸಂಘಗಳು ಮತ್ತು ಕೆಜಿಎಫ್ ತಾಲ್ಲೂಕಿನಲ್ಲಿ 09 ವ್ಯವಸಾಯ ಸೇವಾ ಸಹಕಾರ ಸಂಘಗಳು ನೋಂದಣಿಯಾಗಿರುತ್ತವೆ. ಈ ವ್ಯವಸಾಯ ಸೇವಾ ಸಹಕಾರ ಸಂಘಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳ ವಿವರಗಳನ್ನು **ಸಿಡಿ ರೂಪದಲ್ಲಿ** ನೀಡಲಾಗಿದೆ.
ಇ	ಪ್ರತಿ ಸೊಸೈಟಿ ಮುಖಾಂತರ 2018 ರಿಂದ ಇಲ್ಲಿಯವರೆಗೆ ರೈತರ ಸಾಲ, ಹಾಗೂ ಸ್ತ್ರೀ ಶಕ್ತಿ ಸಂಘಗಳ ಸಾಲ ಎಷ್ಟು; (ಪ್ರತಿ ಫಲಾನುಭವಿಯ ಮಾಹಿತಿ ನೀಡುವುದು)	ಬಂಗಾರಪೇಟೆ ಮತ್ತು ಕೆ.ಜಿ.ಎಫ್ ತಾಲ್ಲೂಕಿನ ಸೊಸೈಟಿಗಳ ಮುಖಾಂತರ ರೈತರು ಹಾಗೂ ಸ್ತ್ರೀ ಶಕ್ತಿ ಸಂಘಗಳಿಗೆ ಕಳೆದ 3 ವರ್ಷಗಳಿಂದ ವಿತರಿಸಿರುವ ಫಲಾನುಭವಿವಾರು, ತಾಲ್ಲೂಕುವಾರು ಮತ್ತು ಸಾಲವಾರು ವಿವರವನ್ನು **ಸಿಡಿ ರೂಪದಲ್ಲಿ** ನೀಡಲಾಗಿದೆ.
ಈ	ಸೊಸೈಟಿ ಮುಖಾಂತರ ಸಾಲ ಪಡೆದಿರುವ ರೈತರ ಹಾಗೂ ಸ್ತ್ರೀ ಶಕ್ತಿ ಸಂಘಗಳ ಫಲಾನುಭವಿಗಳಿಗೆ ಸರ್ಕಾರದಿಂದ ವಿಧಿಸಲಾಗಿರುವ ಬಡ್ಡಿ ಮತ್ತು ರೈತರ ಸಾಲದ ಪ್ರಕರಣಗಳೆಷ್ಟು; (ಪ್ರತಿ ಫಲಾನುಭವಿಯ ಮಾಹಿತಿ ನೀಡುವುದು)	ಬಂಗಾರಪೇಟೆ ಮತ್ತು ಕೆ.ಜಿ.ಎಫ್ ತಾಲ್ಲೂಕಿನ ಸೊಸೈಟಿಗಳ ಮುಖಾಂತರ ರೈತರು ಹಾಗೂ ಸ್ತ್ರೀ ಶಕ್ತಿ ಸಂಘಗಳಿಗೆ ಕಳೆದ 3 ವರ್ಷಗಳಿಂದ ಸರ್ಕಾರದಿಂದ ಜಮಾ ಆಗಿರುವ ಬಡ್ಡಿ ಮತ್ತು ರೈತರ ಸಾಲದ ಫಲಾನುಭವಿವಾರು ತಾಲ್ಲೂಕುವಾರು ಮತ್ತು ಸಾಲವಾರು ವಿವರಗಳನ್ನು ಸಿಡಿ **ರೂಪದಲ್ಲಿ** ನೀಡಲಾಗಿದೆ.

ಸಂಖ್ಯೆ: ಸಿಒ 93 ಸಿಎಲ್ಎಸ್ 2021

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 2314
ಸದಸ್ಯರ ಹೆಸರು : ಶ್ರೀ ಅಮರೇಗೌಡ ಲಿಂಗನಗೌಡ ಪಾಟೀಲ್ ಬಯ್ಯಾಪುರ್ (ಕುಷ್ಟಗಿ)
ಉತ್ತರಿಸಬೇಕಾದ ದಿನಾಂಕ : 19.03.2021.
ಉತ್ತರಿಸುವವರು : ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು, ಕುಷ್ಟಗಿ ಗ್ರಾಮದಲ್ಲಿರುವ ಸರ್ವೆ ನಂ.2 ರಲ್ಲಿನ ಒಟ್ಟು 10-07 ಎಕರೆ ಜಮೀನನ್ನು ಕೆ.ಐ.ಎ.ಡಿ.ಬಿ. ಮೂಲಕ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಇವರಿಗೆ ಹಂಚಿಕೆ ಮಾಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ಬಂದಿದ್ದಲ್ಲಿ, ಸದರಿ ಜಮೀನನ್ನು ಹಸ್ತಾಂತರ ಮಾಡುವಲ್ಲಿ ಯಾವ ರೀತಿಯ ವಿಳಂಬವಾಗುತ್ತಿದೆ; ಇದರ ಹಿಂದೆ ಪಟಭದ್ರ ಹಿತಾಸಕ್ತಿಗಳ ಕೈವಾಡವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕಿನ ಕುಷ್ಟಗಿ ಗ್ರಾಮದ ಸರ್ವೆ ನಂ.2 ರಲ್ಲಿ ಒಟ್ಟು 10.07 ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳುವ ಸಲುವಾಗಿ, 1987 ರಲ್ಲಿ ನಿಗಮವು ಜಮೀನಿನ ಮೌಲ್ಯ ರೂ.5,58,880/- ಅನ್ನು ಕೆ.ಐ.ಎ.ಡಿ.ಬಿ. ಸಂಸ್ಥೆಗೆ ಪಾವತಿಸಲಾಗಿರುತ್ತದೆ. ಕೆ.ಐ.ಎ.ಡಿ.ಬಿ. ಸಂಸ್ಥೆಯು ಹೊರಡಿಸಿರುವ ಪ್ರಸ್ತಾವಿತ ಜಮೀನು ಸ್ವಾಧೀನದ ಅಧಿಸೂಚನೆಯಲ್ಲಿ, ಮೊದಲ ಅಧಿಸೂಚನೆ 28(1)ರಲ್ಲಿ ನಂತರ ಅಂತಿಮ ಅಧಿಸೂಚನೆ 28(4)ರಲ್ಲಿ ಹಾಗೂ ಜೆ.ಎಂ.ಸಿ.ಯಲ್ಲಿ ಹಾಗೂ ಹಸ್ತಾಂತರ ಪತ್ರದಲ್ಲಿ ಸರ್ವೆ ನಂಬರುಗಳು ಬೇರೆ ಬೇರೆಯಾಗಿ ನಮೂದಾಗಿರುವುದರಿಂದ ಗೊಂದಲ ಉಂಟಾಗಿ ವಿಳಂಬವಾಗಿರುತ್ತದೆ.
ಇ)	ಸದರಿ ಜಮೀನನ್ನು ಸರಳವಾದ ರೀತಿಯಲ್ಲಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಇವರಿಗೆ ಯಾವಾಗ ಹಂಚಿಕೆ ಮಾಡಲು ಇಲಾಖೆಯು ಕ್ರಮವನ್ನು ವಹಿಸುತ್ತದೆ; ಹಾಗೂ ಇದಕ್ಕಾಗಿ ನಿಗದಿಪಡಿಸಿದ ಅನುದಾನ ಎಷ್ಟು;	ನಿಗಮಕ್ಕೆ ಕೆ.ಐ.ಡಿ.ಎ.ಬಿ. ಸಂಸ್ಥೆಯು ವ್ಯಾಜ್ಯ ಮುಕ್ತ ಜಮೀನಿನ ಸ್ವಾಧೀನವನ್ನು ನೀಡುವ ವಿಷಯ ಕುರಿತಂತೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಅಧ್ಯಕ್ಷತೆಯಲ್ಲಿ ದಿ: 19.01.2021 ರಂದು ಸಭೆ ನಡೆಸಿ ಚರ್ಚಿಸಿ ವಿವಾದಗ್ರಸ್ತ ಜಮೀನನ್ನು ವಿವಾದ ಮುಕ್ತಗೊಳಿಸಿಕೊಡಲು ಕೆ.ಐ.ಎ.ಡಿ.ಬಿ ಸಂಸ್ಥೆಗೆ ಸೂಚಿಸಲಾಗಿರುತ್ತದೆ. ನಿಗಮವು ಸದರಿ ಜಮೀನಿಗೆ ರೂ.5,58,880/- ಅನ್ನು ಕೆ.ಐ.ಎ.ಡಿ.ಬಿ.ಸಂಸ್ಥೆಗೆ ಪಾವತಿಸಿರುತ್ತದೆ.
ಈ)	ಕರ್ನಾಟಕ ಕೈಗಾರಿಕೆ ಪ್ರದೇಶಾಭಿವೃದ್ಧಿ ಮಂಡಳಿಯು ಈ ಉದ್ದೇಶಕ್ಕಾಗಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಇವರಿಗೆ ಎಷ್ಟು ಅನುದಾನವನ್ನು ಭೂಸ್ವಾಧೀನ ಕಾರ್ಯಕ್ಕಾಗಿ ಹಣ ಪಾವತಿ ಮಾಡಿದೆ?	ಕರ್ನಾಟಕ ಕೈಗಾರಿಕೆ ಪ್ರದೇಶಾಭಿವೃದ್ಧಿ ಮಂಡಳಿಯು ಈ ಉದ್ದೇಶಕ್ಕಾಗಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಇವರಿಗೆ ಭೂಸ್ವಾಧೀನ ಕಾರ್ಯಕ್ಕಾಗಿ ಯಾವುದೇ ಅನುದಾನ ಪಾವತಿಸಿರುವುದಿಲ್ಲ.

ಸಿಐ 43 ಸಿಎಸ್‌ಸಿ 2021

(ಸಿ.ಸಿ. ಪಾಟೀಲ್)
ಸಣ್ಣ ಕೈಗಾರಿಕೆ ಹಾಗೂ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು.

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ	:	2879
2.	ಮಾನ್ಯ ಸದಸ್ಯರ ಹೆಸರು	:	ಡಾ॥ ಯತೀಂದ್ರ ಸಿದ್ದರಾಮಯ್ಯ
3.	ಉತ್ತರಿಸುವ ದಿನಾಂಕ	:	19.03.2021
4.	ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಮತ್ತು ಸಕ್ಕರೆ ಸಚಿವರು.

ಕ್ರ ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಿರುವ ಸಕ್ಕರೆ ನಿಧಿಯ ಮೊತ್ತವೆಷ್ಟು; ಕಳೆದ 3 ವರ್ಷಗಳಲ್ಲಿ ವಸೂಲು ಮಾಡಿದ ಮೊತ್ತವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ಪ್ರಸ್ತುತ ರಾಜ್ಯದಲ್ಲಿ ಸಕ್ಕರೆ ನಿಧಿ ಇರುವುದಿಲ್ಲ. ಆದ್ದರಿಂದ ಈ ನಿಧಿಗೆ ಸಕ್ಕರೆ ಕಾರ್ಖಾನೆಗಳು ಯಾವುದೇ ಮೊತ್ತವನ್ನು ಪಾವತಿಸಿರುವುದಿಲ್ಲ. ಆದರೆ ಸಕ್ಕರೆ ಕಾರ್ಖಾನೆಗಳು ನುರಿಸುವ ಪ್ರತಿ ಟನ್ ಕಬ್ಬಿಗೆ ರೂ.5/- ರಂತೆ ರಸ್ತೆ ಕರ ಸಂಗ್ರಹಿಸಿ ಸರ್ಕಾರಕ್ಕೆ ಪಾವತಿಸಲಾಗುತ್ತಿತ್ತು. ಈ ರೀತಿ ಸಂಗ್ರಹವಾದ ಮೊತ್ತದಿಂದ ಆಯಾ ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರವು ಆಯವ್ಯಯದಲ್ಲಿ ಅನುದಾನ ಒದಗಿಸುತ್ತದೆ. ಕೇಂದ್ರ ಸರ್ಕಾರವು 2016-17ನೇ ಸಾಲಿನಿಂದ ಸರಕು ಮತ್ತು ಸೇವಾ ತೆರಿಗೆಯನ್ನು (GST) ಜಾರಿಗೆ ತಂದ ನಂತರ ಯಾವುದೇ ರಸ್ತೆ ಕರವನ್ನು ಸಂಗ್ರಹಿಸುತ್ತಿಲ್ಲ.
(ಆ)	ಸಕ್ಕರೆ ನಿಧಿಯನ್ನು ಯಾವ ಉದ್ದೇಶಕ್ಕೆ ವಿನಿಯೋಗಿಸಲಾಗಿದೆ; ಎಷ್ಟು ವೆಚ್ಚ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)	ಈ ಯೋಜನೆಗೆ ರಾಜ್ಯ ಸರ್ಕಾರವು ಕಳೆದ 3 ವರ್ಷಗಳಲ್ಲಿ ನೀಡಿರುವ ಅನುದಾನದ ವಿವರ ಈ ಕೆಳಕಂಡಂತಿದೆ. (see table below) 2020-21ನೇ ಸಾಲಿನಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗದ ಕಾರಣ ರಾಜ್ಯ ಸರ್ಕಾರದಿಂದ ಈ ಯೋಜನೆಗೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.
(ಇ)	ವರುಣ ವಿಧಾನ ಸಭಾ ಕ್ಷೇತ್ರದಲ್ಲಿ ಸಕ್ಕರೆ ನಿಧಿಯಿಂದ ಕಳೆದ 3 ವರ್ಷಗಳಲ್ಲಿ ತೆಗೆದುಕೊಂಡ ಕಾಮಗಾರಿಗಳು ಯಾವುವು? (ವಿವರ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಬನ್ನಾರಿ ಅಮ್ಮನ್ ಶುಗರ್ | ಲಿ. ಅಳಗಂಚಿ, ನಂಜನಗೂಡು ತಾಲ್ಲೂಕು ಈ ಕಾರ್ಖಾನೆಗೆ 2018-19ನೇ ಸಾಲಿನಲ್ಲಿ ರೂ.10.84 ಲಕ್ಷಗಳನ್ನು ವರುಣ ಕ್ಷೇತ್ರದ ರಸ್ತೆ ಅಭಿವೃದ್ಧಿ ಕಾಮಗಾರಿಗಾಗಿ ಬಿಡುಗಡೆ ಮಾಡಲಾಗಿದೆ. 2019-20 ಮತ್ತು 2020-21ನೇ ಸಾಲಿನಲ್ಲಿ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ

ಜಿಲ್ಲೆ	ಬಿಡುಗಡೆ / ವೆಚ್ಚ ಮಾಡಲಾದ ಮೊತ್ತ (ರೂ ಲಕ್ಷಗಳಲ್ಲಿ)	
	2018-19	2019-20
ಬೆಳಗಾವಿ	782.78	424.45
ಬಾಗಲಕೋಟೆ	661.36	228.81
ಮೈಸೂರು	54.34	8.60
ಮಂಡ್ಯ	9.75	187.10
ವಿಜಯಪುರ	140.19	130.30
ದಾವಣಗೆರೆ	20.45	0
ಉತ್ತರ ಕನ್ನಡ	0	20.34
ಒಟ್ಟು	1668.87	999.60

ಸಿಐ 83 ಸಿಓಎಫ್ 2021

(ಎನ್. ನಾಗರಾಜು. ಎಂ.ಟಿ.ಬಿ)
ಪೌರಾಡಳಿತ ಮತ್ತು ಸಕ್ಕರೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2887
ಸದಸ್ಯರ ಹೆಸರು	ಶ್ರೀ ಅಶೋಕ್ ನಾಯಕ್ ಕೆ.ಬಿ.
ಉತ್ತರಿಸಬೇಕಾದ ದಿನಾಂಕ	19.03.2021
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರ
ಅ)	ಶಿವಮೊಗ್ಗ ಗ್ರಾಮಾಂತರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2018-19ನೇ ಸಾಲಿನಿಂದ ಇದುವರೆಗೆ ಗಣಿ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು ಡಿ.ಎಂ.ಎಫ್. ನಿಧಿಯಿಂದ ಅನುದಾನ ಬಿಡುಗಡೆ ಮಾಡಲಾಗಿದೆಯೇ;	ಶಿವಮೊಗ್ಗ ಗ್ರಾಮಾಂತರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2018-19ನೇ ಸಾಲಿನಿಂದ ಜನವರಿ 2021ರ ಅಂತ್ಯದವರೆಗೆ ಗಣಿ ಬಾಧಿತ ಪ್ರದೇಶದಲ್ಲಿ ಮೂಲಭೂತ ಸೌಕರ್ಯಕ್ಕೆ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್‌ನಿಂದ ಒಟ್ಟು ರೂ. 6.63 ಲಕ್ಷಗಳ ಕ್ರಿಯಾ ಯೋಜನೆಯು ಅನುಮೋದನೆ ಗೊಂಡಿದ್ದು, ಅದರಂತೆ, ಕೈಗೊಂಡ ಕಾಮಗಾರಿಗಳು ಪೂರ್ಣಗೊಂಡಿದ್ದು, ರೂ. 6.63 ಲಕ್ಷ ಮೊತ್ತ ಬಿಡುಗಡೆ ಮಾಡಲಾಗಿರುತ್ತದೆ.
ಆ)	ಡಿ.ಎಂ.ಎಫ್. ನಿಧಿಯಿಂದ ಅನುದಾನ ಬಿಡುಗಡೆ ಮಾಡದಿದ್ದಲ್ಲಿ ಕಾರಣವೇನು; ಅನುದಾನ ಬಿಡುಗಡೆಗೆ ಸರ್ಕಾರ ಕೈಗೊಂಡ ಕ್ರಮಗಳೇನು;	ಕಂಡಿಕೆ (ಅ) ರಂತೆ ಕ್ರಮವಹಿಸಿದೆ.
ಇ)	ಡಿ.ಎಂ.ಎಫ್. ನಿಧಿಯಿಂದ ಗಣಿ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು ಅನುದಾನ ಬಿಡುಗಡೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವಾಗ ಅನುದಾನ ಬಿಡುಗಡೆ ಮಾಡಲಾಗುವುದು?	ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್ ನಿಧಿಯಿಂದ ಗಣಿ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಕ್ಕೆ ಈಗಾಗಲೇ ಕಂಡಿಕೆ (ಅ)ರಲ್ಲಿ ವಿವರಿಸಿದಂತೆ ಕ್ರಮವಹಿಸಲಾಗಿದೆ.

ಸಂಖ್ಯೆ ಸಿಐ 190 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)

ಗಣಿ ಮತ್ತು ಭೂವಿಜ್ಞಾನ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2901
ಸದಸ್ಯರ ಹೆಸರು	:	ಶ್ರೀ ಬಾಲಕೃಷ್ಣ ಸಿ.ಎನ್ (ಶ್ರವಣಬೆಳಗೊಳ)
ಉತ್ತರಿಸಬೇಕಾದ ದಿನಾಂಕ	:	19-03-2021
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ಸಕ್ಕರೆ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹಿಂದಿನ ಸರ್ಕಾರದಲ್ಲಿ ಚನ್ನರಾಯಪಟ್ಟಣ ಪುರಸಭೆಗೆ ಬಿಡುಗಡೆ ಮಾಡಿದ ರಾಜ್ಯ ಹಣಕಾಸು ಆಯೋಗ (ಎಸ್.ಎಫ್.ಸಿ) ಅನುದಾನವೆಷ್ಟು; (ವಿವರ ನೀಡುವುದು)</td><td>ಚನ್ನರಾಯಪಟ್ಟಣ ಪುರಸಭೆಗೆ ಎಸ್.ಎಫ್.ಸಿ ಮುಕ್ತನಿಧಿ ಹಾಗೂ ಕುಡಿಯುವ ನೀರು ಅನುದಾನದಡಿ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ,
(ರೂ ಲಕ್ಷಗಳಲ್ಲಿ)
<table>
<tr><th>ಕ್ರ ಸಂ</th><th>ಯೋಜನೆ</th><th>ವರ್ಷ</th><th>ಬಿಡುಗಡೆಯಾದ ಅನುದಾನ</th></tr>
<tr><td rowspan="2">1</td><td rowspan="2">ಎಸ್.ಎಫ್.ಸಿ ಮುಕ್ತನಿಧಿ</td><td>2018-19</td><td>64.81</td></tr>
<tr><td>2019-20</td><td>81.00</td></tr>
<tr><td rowspan="2">2</td><td rowspan="2">ಎಸ್.ಎಫ್.ಸಿ ಕುಡಿಯುವ ನೀರು</td><td>2018-19</td><td>20.00</td></tr>
<tr><td>2019-20</td><td>16.00</td></tr>
</table>
</td></tr>
<tr><td>ಆ)</td><td>ಬಿಡುಗಡೆ ಮಾಡಿದ ರಾಜ್ಯ ಹಣಕಾಸು ಆಯೋಗ (ಎಸ್.ಎಫ್.ಸಿ) ಅನುದಾನವನ್ನು ಪ್ರಸ್ತುತ ಸರ್ಕಾರವು ತಡೆ ಹಿಡಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ತಡೆಹಿಡಿಯಲು ಕಾರಣಗಳೇನು;</td><td>ಚನ್ನರಾಯಪಟ್ಟಣ ಪುರಸಭೆಗೆ ಎಸ್ ಎಫ್ ಸಿ ವಿಶೇಷ ಅನುದಾನ ರೂ. 500.00 ಲಕ್ಷಗಳು ಮಂಜೂರಾಗಿದ್ದು, ಕಾಮಗಾರಿಗಳು ಆರಂಭವಾಗದಿದ್ದರಿಂದ ಆರ್ಥಿಕ ಇಲಾಖೆಯ ನಿರ್ದೇಶನದಂತೆ ಸರ್ಕಾರದ ಪತ್ರ ಸಂಖ್ಯೆ: ನಅಇ 222 ಎಸ್.ಎಫ್.ಸಿ 2019, ದಿನಾಂಕ: 13.09.2019 ರನ್ವಯ ತಡೆ ಹಿಡಿಯಲಾಗಿರುತ್ತದೆ.</td></tr>
<tr><td>ಇ)</td><td>ತಡೆ ಹಿಡಿದಿರುವ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಾಗಿದೆಯೇ;</td><td rowspan="2">ಅನುದಾನ ಲಭ್ಯತೆಗನುಗುಣವಾಗಿ ಹಂತ ಹಂತವಾಗಿ ಅನುದಾನ ಬಿಡುಗಡೆ ಮಾಡಲಾಗುವುದು.</td></tr>
<tr><td>ಈ)</td><td>ಕ್ರಮಕೈಗೊಂಡಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?</td></tr>
</table>

ಕಡತ ಸಂಖ್ಯೆ:ನಅಇ 160 ಎಸ್.ಎಫ್.ಸಿ 2021

(ಎನ್. ನಾಗರಾಜ್, ಎಂ.ಟಿ.ಬಿ.)
ಪೌರಾಡಳಿತ ಹಾಗೂ ಸಕ್ಕರೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2903

ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಶಿವಣ್ಣ ಬಿ. (ಆನೇಕಲ್)

ಉತ್ತರಿಸಬೇಕಾದ ದಿನಾಂಕ : 19.03.2021

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಆನೇಕಲ್ ತಾಲ್ಲೂಕಿನಲ್ಲಿರುವ ಎ.ಪಿ.ಎಲ್ ಮತ್ತು ಬಿ.ಪಿ.ಎಲ್ ಕಾರ್ಡುಗಳನ್ನು ಹೊಂದಿರುವ ಕುಟುಂಬಗಳೆಷ್ಟು; (ಪೂರ್ಣ ಮಾಹಿತಿ ನೀಡುವುದು)</td><td>ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನಲ್ಲಿ ಆದ್ಯತೇತರ ಮತ್ತು ಆದ್ಯತಾ ಪಡಿತರ ಚೀಟಿಗಳನ್ನು ಹೊಂದಿರುವ ಕುಟುಂಬಗಳ ವಿವರ ಈ ಕೆಳಕಂಡಂತಿರುತ್ತದೆ.
<table><tr><th>ಅಂತ್ಯೋದಯ ಅನ್ನ ಪಡಿತರ ಚೀಟಿಗಳು</th><th>ಆದ್ಯತಾ ಪಡಿತರ ಚೀಟಿಗಳು</th><th>ಆದ್ಯತೇತರ ಪಡಿತರ ಚೀಟಿಗಳು</th><th>ಒಟ್ಟು</th></tr><tr><td>3815</td><td>97842</td><td>9060</td><td>110717</td></tr></table></td></tr>
<tr><td>ಆ</td><td>ಪ್ರಸ್ತುತ ಆನೇಕಲ್ ತಾಲ್ಲೂಕಿನಲ್ಲಿ ಎ.ಪಿ.ಎಲ್ ಮತ್ತು ಬಿ.ಪಿ.ಎಲ್ ಕಾರ್ಡುಗಳಿಗಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು? (ಪೂರ್ಣ ಮಾಹಿತಿ ನೀಡುವುದು)</td><td>ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲ್ಲೂಕಿನಲ್ಲಿ 2019-20ನೇ ಸಾಲಿನಿಂದ ಈವರೆವಿಗೂ ಹೊಸ ಆದ್ಯತೇತರ ಮತ್ತು ಆದ್ಯತಾ ಪಡಿತರ ಚೀಟಿಗಳಿಗಾಗಿ ಸಲ್ಲಿಸಿರುವ ಅರ್ಜಿಗಳ ವಿವರ ಈ ಕೆಳಕಂಡಂತಿರುತ್ತದೆ.
<table><tr><th>ಆದ್ಯತಾ ಪಡಿತರ ಚೀಟಿಗಳು</th><th>ಆದ್ಯತೇತರ ಪಡಿತರ ಚೀಟಿಗಳು</th><th>ಒಟ್ಟು</th></tr><tr><td>3655</td><td>1313</td><td>4968</td></tr></table></td></tr>
</table>

ಆನಾಸ 117 ಡಿಆರ್ಎ 2021 (ಇ-ಆಫೀಸ್)

(ಉಮೇಶ ವಿ. ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

<u>ಕರ್ನಾಟಕ ವಿಧಾನ ಸಭೆ</u>

ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ಶಿವಣ್ಣ.ಬಿ (ಆನೇಕಲ್)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2904
ಉತ್ತರಿಸಬೇಕಾದ ದಿನಾಂಕ	:	ದಿನಾಂಕ:19-03-2021
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಹಾಗೂ ಸಕ್ಕರೆ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಆನೇಕಲ್ ತಾಲ್ಲೂಕಿನ ನಗರ ಸ್ಥಳೀಯ ಸಂಸ್ಥೆಗಳಿಗೆ ನಗರೋತ್ಥಾನ ಯೋಜನೆಯಡಿ ಬಿಡುಗಡೆಯಾದ ಅನುದಾನದ ಮೊತ್ತವೆಷ್ಟು; (ಮಾಹಿತಿ ನೀಡುವುದು).	ಆನೇಕಲ್ ತಾಲ್ಲೂಕಿನ ನಗರ ಸ್ಥಳೀಯ ಸಂಸ್ಥೆಗಳಿಗೆ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-3ರ ಯೋಜನೆಯಡಿಯಲ್ಲಿ ಒಟ್ಟು ರೂ.3776.70 ಲಕ್ಷಗಳು ಬಿಡುಗಡೆಯಾಗಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ. (ರೂ.ಲಕ್ಷಗಳಲ್ಲಿ) (ಕೆಳಗಿನ ಕೋಷ್ಟಕ)
ಆ)	2021-22ನೇ ಆರ್ಥಿಕ ವರ್ಷಕ್ಕೆ ನಗರೋತ್ಥಾನ ಯೋಜನೆಯಡಿ ಎಷ್ಟು ಅನುದಾನವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಮೀಸಲಿಡಲಾಗುವುದು;	ನಗರೋತ್ಥಾನ (ಮುನಿಸಿಪಾಲಿಟಿ) ಹಂತ-3ರ ಯೋಜನೆಯಡಿ 2021-22ನೇ ಸಾಲಿನ ಆಯ-ವ್ಯಯದಲ್ಲಿ ರೂ.200.00 ಕೋಟಿಗಳನ್ನು ನಿಗಧಿಪಡಿಸಲಾಗಿದೆ.
ಇ)	ಸದರಿ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? (ಪೂರ್ಣ ಮಾಹಿತಿ ನೀಡುವುದು).	

(ರೂ.ಲಕ್ಷಗಳಲ್ಲಿ)

ನಗರ ಸ್ಥಳೀಯ ಸಂಸ್ಥೆಯ ಹೆಸರು	**ಬಿಡುಗಡೆಯಾದ ಅನುದಾನದ ವಿವರ**		
	2018-19	**2019-20**	**2020-21**
ಹೆಬ್ಬಗೋಡಿ	4.54	919.11	111.34
ಆನೇಕಲ್	345.78	216.11	57.70
ಅತ್ತಿಬೆಲೆ	3.03	541.15	181.35
ಬೊಮ್ಮಸಂದ್ರ	3.03	531.15	244.94
ಚಂದಾಪುರ	3.03	503.69	110.76
ಒಟ್ಟು	**359.41**	**2711.21**	**706.08**

ಕಡತ ಸಂಖ್ಯೆ:ನಅಇ 29 ಸಮಸ 2021

(signature)

(ಎನ್. ನಾಗರಾಜ್ ಎಂ.ಟಿ.ಬಿ)
ಪೌರಾಡಳಿತ ಹಾಗೂ ಸಕ್ಕರೆ ಸಚಿವರು

ಕರ್ನಾಟಕ ಸರ್ಕಾರ

ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **3054**

ಸದಸ್ಯರ ಹೆಸರು : ಶ್ರೀ ನಿಸರ್ಗ ನಾರಾಯಣ ಸ್ವಾಮಿ ಎಲ್.ಎನ್.(ದೇವನಹಳ್ಳಿ)

ಉತ್ತರಿಸಬೇಕಾದ ದಿನಾಂಕ : **19-03-2021**

ಕ್ರ.ಸಂ.	ಪ್ರಶ್ನೆಗಳು	ಉತ್ತರ
ಅ	ರಾಜ್ಯದಲ್ಲಿ ಸಾರ್ವಜನಿಕ ಉದ್ದಿಮೆಗಳಲ್ಲಿ ಸ್ಥಳೀಯ ಜನರಿಗೆ ಸರಿಯಾಗಿ ಉದ್ಯೋಗ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು)	ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕ ಉದ್ದಿಮೆಗಳ ವ್ಯಾಪ್ತಿಯಲ್ಲಿ ಪ್ರಸ್ತುತ ಒಟ್ಟು 60 ಸಾರ್ವಜನಿಕ ಉದ್ದಿಮೆಗಳಿದ್ದು, ಈ ಪೈಕಿ ಶೇ.80 ಕ್ಕಿಂತ ಹೆಚ್ಚಿನ ಉದ್ದಿಮೆಗಳು ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಉದ್ದಿಮೆಗಳು ಸರ್ಕಾರ ಅನುಮೋದಿಸಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ, ನೇಮಕಾತಿಗಳನ್ನು ಮಾಡಿಕೊಳ್ಳುತ್ತಿದ್ದು, ರಾಜ್ಯದ ಎಲ್ಲಾ ಅರ್ಹ ಉದ್ಯೋಗಾಕಾಂಕ್ಷಿಗಳು ನೇಮಕಾತಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬಹುದಾಗಿದೆ.
ಆ	ಹಾಗಿದ್ದಲ್ಲಿ, ಸ್ಥಳೀಯರಿಗೆ ಉದ್ಯೋಗ ನೀಡಲು ಸರ್ಕಾರ ಉದ್ಯಮಕ್ಕೆ ಅನುಮತಿ ನೀಡುವ ಸಮಯದಲ್ಲಿ ವಿಧಿಸುವ ಷರತ್ತುಗಳೇನು; ನಿಯಮಾವಳಿಗಳೇನು; (ಮಾಹಿತಿ ನೀಡುವುದು)	ಸಾರ್ವಜನಿಕ ಉದ್ದಿಮೆಗಳು ರಾಜ್ಯ ಸರ್ಕಾರ ಸ್ವಾಮ್ಯದ ಸಂಸ್ಥೆಗಳಾಗಿದ್ದು, ಇವುಗಳಲ್ಲಿ ಎಲ್ಲಾ ಹಂತಗಳಲ್ಲಿ ಶೇ.100 ರಷ್ಟು ಕನ್ನಡಿಗರನ್ನು ನೇಮಕಾತಿ ಮಾಡಿಕೊಳ್ಳುವಂತೆ ಸರ್ಕಾರ ಆದೇಶಿಸಿರುತ್ತದೆ.
ಇ	ಸರ್ಕಾರದ ನಿಯಮಗಳು ಹಾಗೂ ಷರತ್ತುಗಳನ್ನು ಪಾಲಿಸದ ಉದ್ದಿಮೆದಾರರ ಮೇಲೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ? (ಮಾಹಿತಿ ನೀಡುವುದು)	ಅನ್ವಯಿಸುವುದಿಲ್ಲ.

ಸಾಉಇ 4 ಎಲ್ಎಸಿ 2021

(ಜಗದೀಶ ಶೆಟ್ಟರ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ

ಸಾರ್ವಜನಿಕ ಉದ್ದಿಮೆಗಳ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3055
ಸದಸ್ಯರ ಹೆಸರು : ಶ್ರೀ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್ (ದೇವನಹಳ್ಳಿ)
ಉತ್ತರಿಸುವ ದಿನಾಂಕ : 19.03.2021.
ಉತ್ತರಿಸುವ ಸಚಿವರು : ಮಾನ್ಯ ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹೆಚ್ಚಾಗಿ ಅನಧಿಕೃತ ಜಾಹೀರಾತು ಫಲಕಗಳನ್ನು ಅಳವಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿಯನ್ನು ವಿಧಾನಸಭಾ ಕ್ಷೇತ್ರವಾರು ನೀಡುವುದು)	ಈ ವಿಷಯವು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ವ್ಯಾಪ್ತಿಗೆ ಒಳಪಡುವುದಿಲ್ಲ. ಗ್ರಾಮ ಪಂಚಾಯಿತಿಗಳು/ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಜಾಹೀರಾತು ಫಲಕಗಳನ್ನು ಅಳವಡಿಸಲು ಅನುಮತಿ ನೀಡುವ ಅಧಿಕಾರವು ಆಯಾ ಜಿಲ್ಲಾಡಳಿತ ಮತ್ತು ಸ್ಥಳೀಯ ಗ್ರಾಮ ಪಂಚಾಯಿತಿಯ ವ್ಯಾಪ್ತಿಗೆ ಬರುವುದು. ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸುವ ಅಧಿಕಾರವು ಸಹ ಆಯಾ ಜಿಲ್ಲಾಡಳಿತ ಹಾಗೂ ಸ್ಥಳೀಯ ಗ್ರಾಮ ಪಂಚಾಯಿತಿಗೆ ಒಳಪಟ್ಟಿರುತ್ತದೆ ಮತ್ತು ಜಾಹೀರಾತು ಫಲಕಗಳಿಂದ ತೆರಿಗೆ ಸಂಗ್ರಹಿಸುವ ಅಧಿಕಾರ ಹೊಂದಿರುತ್ತದೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಸರ್ಕಾರದ ಜನಪರ ಯೋಜನೆಗಳು ಹಾಗೂ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿನ್ಯಾಸಗಳನ್ನು ಸಿದ್ಧಪಡಿಸಿ ಸರ್ಕಾರ/ ಇಲಾಖೆಯ ಸ್ವಾಮ್ಯದಲ್ಲಿರುವ ಹೆದ್ದಾರಿ ಫಲಕಗಳ ಮೂಲಕ ಪ್ರಚಾರ ಕಾರ್ಯ ಮಾಡುತ್ತಿದೆ.
ಆ)	ಹಾಗಿದಲ್ಲಿ, ಅನಧಿಕೃತ ಜಾಹೀರಾತು ಫಲಕಗಳನ್ನು ಅಳವಡಿಸುವುದನ್ನು ತಡೆಗಟ್ಟಲು ಸರ್ಕಾರ ಯಾವ ಕಠಿಣ ಕ್ರಮಗಳನ್ನು ಕೈಗೊಂಡಿದೆ;	ಅನ್ವಯಿಸುವುದಿಲ್ಲ.
ಇ)	ಈ ರೀತಿ ಅನಧಿಕೃತ ಜಾಹೀರಾತು ಫಲಕಗಳನ್ನು ಅಳವಡಿಸಿರುವುದರಿಂದ ಸರ್ಕಾರಕ್ಕೆ ತೆರಿಗೆ ನಷ್ಟವಾಗುವುದಿಲ್ಲವೇ; (ಮಾಹಿತಿ ನೀಡುವುದು)	ಅನ್ವಯಿಸುವುದಿಲ್ಲ
ಈ)	ಹಾಗಿದ್ದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಗುರ್ತಿಸಿರುವ ಅನಧಿಕೃತ ಜಾಹೀರಾತು ಫಲಕಗಳೆಷ್ಟು? (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)	ಅನ್ವಯಿಸುವುದಿಲ್ಲ

KCI-PIP/90/2021-INFO-KC-SEC

(ಸಿ.ಸಿ.ಪಾಟೀಲ್)
ಮಾನ್ಯ ಸಣ್ಣ ಕೈಗಾರಿಕೆ ಹಾಗೂ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3059
2. ಸದಸ್ಯರ ಹೆಸರು : ಶ್ರೀ ಹೂಲಗೇರಿ ಡಿ.ಎಸ್. (ಲಿಂಗಸುಗೂರು)
3. ಉತ್ತರಿಸುವ ದಿನಾಂಕ : 19.03.2021
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಸಣ್ಣ ಕೈಗಾರಿಕೆಗಳನ್ನು ಪ್ರಾರಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ರಾಯಚೂರು ಜಿಲ್ಲೆ, ಲಿಂಗಸುಗೂರು ತಾಲ್ಲೂಕಿನಲ್ಲಿ ಕೈಗಾರಿಕಾ ಪ್ರದೇಶ / ಲ್ಯಾಂಡ್.ಬ್ಯಾಂಕ್ ಸ್ಥಾಪನೆಗಾಗಿ ಕೆ.ಐ.ಎ.ಡಿ.ಬಿ. ವತಿಯಿಂದ ಪ್ರಸ್ತುತ ಯಾವುದೇ ಜಮೀನನ್ನು ಭೂಸ್ವಾಧೀನಪಡಿಸಿರುವುದಿಲ್ಲ.
(ಆ)	ಸದರಿ ತಾಲ್ಲೂಕಿನಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ **Land Banking** ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?	ಸದರಿ ತಾಲ್ಲೂಕಿನಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಲ್ಯಾಂಡ್.ಬ್ಯಾಂಕ್ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಸಂಖ್ಯೆ: ಸಿಐ 99 ಐಎಪಿ (ಇ) 2021

(ಜಗದೀಶ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3060

ಸದಸ್ಯರ ಹೆಸರು : ಶ್ರೀ ಸುರೇಶ್ ಗೌಡ (ನಾಗಮಂಗಲ)

ಉತ್ತರಿಸುವ ದಿನಾಂಕ : 19/03/2021

ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ ಮತ್ತು ಸಕ್ಕರೆ ಸಚಿವರು.

ಕ.ಸಂ.	ಪ್ರಶ್ನೆ	ಉತ್ತರ
(ಅ)	ನಾಗಮಂಗಲ ಪಟ್ಟಣ ಪಂಚಾಯಿತಿಯಿಂದ ಪುರಸಭೆಯಾಗಿ ಮೇಲ್ದರ್ಜೆಗೊಂಡ ನಂತರ ಹೊಸದಾಗಿ ಸೇರ್ಪಡೆಯಾದ ಪ್ರದೇಶಗಳ ದಾಖಲೆಗಳನ್ನು ಪಂಚಾಯಿತಿಯವರು ಪುರಸಭೆಗೆ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ನಾಗಮಂಗಲ ಪುರಸಭೆಗೆ ಹೊಸದಾಗಿ ಸೇರ್ಪಡೆಯಾದ ಪ್ರದೇಶಗಳ ದಾಖಲೆಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಂದ ಹಸ್ತಾಂತರ ಮಾಡಿಕೊಳ್ಳಲಾಗಿದೆ.
(ಆ)	ದಾಖಲಾತಿಗಳ ವರ್ಗಾವಣೆಯಾಗದೆ ಇರುವುದರಿಂದ ಹೊಸದಾಗಿ ಸೇರ್ಪಡೆಗೊಂಡ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೊಸದಾಗಿ ಸೇರ್ಪಡೆಗೊಂಡ ಪ್ರದೇಶಗಳಲ್ಲಿ ನಗರೋತ್ಥಾನ (ಮುನಿಪಾಲಿಟಿ) 3ನೇ ಹಂತದ ಯೋಜನೆಯಡಿ 2018-19ನೇ ಸಾಲಿನ ಬಾಬ್ತು ಅನುಮೋದನೆಯಾಗಿರುವ ಕ್ರಿಯಾಯೋಜನೆಯಂತೆ ಒಳಚರಂಡಿ ಕಾಮಗಾರಿಗಳು ಮತ್ತು ಕುಡಿಯುವ ನೀರಿನ ಬೋರ್‌ವೆಲ್ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ಮಂಡ್ಯ ಜಿಲ್ಲೆ ರವರು ವರದಿ ಮಾಡಿರುತ್ತಾರೆ.
(ಇ)	ಬಂದಿದ್ದಲ್ಲಿ, ಯಾವ ಕಾಲ ಮಿತಿಯೊಳಗಾಗಿ ದಾಖಲೆಗಳನ್ನು ವರ್ಗಾವಣೆ ಮಾಡಿಕೊಂಡು ಈ ಸಮಸ್ಯೆಗಳನ್ನು ಪರಿಹರಿಸಲಾಗುವುದು?	ನಾಗಮಂಗಲ ಪುರಸಭೆಗೆ ಸೇರ್ಪಡೆಗೊಂಡ ಪ್ರದೇಶಗಳಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಂದ ದಿ:10-07-2019, ದಿ:11-07-2019, ದಿ:06-11-2019, ದಿ:13-07-2020, ದಿ:20-07-2020, ದಿ:07-08-2020, ದಿ:29-08-2020 ಮತ್ತು ದಿ:07-01-2021ರಲ್ಲಿ ಹಸ್ತಾಂತರ ಮಾಡಿಕೊಳ್ಳಲಾಗಿದೆ ಎಂದು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಮಂಡ್ಯ ಜಿಲ್ಲೆ ರವರು ವರದಿ ಮಾಡಿರುತ್ತಾರೆ.

ಸಂಖ್ಯೆ: ನಅಇ/49/ಎಲ್‌ಎಕ್ಯೂ/2021

(ಎನ್. ನಾಗರಾಜು ಎಂ ಟಿ ಬಿ)
ಪೌರಾಡಳಿತ ಮತ್ತು ಸಕ್ಕರೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3069

ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ.ಎಂ ಲೇಔಟ್)

ಉತ್ತರಿಸಬೇಕಾದ ದಿನಾಂಕ : 19.03.2021

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಹಾಲಿ ಚಲಾವಣೆಯಲ್ಲಿರುವ ಬಿ.ಪಿ.ಎಲ್ ಕಾರ್ಡ್‌ಗಳ ಸಂಖ್ಯೆ ಎಷ್ಟು;	ದಿನಾಂಕ: 01/03/2021 ರಲ್ಲಿದ್ದಂತೆ ರಾಜ್ಯದಲ್ಲಿ 10,90,951 ಅಂತ್ಯೋದಯ ಅನ್ನ ಪಡಿತರ ಚೀಟಿಗಳು ಹಾಗೂ 1,16,83,545 ಆದ್ಯತಾ ಪಡಿತರ ಚೀಟಿಗಳು ಸೇರಿ ಒಟ್ಟು 1,27,74,496 ಆದ್ಯತಾ ಪಡಿತರ ಚೀಟಿಗಳು ಚಾಲ್ತಿಯಲ್ಲಿರುತ್ತವೆ.
ಆ	ಇವುಗಳ ಪೈಕಿ ಎಷ್ಟು ನಕಲಿ ಕಾರ್ಡ್‌ಗಳಿರುವುದು ಪತ್ತೆಯಾಗಿದೆ;	ಪಡಿತರ ಚೀಟಿಗಳಲ್ಲಿ ಸದಸ್ಯರ ಹೆಸರನ್ನು ಆಧಾರ್ ಸಂಖ್ಯೆಗೆ ಜೋಡಿಸಿದ ನಂತರ ನಕಲಿ ಪಡಿತರ ಚೀಟಿಗಳು ಇರುವುದಿಲ್ಲ. ಆದರೆ ಅನರ್ಹರು ಆದ್ಯತಾ ಪಡಿತರ ಚೀಟಿಗಳನ್ನು ಹೊಂದಿರುವ ದೂರುಗಳಿದ್ದು, ಈ ಬಗ್ಗೆ ರಾಜ್ಯದಲ್ಲಿ ನಿರಂತರವಾಗಿ ಅನರ್ಹ ಪಡಿತರ ಚೀಟಿಗಳನ್ನು ಪತ್ತೆ ಹಚ್ಚುವ ಕಾರ್ಯ ಜಾರಿಯಲ್ಲಿರುತ್ತದೆ.
ಇ	ಇಲ್ಲಿಯವರೆಗೆ ಎಷ್ಟು ಜನ ಈ ನಕಲಿ ಕಾರ್ಡ್ ಗಳನ್ನು ಹಿಂತಿರುಗಿಸಿರುತ್ತಾರೆ;	ಉದ್ಭವಿಸುವುದಿಲ್ಲ.
ಈ	ಬಿ.ಪಿ.ಎಲ್ ಕಾರ್ಡ್‌ಗಳನ್ನು ನೀಡುವ ಮಾರ್ಗಸೂಚಿಯನ್ನು ಬದಲಾಯಿಸಲು ಸರ್ಕಾರದ ಉದ್ದೇಶಿಸಿದೆಯೇ?	ಇಲ್ಲ.

ಆನಾಸ 118 ಡಿಆರ್‌ಎ 2021 (ಇ-ಆಫೀಸ್)

(ಉಮೇಶ್ ವಿ ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3082
2. ಮಾನ್ಯ ಸದಸ್ಯರ ಹೆಸರು : ಶ್ರೀ ಸುಬ್ಬಾರೆಡ್ಡಿ ಎಸ್.ಎನ್, ಬಾಗೇಪಲ್ಲಿ.
3. ಉತ್ತರಿಸಬೇಕಾದ ದಿನಾಂಕ : 19.03.2021
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಬಾಗೇಪಲ್ಲಿ ತಾಲ್ಲೂಕಿನ ಹಾಲಿ ಎ.ಪಿ.ಎಂ.ಸಿ ಮಾರುಕಟ್ಟೆ ಸ್ಥಳಾವಕಾಶದ ಕಾರಣದಿಂದ ಹೊಸದಾಗಿ ಟೊಮೋಟೊ ಮಾರುಕಟ್ಟೆ ಪ್ರಾರಂಭ ಮಾಡಲು ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಸದರಿ ಪ್ರಸ್ತಾವನೆ ಯಾವ ಹಂತದಲ್ಲಿದೆ ;	ಬಂದಿದೆ ಬಾಗೇಪಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ (ಎ.ಪಿ.ಎಂ.ಸಿ) ಮಾರುಕಟ್ಟೆ ಪ್ರಾಂಗಣದಲ್ಲಿ ಹಾಲಿ ಇರುವ 4 ಎಕರೆ ಜಾಗದಲ್ಲಿ ತರಕಾರಿ ವಹಿವಾಟು ನಡೆಯುತ್ತಿದ್ದು, ಟೊಮೋಟೋ ವಹಿವಾಟಿಗೆ ಸ್ಥಳಾವಕಾಶದ ಕೊರತೆ ಇರುವುದನ್ನು ಮನಗಂಡು ಹೊಸದಾಗಿ ಟೊಮೋಟೊ ಮಾರುಕಟ್ಟೆ ಪ್ರಾರಂಭ ಮಾಡಲು 9 ಎಕರೆ 20 ಗುಂಟೆ ಜಮೀನನ್ನು ಮಂಜೂರು ಮಾಡಲಾಗಿದೆ.
ಆ	ಈ ಹೊಸ ಮಾರುಕಟ್ಟೆ ಸ್ಥಾಪನೆಗೆ ಜಮೀನನ್ನು ಇಲಾಖೆಗೆ ಹಸ್ತಾಂತರ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಬಂದಿದೆ ಹೊಸ ಮಾರುಕಟ್ಟೆ ಸ್ಥಾಪನೆಗೆ ಹಸ್ತಾಂತರ ಮಾಡಿರುವ 09 ಎಕರೆ 20 ಗುಂಟೆ ಜಮೀನನ್ನು ದಿನಾಂಕ:23.09.2019 ರಂದು ಸಮಿತಿಯ ಸ್ವಾಧೀನಕ್ಕೆ ಪಡೆಯಲಾಗಿರುತ್ತದೆ.
ಇ	ಬಂದಿದ್ದಲ್ಲಿ, ಹೊಸ ಮಾರುಕಟ್ಟೆ ಸ್ಥಾಪನೆಗೆ ಎಷ್ಟು ಹಣ ಬಿಡುಗಡೆ ಮಾಡಲಾಗುವುದು? (ವಿವರ ನೀಡುವುದು)	ಯೋಜನಾ ವರದಿಯನ್ನು ಸಿದ್ಧಪಡಿಸಿ ಅವಶ್ಯಕತೆ ಹಾಗೂ ಕೇಂದ್ರ/ರಾಜ್ಯ ಸರ್ಕಾರದ ಅನುದಾನದ ಲಭ್ಯತೆಗೆ ಅನುಗುಣವಾಗಿ ಹೊಸ ಟೊಮೋಟೋ ಮಾರುಕಟ್ಟೆಯಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಆದ್ಯತೆಯ ಮೇರೆಗೆ ಕ್ರಮ ಕೈಗೊಳ್ಳಲಾಗುತ್ತಿದ್ದು, ಸದರಿ ಯೋಜನೆಗೆ ಪ್ರಸ್ತುತ ಯಾವುದೇ ಹಣ ಬಿಡುಗಡೆಮಾಡಿರುವುದಿಲ್ಲ.

ಸಂಖ್ಯೆ:ಸಿಒ 112 ಎಂಆರ್‌ಇ 2021

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3084
ಸದಸ್ಯರ ಹೆಸರು	ಶ್ರೀ ಸುಬ್ಬಾರೆಡ್ಡಿ ಎಸ್.ಎನ್
ಉತ್ತರಿಸಬೇಕಾದ ದಿನಾಂಕ	19.03.2021
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕಿನಲ್ಲಿ ಜಿಲೆಟಿನ್ ಪೌಡರ್ ಮತ್ತು ಕೇಪ್ ತಯಾರು ಮಾಡುತ್ತಿರುವ ಕಾರ್ಖಾನೆ ಸ್ಥಾಪನೆ ಮಾಡಲು ಪರವಾನಿಗೆ ನೀಡಲಾಗಿದೆಯೇ;	ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕಿನಲ್ಲಿ ಜಿಲೆಟಿನ್ ಪೌಡರ್ ಮತ್ತು ಕೇಪ್ ತಯಾರು ಮಾಡುತ್ತಿರುವ ಕಾರ್ಖಾನೆ ಸ್ಥಾಪನೆ ಮಾಡಲು ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಯಾವುದೇ ಪರವಾನಿಗೆ ನೀಡಿರುವುದಿಲ್ಲ.
ಆ)	ಹಾಗಿದ್ದಲ್ಲಿ ಈ ಕಾರ್ಖಾನೆಯನ್ನು ಯಾವಾಗ ಪ್ರಾರಂಭ ಮಾಡಲಾಗಿದೆ; ಈ ಘಟಕದಲ್ಲಿ ಯಾವ ಯಾವ ವಸ್ತುಗಳ ಸಂಗ್ರಹ ಮಾಡಲು ಮತ್ತು ತಯಾರು ಮಾಡಲು ಅನುಮತಿ ನೀಡಲಾಗಿದೆ;	ಅನ್ವಯಿಸುವುದಿಲ್ಲ.
ಇ)	ಈ ಘಟಕ ಸ್ಥಾಪನೆಗೆ ಅನುಮತಿ ನೀಡಲಾಗಿದೆಯೇ; (ಸಂಪೂರ್ಣ ವಿವರ ನೀಡುವುದು)	ಅನ್ವಯಿಸುವುದಿಲ್ಲ.
ಈ)	ಈ ಸ್ಥಳವು ಗ್ರಾಮಗಳ ಬಳಿ ಇರುವ ಕಾರಣ ಗ್ರಾಮಸ್ಥರುಗಳು ಭಯ ಬೀತರಾಗಿರುವುದರಿಂದ ಘಟಕವನ್ನು ಸ್ಥಳಾಂತರ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು?	ಅನ್ವಯಿಸುವುದಿಲ್ಲ.

ಸಂಖ್ಯೆ ಸಿಐ 194 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3101
2. ಮಾನ್ಯ ಸದಸ್ಯರ ಹೆಸರು : ಶ್ರೀ ಬಂಡೆಪ್ಪ ಖಾಶೆಂಪುರ್
3. ಉತ್ತರಿಸಬೇಕಾದ ದಿನಾಂಕ : 19.03.2021
4. ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ ಮತ್ತು ಸಕ್ಕರೆ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
(ಅ)	ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆ (BSSK) ಪ್ರಸ್ತುತ ಕಾರ್ಯ ನಿರ್ವಹಿಸುತ್ತಿದೆಯೇ;	ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯು ಆರ್ಥಿಕ ಸಂಕಷ್ಟ ಹಾಗೂ ಇತರೆ ಕಾರಣಗಳಿಂದಾಗಿ 2019-20ನೇ ಹಂಗಾಮಿನಿಂದ ಕಬ್ಬು ಅರೆಯುವ ಕಾರ್ಯವನ್ನು ಸ್ಥಗಿತಗೊಳಿಸಿರುತ್ತದೆ.
(ಆ)	ಈ ಕಾರ್ಖಾನೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ಸಕಾಲದಲ್ಲಿ ವೇತನವನ್ನು ಪಾವತಿಸಲಾಗುತ್ತಿದೆಯೇ;	ಕಾರ್ಖಾನೆಯ ಕಬ್ಬು ಅರೆಯುವ ಕಾರ್ಯವು ಕಳೆದೆರಡು ವರ್ಷಗಳಿಂದ ಸ್ಥಗಿತಗೊಂಡಿರುವುದರಿಂದ ನೌಕರರಿಗೆ ಕಳೆದ 35 ತಿಂಗಳುಗಳಿಂದ ವೇತನ ಮತ್ತು ಭತ್ಯೆಗಳನ್ನು ಪಾವತಿಸಿರುವುದಿಲ್ಲ. ಈ ಮೊತ್ತವು ಅಂದಾಜು ರೂ.37.00 ಕೋಟಿಗಳಷ್ಟಿರುತ್ತದೆ.
(ಇ)	ಸದರಿ ಕಾರ್ಖಾನೆಯಲ್ಲಿ ಕಾರ್ಯ ನಿರ್ವಹಣೆಯಲ್ಲಿ ಆಗಿಂದ್ದಾಗ್ಗೆ ಅಡಚಣೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕಾರ್ಖಾನೆಯು 1968-69ನೇ ಸಾಲಿನಲ್ಲಿ ಸ್ಥಾಪನೆಗೊಂಡಿದ್ದು, 52 ವರ್ಷಗಳಷ್ಟು ಹಳೆಯ ಕಾರ್ಖಾನೆಯಾಗಿರುತ್ತದೆ. ಕಾರ್ಖಾನೆ ಸಕ್ಕರೆ ಘಟಕವನ್ನು ಮಾತ್ರ ಹೊಂದಿದ್ದು, ಇತರೆ ಉಪ ಉತ್ಪನ್ನಗಳಾದ ಸಹವಿದ್ಯುತ್/ ಡಿಸ್ಟಿಲರಿ/ ಎಥನಾಲ್ ಘಟಕಗಳನ್ನು ಹೊಂದಿರುವುದಿಲ್ಲ.
(ಈ)	ಬಂದಿದ್ದಲ್ಲಿ, ಸದರಿ ಕಾರ್ಖಾನೆಯನ್ನು ಪುನ:ಶ್ಚೇತನಗೊಳಿಸಲು ಸರ್ಕಾರವು ಅಗತ್ಯ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು)	ಕಾರ್ಖಾನೆ 3500 ಟಿಸಿಡಿ ಸಾಮರ್ಥ್ಯ ಹೊಂದಿದ್ದು, ಪ್ರಸ್ತುತ ಕಾರ್ಖಾನೆಯಲ್ಲಿರುವ ಯಂತ್ರೋಪಕರಣಗಳು ತುಂಬಾ ಹಳೆಯದಾಗಿದ್ದು, ಕಬ್ಬು ಅರೆಯುವ ಸಾಮರ್ಥ್ಯವನ್ನು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಲು ವಿಫಲವಾಗಿರುತ್ತದೆ. ಕಾರ್ಖಾನೆ ದುಡಿಯುವ ಬಂಡವಾಳದ ಕೊರತೆ, ತಾಂತ್ರಿಕ ಮತ್ತು ಆಡಳಿತಾತ್ಮಕ ಕಾರಣಗಳಿಂದಾಗಿ ಕಬ್ಬು ಅರೆಯುವ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ. ಸದರಿ ಕಾರ್ಖಾನೆಗೆ 2017-18ನೇ ಸಾಲಿನಲ್ಲಿ ರೂ.10.00 ಕೋಟಿ ಸಾಲ ಪಡೆಯಲು ರಾಜ್ಯ ಸರ್ಕಾರದ ಖಾತರಿ ನೀಡಲಾಗಿದೆ ಮತ್ತು 2018-19ನೇ ಸಾಲಿನಲ್ಲಿ ರೂ.20.00 ಕೋಟಿಗಳ ದುಡಿಯುವ ಬಂಡವಾಳ ಸಾಲದ ರೂಪದಲ್ಲಿ ಒದಗಿಸಲಾಗಿದೆ. ರಾಜ್ಯ ಸರ್ಕಾರವು ಈ ಕಾರ್ಖಾನೆಗೆ ಇದುವರೆಗೆ ಒಟ್ಟು ರೂ.53.94 ಕೋಟಿಗಳಷ್ಟು ಸಾಲ ಹಾಗೂ ರೂ.4.64 ಕೋಟಿಗಳಷ್ಟು ಷೇರು ಬಂಡವಾಳ ಸೇರಿದಂತೆ ಒಟ್ಟು ರೂ.58.58 ಕೋಟಿಗಳಷ್ಟು ಆರ್ಥಿಕ ನೆರವನ್ನು ನೀಡಿದ್ದರೂ, ಸಹ ಕಾರ್ಖಾನೆಯನ್ನು ಲಾಭದಾಯಕವಾಗಿ ನಡೆಸಲು ಸಾಧ್ಯವಾಗಿರುವುದಿಲ್ಲ. ಕಾರ್ಖಾನೆ ಪ್ರಸ್ತುತ ಹೊಂದಿರುವ ಒಟ್ಟು ಸಾಲ ಮತ್ತು ಜವಾಬ್ದಾರಿಗಳು ರೂ.274.87 ಕೋಟಿಗಳಷ್ಟಿದ್ದು, ಕ್ರೋಢೀಕೃತ ನಷ್ಟ ರೂ.307.00 ಕೋಟಿಗಳಷ್ಟಾಗಿರುತ್ತದೆ. ಆರ್ಥಿಕ ಸಂಕಷ್ಟದಿಂದ ಹಾಗೂ ಇತರೆ ಕಾರಣಗಳಿಂದ ಸ್ಥಗಿತಗೊಂಡಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ಗುತ್ತಿಗೆ ನೀಡುವ ಮೂಲಕ ಪುನಶ್ಚೇತನಗೊಳಿಸುವುದು ರಾಜ್ಯ ಸರ್ಕಾರದ ಪ್ರಚಲಿತ ನೀತಿಯಾಗಿರುತ್ತದೆ. ಈ ಕಾರ್ಖಾನೆಯನ್ನು ಸಹ ಖಾಸಗಿಯವರಿಗೆ ಗುತ್ತಿಗೆ ನೀಡುವುದರ ಬಗ್ಗೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಿಂದ ವರದಿ ಕೋರಲಾಗಿರುತ್ತದೆ. ವರದಿ ಬಂದ ನಂತರ ಸಾಧಕ-ಬಾಧಕಗಳನ್ನು ಪರಿಶೀಲಿಸಿ ಪುನಶ್ಚೇತನಗೊಳಿಸುವ ಬಗ್ಗೆ ಕ್ರಮವಹಿಸಲಾಗುವುದು.

ಸಂಖ್ಯೆ: ಸಿಐ 107 ಸಿಓಎಫ್ 2021

(ಎನ್. ನಾಗರಾಜು(ಎಂ.ಟಿ.ಬಿ.))
ಪೌರಾಡಳಿತ ಮತ್ತು ಸಕ್ಕರೆ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3102
ಸದಸ್ಯರ ಹೆಸರು	ಶ್ರೀ ಬಂಡೆಪ್ಪಾ ಖಾಶಂಪೂರ್
ಉತ್ತರಿಸಬೇಕಾದ ದಿನಾಂಕ	19.03.2021
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಯಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಕಲ್ಲು ಕೈಗಾರಿಕಾ ಘಟಕಗಳೆಷ್ಟು;	ಬೀದರ್ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಸ್ತುತ 33 ಕಟ್ಟಡ ಕಲ್ಲುಗಣಿ ಗುತ್ತಿಗೆಗಳು ಮತ್ತು 34 ಕ್ರಷರ್ ಘಟಕಗಳು ಕಾರ್ಯ ನಿರ್ವಹಿಸುತ್ತಿರುತ್ತವೆ.
ಆ)	ಈ ಘಟಕಗಳು ಸರ್ಕಾರದಿಂದ ಅವಶ್ಯ ಪರವಾನಿಗೆಯನ್ನು ಪಡೆದು ಕಾರ್ಯನಿರ್ವಹಿಸುತ್ತಿವೆಯೇ;	ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ಹಾಗೂ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011 ರಂತೆ ಲೈಸೆನ್ಸ್ ಪಡೆದು ಕಾರ್ಯನಿರ್ವಹಿಸುತ್ತಿರುತ್ತವೆ.
ಇ)	ಪರವಾನಿಗೆ ಪಡೆಯದೇ ಕಾರ್ಯ ನಿರ್ವಹಿಸುತ್ತಿರುವ ಘಟಕಗಳನ್ನು ಸಕ್ರಮಗೊಳಿಸಲು ಸರ್ಕಾರವು ಅಗತ್ಯ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು)	ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆಯನ್ನು ಸಕ್ರಮ ಮಾಡುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಸಂಖ್ಯೆ ಸಿಐ 198 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3104
ಸದಸ್ಯರ ಹೆಸರು : ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)
ಉತ್ತರಿಸುವ ದಿನಾಂಕ : 19.03.2021.
ಉತ್ತರಿಸುವ ಸಚಿವರು : ಮಾನ್ಯ ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ವಾರ್ತಾ ಇಲಾಖೆಗೆ ಕಳೆದ ಮೂರು ವರ್ಷಗಳಲ್ಲಿ ಒದಗಿಸಲಾಗಿರುವ ಅನುದಾನವೆಷ್ಟು ;</td><td>ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಕಳೆದ ಮೂರು ವರ್ಷಗಳಲ್ಲಿ ಒದಗಿಸಲಾಗಿರುವ ಅನುದಾನದ ವಿವರ ಕೆಳಕಂಡಂತಿದೆ :-
(ರೂ.ಲಕ್ಷಗಳಲ್ಲಿ)
<table><tr><th>ಆರ್ಥಿಕ ವರ್ಷ</th><th>ಒದಗಿಸಲಾದ ಅನುದಾನ</th></tr><tr><td>2018-19</td><td>24559.00</td></tr><tr><td>2019-20</td><td>16246.20</td></tr><tr><td>2020-21</td><td>16281.00</td></tr></table></td></tr>
<tr><td>ಆ)</td><td>ಈ ಇಲಾಖೆಗೆ ಒದಗಿಸಿರುವ ಅನುದಾನದಲ್ಲಿ ಸರ್ಕಾರಿ ಕಾರ್ಯಕ್ರಮಗಳು ಮತ್ತು ಯೋಜನೆಗಳ ಜಾಹೀರಾತುಗಳಿಗೆ ಒದಗಿಸಲಾದ ಮೊತ್ತವೆಷ್ಟು ;</td><td>ಇಲಾಖೆಗೆ ಒದಗಿಸಿರುವ ಅನುದಾನದಲ್ಲಿ ಸರ್ಕಾರಿ ಕಾರ್ಯಕ್ರಮಗಳು ಮತ್ತು ಯೋಜನೆಗಳ ಜಾಹೀರಾತುಗಳಿಗೆ ಒದಗಿಸಲಾದ ಮೊತ್ತ ಕೆಳಕಂಡಂತಿದೆ :-
<table><tr><th>ಆರ್ಥಿಕ ವರ್ಷ</th><th>ಒದಗಿಸಲಾದ ಮೊತ್ತ</th></tr><tr><td>2018-19</td><td>4000.00</td></tr><tr><td>2019-20</td><td>4000.00</td></tr><tr><td>2020-21</td><td>9600.00</td></tr></table></td></tr>
<tr><td>ಇ)</td><td>ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ಕಾರ್ಯಕ್ರಮಗಳು ಮತ್ತು ಯೋಜನೆಗಳ ಪ್ರಚಾರಕ್ಕಾಗಿ ಇಲಾಖೆಯು ವೆಚ್ಚ ಮಾಡಿರುವ ಮೊತ್ತವೆಷ್ಟು ? (ವಿವರವಾದ ಮಾಹಿತಿಯನ್ನು ನೀಡುವುದು).</td><td>ಕಳೆದ ಮೂರು ವರ್ಷಗಳಲ್ಲಿ ಸರ್ಕಾರಿ ಕಾರ್ಯಕ್ರಮಗಳು ಮತ್ತು ಯೋಜನೆಗಳ ಪ್ರಚಾರಕ್ಕಾಗಿ ಇಲಾಖೆಯು ವೆಚ್ಚ ಮಾಡಿರುವ ಮೊತ್ತದ ವಿವರ ಕೆಳಕಂಡಂತಿದೆ :-
<table><tr><th>ಆರ್ಥಿಕ ವರ್ಷ</th><th>ಮಾಡಿರುವ ವೆಚ್ಚ</th></tr><tr><td>2018-19</td><td>7607.00</td></tr><tr><td>2019-20</td><td>6280.00</td></tr><tr><td>2020-21</td><td>10290.00</td></tr></table></td></tr>
</table>

KCI-PIP/87/2021-INFO-KC-SEC

(ಸಿ.ಸಿ.ಪಾಟೀಲ್)
ಮಾನ್ಯ ಸಣ್ಣ ಕೈಗಾರಿಕೆ ಹಾಗೂ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3116
2. ಸದಸ್ಯರ ಹೆಸರು : ಶ್ರೀ ಬೆಳ್ಳಿಪ್ರಕಾಶ್ (ಕಡೂರು)
3. ಉತ್ತರಿಸುವ ದಿನಾಂಕ : 19.03.2021
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಕಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗಾರಿಕಾ ಪ್ರದೇಶಾಭಿವೃದ್ಧಿ ಕುರಿತು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; (ವಿವರ ನೀಡುವುದು)	ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು, ಕಸಬಾ ಹೋಬಳಿ, ನಗದಿಯತ್‌ಕಾವಲ್ / ತಂಗಲಿಕಾವಲ್ ಗ್ರಾಮಗಳ ಒಟ್ಟು 236-38 ಎಕರೆ ಜಮೀನನ್ನು ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು ಕೆ.ಐ.ಎ.ಡಿ. ಕಾಯ್ದೆ ಕಲಂ 28(4)ರಡಿ ಅಂತಿಮ ಅಧಿಸೂಚನೆಯನ್ನು ದಿನಾಂಕ: 25.11.2017ರಂದು ಹೊರಡಿಸಲಾಗಿದೆ. ಈ ಪೈಕಿ 82-15 ಎಕರೆ ಹಿಡುವಳಿ ಜಮೀನಿನ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡಿದ್ದು, ಈ ಜಮೀನನ್ನು ದಿನಾಂಕ: 09.07.2019ರಂದು ಕೆ.ಐ.ಎ.ಡಿ.ಬಿ.ಯ ಸುಪರ್ದಿಗೆ ಪಡೆಯಲಾಗಿದೆ. ಉಳಿಕೆ 154-23 ಎಕರೆ ಸರ್ಕಾರಿ ಜಮೀನನ್ನು ಕೆ.ಐ.ಎ.ಡಿ.ಬಿ.ಗೆ ಮಂಜೂರು ಮಾಡಿ ಹಸ್ತಾಂತರಿಸುವಂತೆ ಜಿಲ್ಲಾಧಿಕಾರಿ, ಚಿಕ್ಕಮಗಳೂರು ಜಿಲ್ಲೆ ಇವರನ್ನು ಕೋರಲಾಗಿದ್ದು, ಸದರಿ ಜಮೀನು ಮಂಡಳಿಗೆ ಹಸ್ತಾಂತರವಾದ ಕೂಡಲೇ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗುತ್ತದೆ.
(ಆ)	ಹಾಗಿದ್ದಲ್ಲಿ, ಪ್ರಸ್ತಾವನೆ ಯಾವ ಹಂತದಲ್ಲಿದೆ; ಈ ವಿಧಾನಸಭಾ ಕ್ಷೇತ್ರದಲ್ಲಿ ಕೈಗಾರಿಕಾ ವಸಾಹತು ನಿರ್ಮಾಣ ಮಾಡಲು ಸರ್ಕಾರ ಸ್ಥಳ ಗುರುತಿಸಲಾಗಿದೆಯೇ; ಹಾಗಿದ್ದಲ್ಲಿ, ಕೈಗಾರಿಕಾ ಪ್ರದೇಶಾಭಿವೃದ್ಧಿಗೆ ಸರ್ಕಾರ ನಿಗಧಿಪಡಿಸಿರುವ ಮಾನದಂಡಗಳೇನು; (ವಿವರ ನೀಡುವುದು)	
(ಇ)	ಪ್ರಸಕ್ತ ಸಾಲಿನಲ್ಲಿ ಕೈಗಾರಿಕಾ ಪ್ರದೇಶಾಭಿವೃದ್ಧಿ ಕುರಿತು ಸರ್ಕಾರ ಕ್ರಮ ಕೈಗೊಳ್ಳುವುದೇ; ಹಾಗಿದ್ದಲ್ಲಿ, ಕಡೂರು ತಾಲ್ಲೂಕಿನಲ್ಲಿ ಯಾವಾಗ ಕೈಗಾರಿಕಾ ಪ್ರದೇಶವನ್ನು ನಿರ್ಮಾಣ ಮಾಡಲಾಗುವುದು? (ಸಂಪೂರ್ಣ ವಿವರಗಳನ್ನು ನೀಡುವುದು)	

ಸಂಖ್ಯೆ: ಸಿಐ 96 ಐಎಪಿ (ಇ) 2021

(ಜಗದೀಶ ಶೆಟ್ಟರ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3117
ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ಆನಂದ್ ಸಿದ್ದು ನ್ಯಾಮಗೌಡ (ಜಮಖಂಡಿ)
ಉತ್ತರಿಸಬೇಕಾದ ದಿನಾಂಕ	:	19.03.2021
ಉತ್ತರಿಸುವ ಸಚಿವರು	:	ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಜಮಖಂಡಿ ವಿಧಾನಸಭಾ ಕ್ಷೇತ್ರದಲ್ಲಿರುವ ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ಪಡಿತರ ಚೀಟಿಗಳು ಎಷ್ಟು; (ಹೋಬಳಿವಾರು ವಿವರ ನೀಡುವುದು)</td><td>ಜಮಖಂಡಿ ವಿಧಾನಸಭಾ ಕ್ಷೇತ್ರದಲ್ಲಿರುವ ಆದ್ಯತಾ (ಬಿಪಿಎಲ್) ಮತ್ತು ಆದ್ಯತೇತರ (ಎಪಿಎಲ್) ಪಡಿತರ ಚೀಟಿಗಳ ವಿವರ ಕೆಳಗಿನಂತಿದೆ.
<table>
<tr><th>ಹೋಬಳಿ ಹೆಸರು</th><th>ಅಂತ್ಯೋದಯ</th><th>ಆದ್ಯತಾ</th><th>ಆದ್ಯತೇತರ</th><th>ಒಟ್ಟು</th></tr>
<tr><td>ಜಮಖಂಡಿ</td><td>2987</td><td>34136</td><td>7089</td><td>44212</td></tr>
<tr><td>ಸಾವಳಗಿ</td><td>1179</td><td>21514</td><td>3867</td><td>26560</td></tr>
<tr><td>ಒಟ್ಟು</td><td>4166</td><td>55650</td><td>10956</td><td>70772</td></tr>
</table></td></tr>
<tr><td>ಆ</td><td>ಪ್ರತಿ ತಿಂಗಳು ಬಿ.ಪಿ.ಎಲ್ ಪಡಿತರ ಚೀಟಿದಾರರಿಗೆ ವಿತರಣೆ ಮಾಡುತ್ತಿರುವ ಅಕ್ಕಿಯ ಪ್ರಮಾಣ ಎಷ್ಟು; ಪ್ರತಿ ತಿಂಗಳು ಅನ್ನಭಾಗ್ಯ ಯೋಜನೆಯಲ್ಲಿ ವಿತರಣೆ ಮಾಡುತ್ತಿರುವ ಅಕ್ಕಿಯ ಪ್ರಮಾಣ ಎಷ್ಟು; ಜಮಖಂಡಿ ತಾಲ್ಲೂಕಿನಲ್ಲಿರುವ ಸರ್ಕಾರಿ ನ್ಯಾಯ ಬೆಲೆ ಅಂಗಡಿಗಳು ಎಷ್ಟು; (ಹೋಬಳಿವಾರು ಮಾಹಿತಿ ನೀಡುವುದು)</td><td>ಪ್ರತಿ ಅಂತ್ಯೋದಯ ಪಡಿತರ ಚೀಟಿಗೆ 35 ಕೆ.ಜಿ ಅಕ್ಕಿ ಆದ್ಯತಾ ಪಡಿತರ ಚೀಟಿಯ ಪ್ರತಿ ಸದಸ್ಯರಿಗೆ 5 ಕೆ.ಜಿ ಅಕ್ಕಿಯನ್ನು ವಿತರಿಸಲಾಗುತ್ತಿದೆ.
ಪ್ರತಿ ತಿಂಗಳು ಅನ್ನಭಾಗ್ಯ ಯೋಜನೆಯಡಿಯಲ್ಲಿ 10624.40 ಕ್ವಿಂ. ಪ್ರಮಾಣದ ಅಕ್ಕಿಯನ್ನು ವಿತರಣೆ ಮಾಡಲಾಗುತ್ತಿದೆ.
ಜಮಖಂಡಿ ತಾಲ್ಲೂಕಿನಲ್ಲಿರುವ ಸರ್ಕಾರಿ ನ್ಯಾಯಬೆಲೆ ಅಂಗಡಿಗಳ ವಿವರ ಕೆಳಗಿನಂತಿದೆ.
<table>
<tr><th>ಹೋಬಳಿ ಹೆಸರು</th><th>ನ್ಯಾಯಬೆಲೆ ಅಂಗಡಿಗಳ ಸಂಖ್ಯೆ</th></tr>
<tr><td>ಜಮಖಂಡಿ</td><td>43</td></tr>
<tr><td>ಸಾವಳಗಿ</td><td>24</td></tr>
<tr><td>ಒಟ್ಟು</td><td>67</td></tr>
</table></td></tr>
<tr><td>ಇ</td><td>ವಿತರಣೆ ಮಾಡುತ್ತಿರುವ ಅಕ್ಕಿಯ ಪ್ರಮಾಣವನ್ನು ಕಡಿಮೆ ಮಾಡಲು ಕಾರಣವೇನು?</td><td>ವಿತರಣೆ ಮಾಡುತ್ತಿರುವ ಅಕ್ಕಿಯ ಪ್ರಮಾಣವನ್ನು ಕಡಿಮೆ ಮಾಡಲಾಗಿರುವುದಿಲ್ಲ.</td></tr>
</table>

ಆನಾಸ 122 ಡಿಆರ್ಎ 2021 (ಇ-ಆಫೀಸ್)

(ಉಮೇಶ್ ವಿ ಕತ್ತಿ)

ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3122
ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)
ಉತ್ತರಿಸಬೇಕಾದ ದಿನಾಂಕ	:	19.03.2021
ಉತ್ತರಿಸುವ ಸಚಿವರು	:	ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಬಿಪಿಎಲ್ ಕಾರ್ಡ್ ನೀಡುವ ಕುರಿತು ಜಾರಿಯಲ್ಲಿರುವ ಅರ್ಹತಾ ನಿಯಮಗಳಲ್ಲಿ ಬದಲಾವಣೆಗಳನ್ನು ತರುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಇಲ್ಲ
ಆ	ಕಳೆದ ಎರಡು ವರ್ಷಗಳಲ್ಲಿ ಅರ್ಹತೆಯನ್ನು ಹೊಂದಿರುವ ಎಷ್ಟು ಫಲಾನುಭವಿಗಳಿಗೆ ಬಿಪಿಎಲ್ ಕಾರ್ಡ್ ನೀಡಲಾಗಿದೆ; ಅನರ್ಹ ಕಾರ್ಡ್ ಹೊಂದಿರುವ ಎಷ್ಟು ಫಲಾನುಭವಿಗಳ ಕಾರ್ಡ್‌ಗಳನ್ನು ಅಕ್ರಮ ಕಾರ್ಡ್‌ಗಳೆಂದು ಗುರುತಿಸಿ, ರದ್ದುಪಡಿಸಲಾಗಿದೆ;	ಕಳೆದ ಎರಡು ವರ್ಷಗಳಲ್ಲಿ ಒಟ್ಟು **329926** ಆದ್ಯತಾ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. **5139** ಅಂತ್ಯೋದಯ ಅನ್ನ ಪಡಿತರ ಚೀಟಿಗಳು ಹಾಗೂ **160464** ಅನರ್ಹ ಆದ್ಯತಾ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಿ ರದ್ದುಪಡಿಸಲಾಗಿದೆ.
ಇ	ಅರ್ಹ ಫಲಾನುಭವಿಗಳಿಗೆ ತ್ವರಿತಗತಿಯಲ್ಲಿ ಕಾರ್ಡ್ ನೀಡಲು ಸರ್ಕಾರದ ಕ್ರಮಗಳೇನು?	ಆದ್ಯತೇತರ ಪಡಿತರ ಚೀಟಿಗಳನ್ನು ತಕ್ಷಣವೇ ವಿತರಿಸಲಾಗುತ್ತಿದೆ. ಆದ್ಯತಾ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿದ ಅರ್ಹ ಕುಟುಂಬಗಳ ವಾಸಸ್ಥಳ ತನಿಖೆ ಮಾಡಿದ ನಂತರ ಪಡಿತರ ಚೀಟಿಯನ್ನು ವಿತರಣೆ ಮಾಡಲಾಗುತ್ತದೆ.

ಆನಾಸ 123 ಡಿಆರ್‌ಎ 2021 (ಇ-ಆಫೀಸ್)

(ಉಮೇಶ ವಿ. ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3125

ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಖಾದರ್ ಯು.ಟಿ. (ಮಂಗಳೂರು)

ಉತ್ತರಿಸಬೇಕಾದ ದಿನಾಂಕ : 19.03.2021

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಎ.ಪಿ.ಎಲ್ ಪಡಿತರ ಚೀಟಿ ಹೊಂದಿದ್ದು, ಬಿ.ಪಿ.ಎಲ್ ಪಡಿತರ ಚೀಟಿ ಪಡೆಯಲು ಅರ್ಹರಾಗಿರುವವರು ಬಿ.ಪಿ.ಎಲ್ ಗೆ ಅರ್ಜಿ ಸಲ್ಲಿಸಬೇಕಾದರೆ ಪ್ರಸ್ತುತ ಹೊಂದಿರುವ ಪಡಿತರ ಚೀಟಿಯನ್ನು ರದ್ದುಪಡಿಸಿ, ಹೊಸತಾಗಿ ಅರ್ಜಿ ಸಲ್ಲಿಸುವಂತೆ ತಿಳಿಸುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಬಿ.ಪಿ.ಎಲ್ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಟ್ಟಿದ್ದರೂ ಎ.ಪಿ.ಎಲ್ ರದ್ದುಪಡಿಸಲು ತಂತ್ರಾಂಶದಲ್ಲಿ ಈಗ ಅವಕಾಶಗಳಿಲ್ಲವೆಂದು ತಿಳಿದುಬಂದಿದ್ದು, ಹೀಗಾದಲ್ಲಿ ಅರ್ಹರು ಹೇಗೆ ಅರ್ಜಿ ಸಲ್ಲಿಸಲು ಸಾಧ್ಯವಾಗುತ್ತದೆ? (ಮಾಹಿತಿ ನೀಡುವುದು)	ಯಾವುದೇ ವ್ಯಕ್ತಿ ಆದ್ಯತೇತರ ಪಡಿತರ ಚೀಟಿ ಹೊಂದಿದ್ದು, ಆದ್ಯತಾ ಪಡಿತರ ಚೀಟಿಗೆ ಅರ್ಹರಾಗಿದ್ದರೆ, ಅಂತಹವರು ಸಕ್ಷಮ ಪ್ರಾಧಿಕಾರಕ್ಕೆ ಸಕಾಲ ಯೋಜನೆಯಡಿ ಅರ್ಜಿ ಸಲ್ಲಿಸಿ ತಾವು ಹೊಂದಿರುವ ಪಡಿತರ ಚೀಟಿಯನ್ನು ರದ್ದು ಮಾಡಲು ಕೋರಬಹುದು. ಅನಂತರ ಹೊಸದಾಗಿ ಪಡಿತರ ಚೀಟಿಗೆ ಆನ್ ಲೈನ್ ಅರ್ಜಿ ಸಲ್ಲಿಸಬೇಕು. ಅಥವಾ ಆದ್ಯತಾ ಪಡಿತರ ಚೀಟಿಗೆ ಹೊಸದಾಗಿ ಆನ್‌ಲೈನ್ ಅರ್ಜಿ ಸಲ್ಲಿಸುವಾಗ ಚಾಲ್ತಿಯಿರುವ ಆದ್ಯತೇತರ ಪಡಿತರ ಚೀಟಿಯಲ್ಲಿರುವ ಹೆಸರು ತೆಗೆದು ಹಾಕಲು ಸಹ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ.

ಆನಾಸ 124 ಡಿಆರ್‌ಎ 2021 (ಇ-ಆಫೀಸ್)

(ಉಮೇಶ್ ವಿ ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	3140
ಸದಸ್ಯರ ಹೆಸರು :	ಶ್ರೀ ವೆಂಕಟರಮಣಯ್ಯ ಟಿ. (ದೊಡ್ಡಬಳ್ಳಾಪುರ)
ಉತ್ತರಿಸಬೇಕಾದ ದಿನಾಂಕ :	19-03-2021
ಉತ್ತರಿಸುವವರು :	ಪೌರಾಡಳಿತ ಮತ್ತು ಸಕ್ಕರೆ ಸಚಿವರು

ಕ್ರ.ಸ	ಪ್ರಶ್ನೆ	ಉತ್ತರ
ಅ)	ದೊಡ್ಡಬಳ್ಳಾಪುರ ನಗರಸಭೆಯ ಕೊಳಚೆ ನೀರು ಶುದ್ಧೀಕರಣ ಸಂಸ್ಕರಣ ಘಟಕದ ಕೆಟ್ಟ ವಾಸನೆಯಿಂದ ಮಜರಾಹೊಸಹಳ್ಳಿ ಗ್ರಾಮದ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಶುದ್ಧ ಗಾಳಿ ದೊರೆಯದೇ ವಾಸಿಸಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ದೊಡ್ಡಬಳ್ಳಾಪುರ ನಗರಸಭೆಯ ಕೊಳಚೆ ನೀರು ಶುದ್ಧೀಕರಣ ಘಟಕದ ಕೆಟ್ಟ ವಾಸನೆಯಿಂದ ಗ್ರಾಮದ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಶುದ್ಧ ಗಾಳಿ ದೊರೆಯದೇ ವಾಸಿಸಲು ತೊಂದರೆಯಾಗುತ್ತಿರುವುದರ ಬಗ್ಗೆ ನಗರಸಭೆ ಗಮನಕ್ಕೆ ಬಂದಿರುತ್ತದೆ.
ಆ)	ಹಾಗಿದ್ದಲ್ಲಿ, ಹಾಲಿ ಕಾರ್ಯನಿರ್ವಹಿಸುತ್ತಿರುವ ಕೊಳಚೆ ನೀರು ಶುದ್ಧೀಕರಣ ಘಟಕವನ್ನು ಆಧುನೀಕರಿಸಲು ಹಾಗು ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು	ನಗರ ಸ್ಥಳೀಯ ಸಂಸ್ಥೆ ದೊಡ್ಡಬಳ್ಳಾಪುರದಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸದೇ ಇದ್ದ ಮೋಟಾರ್‌ಗಳನ್ನು ದುರಸ್ಥಿಪಡಿಸಿ ಚಾಲನೆ ನೀಡಲಾಗಿರುತ್ತದೆ ಮತ್ತು ಶುದ್ಧೀಕರಣ ಘಟಕದ ಪಾಂಡ್‌ಗಳಲ್ಲಿ ತುಂಬಿಕೊಂಡಿರುವ ಹೂಳನ್ನು ಹೊರ ತೆಗೆಯಲು ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ. ಮುಂದುವರೆದು ಎಸ್.ಟಿ.ಪಿ ಘಟಕವನ್ನು ಆಧುನೀಕರಿಸಿ ಮೇಲ್ದರ್ಜೆಗೇರಿಸಲು ಬೇಕಾಗುವ ಸಮಗ್ರ ಯೋಜನಾ ವರದಿ ತಯಾರಿಸಲು ನುರಿತ ತಜ್ಞರೊಂದಿಗೆ ಚರ್ಚಿಸಿ ಕ್ರಮಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ನಅಇ 49 ಜಿಇಎಲ್ 2021

(ಎನ್.ನಾಗರಾಜು, ಎಂ.ಟಿ.ಬಿ)
ಪೌರಾಡಳಿತ ಮತ್ತು ಸಕ್ಕರೆ ಸಚಿವರು

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3149
2. ಸದಸ್ಯರ ಹೆಸರು : ಶ್ರೀ ಮಸಾಲ ಜಯರಾಮ್ (ತುರುವೇಕೆರೆ)
3. ಉತ್ತರಿಸುವ ದಿನಾಂಕ : 19.03.2021
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ತುರುವೇಕೆರೆ ತಾಲ್ಲೂಕಿನಲ್ಲಿ ಕೆ.ಐ.ಎ.ಡಿ.ಬಿ. ವತಿಯಿಂದ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲು ಸಲ್ಲಿಸಲಾದ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ;	ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕಿನಲ್ಲಿ ಕೈಗಾರಿಕಾ ಪ್ರದೇಶ ಸ್ಥಾಪನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.
(ಆ)	ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ಹಾಗೂ ಇದಕ್ಕೆ ಇರುವ ಮಾನದಂಡಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಉದ್ಭವಿಸುವುದಿಲ್ಲ.

ಸಂಖ್ಯೆ: ಸಿಐ 98 ಐಎಪಿ (ಇ) 2021

(ಜಗದೀಶ ಶೆಟ್ಟರ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3152
ಸದಸ್ಯರ ಹೆಸರು	ಶ್ರೀ ರಾಜೇಗೌಡ ಟಿ.ಡಿ
ಉತ್ತರಿಸಬೇಕಾದ ದಿನಾಂಕ	19.03.2021.
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರ
ಅ)	ಇತ್ತೀಚೆಗೆ ಬಡವರಿಗಾಗಿ ಫ್ರೀ ಸ್ಯಾಂಡ್ ಪಾಲಿಸಿ ತರಲು ಚಿಂತನೆ ನಡೆಸುತ್ತಿರುವುದಾಗಿ ತಿಳಿಸಿದ್ದು, ಈ ಯೋಜನೆ ಜಾರಿಗೆ ತರುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು)	ಗ್ರಾಮ ಪಂಚಾಯಿತಿ ವ್ಯಾಪ್ತಿಯ I, II & III ನೇ ಶ್ರೇಣಿಯ ಹಳ್ಳಗಳ ಪಾತ್ರಗಳಲ್ಲಿ ದೊರೆಯುವ ಮರಳನ್ನು ಉಚಿತವಾಗಿ ತೆಗೆದು ಎತ್ತಿನ ಗಾಡಿ ಮತ್ತು ಟ್ರ್ಯಾಕ್ಟರ್ ಗಳ ಮೂಲಕ ಸಾಗಾಣಿಕೆ ಮಾಡಿ ಸ್ಥಳೀಯ ಯಾವುದೇ ಸಾರ್ವಜನಿಕ ಮತ್ತು ಸರ್ಕಾರಿ ಕಾಮಗಾರಿಗಳಿಗೆ ಬಳಸಿಕೊಳ್ಳಲು ಅನುಮತಿ ನೀಡುವ ಕುರಿತು ಪರಿಶೀಲಿಸಲಾಗುತ್ತಿದೆ.
ಆ)	ಇದರಿಂದ ರಾಜ್ಯದಲ್ಲಿ ಮರಳು ಅಭಾವ ಸೃಷ್ಟಿಯಾಗುವುದಿಲ್ಲವೆ;	ಮರಳಿನ ಪೂರೈಕೆಯಲ್ಲಿ ವ್ಯತ್ಯಯವಾದಲ್ಲಿ ಮಾತ್ರ ಮರಳಿನ ಅಭಾವ ಸೃಷ್ಟಿಯಾಗುವ ಸಾಧ್ಯತೆ ಇರುತ್ತದೆ. ಕಾಮಗಾರಿಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಉಚಿತವಾಗಿ ಮರಳು ನೀಡುವುದರಿಂದ ಮರಳಿನ ಅಭಾವ ಸೃಷ್ಟಿಯಾಗುವ ಸಾಧ್ಯತೆ ಇರುವುದಿಲ್ಲ.
ಇ)	ಮರಳು ಅಭಾವ ಎದುರಾದಲ್ಲಿ ಸರ್ಕಾರ ಯಾವ ರೀತಿಯ ಕ್ರಮ ಕೈಗೊಳ್ಳಲಿದೆ;	ಅಗತ್ಯಕ್ಕೆ ತಕ್ಕಂತೆ ಉಚಿತವಾಗಿ ಮರಳು ನೀಡುವುದರಿಂದ ಮರಳಿನ ಅಭಾವ ಸೃಷ್ಟಿಯಾಗುವ ಸಾಧ್ಯತೆ ಇರುವುದಿಲ್ಲ.
ಈ)	ಈ ಯೋಜನೆಯ ರೂಪು–ರೇಷೇಗಳೇನು; ಯಾವ ಕಾಲಮಿತಿಯೊಳಗೆ ಯೋಜನೆ ಅನುಷ್ಠಾನಗೊಳಿಸಲಾಗುತ್ತದೆ?	ಈಗಾಗಲೇ ಆಂಧ್ರಪ್ರದೇಶ ರಾಜ್ಯದಲ್ಲಿ ಸ್ಥಳೀಯ ಕಾಮಗಾರಿಗೆ ಉಚಿತವಾಗಿ ಮರಳು ನೀಡುತ್ತಿರುವ ಮರಳು ನೀತಿ ಕುರಿತು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳ ತಂಡವು ಭೇಟಿ ನೀಡಿ, ಪರಿಶೀಲಿಸಿ, ಅಧ್ಯಯನ ನಡೆಸಿ, ವರದಿ ನೀಡಿರುತ್ತದೆ. ಸದರಿ ವರದಿಯನ್ನಾಧರಿಸಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ್ಥಳೀಯ ಕಾಮಗಾರಿಗಳಿಗೆ ಉಚಿತವಾಗಿ ಮರಳು ನೀಡುವ ಕುರಿತು ಸಾಧಕ ಭಾದಕಗಳ ಬಗ್ಗೆ ಕುಲಂಕಶವಾಗಿ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ ಸಿಐ 207 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3156
ಸದಸ್ಯರ ಹೆಸರು : ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ)
ಉತ್ತರಿಸಬೇಕಾದ ದಿನಾಂಕ : 19.03.2021.
ಉತ್ತರಿಸುವವರು : ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಸಣ್ಣ ಕೈಗಾರಿಕೆ ಇಲಾಖೆಯಿಂದ ನಿರ್ಮಿಸಿದ್ದ ವಿಶ್ವ ಷೆಡ್‌ಗಳು ಮತ್ತು ಇತರೆ ಷೆಡ್‌ಗಳನ್ನು ಬೇರೆಯವರಿಗೆ ಕೊಡುವ ಉದ್ದೇಶ ಸರ್ಕಾರಕ್ಕಿದೆಯೇ;	ರಾಜ್ಯದಲ್ಲಿ ಸಣ್ಣ ಕೈಗಾರಿಕೆ ಇಲಾಖೆಯಿಂದ ನಿರ್ಮಿಸಿದ ವಿಶ್ವ ಷೆಡ್‌ಗಳು ಮತ್ತು ಇತರೆ ಷೆಡ್‌ಗಳನ್ನು ಬೇರೆಯವರಿಗೆ ಕೊಡುವ ಉದ್ದೇಶ ಇರುತ್ತದೆ.
ಆ)	ಹಾಗಿದ್ದಲ್ಲಿ, ಕಾರಣಗಳೇನು;	ಗ್ರಾಮೀಣ ಕುಶಲಕರ್ಮಿಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ 1992-93ನೇ ಸಾಲಿನಲ್ಲಿ ಸರ್ಕಾರದ ವಿಶ್ವ ಯೋಜನೆ ಅಡಿಯಲ್ಲಿ ಕೆ.ಎಸ್.ಎಸ್.ಐ.ಡಿ.ಸಿ. ನಿಗಮದ ಮೂಲಕ 809 ವಿಶ್ವ/ಕಾಯರ್ ಮಳಿಗೆಗಳನ್ನು ನಿರ್ಮಿಸಲಾಗಿರುತ್ತದೆ. ಕೆಲವು ಮಳಿಗೆಗಳನ್ನು ಈ ಹಿಂದೆ ಬಾಡಿಗೆ ಆಧಾರದಲ್ಲಿ ನೀಡಲಾಗಿದ್ದು, ಬಾಡಿಗೆಯೂ ಸರಿಯಾಗಿ ಪಾವತಿಯಾಗದ ಕಾರಣ, ನಿಗಮಕ್ಕೆ ವಾಪಸ್ ಪಡೆಯಲಾಗಿರುತ್ತದೆ. ಹಾಗಾಗಿ ಒಟ್ಟು 361 ಮಳಿಗೆಗಳು ಹಂಚಿಕೆಯಾಗದೇ ನಿಗಮದಲ್ಲಿ ಖಾಲಿ ಉಳಿದಿರುತ್ತವೆ. ಇದುವರೆಗೂ ಹಂಚಿಕೆ ಆಗದೇ ಇರುವ ಕಾರಣ, ಮಹಾಲೇಖಪಾಲರವರಿಂದ ಆಕ್ಷೇಪಣೆಗಳು ಬಂದಿರುತ್ತವೆ. ಮುಂದುವರೆದು, ವಿಶ್ವ ಮಳಿಗೆಗಳು ಅತಿ ಹಿಂದುಳಿದ ಗ್ರಾಮೀಣ ಪ್ರದೇಶಗಳಲ್ಲಿ ನಿರ್ಮಿಸಲಾಗಿದ್ದು ಮತ್ತು ಹಲವು ಮಳಿಗೆಗಳನ್ನು ಗ್ರಾಮಪಂಚಾಯಿತಿಗೆ ಸೇರಿರುವ ಜಾಗದಲ್ಲಿ ನಿರ್ಮಿಸಲಾಗಿರುವ ಕಾರಣ, ಖಾಲಿ ಇರುವ 361 ವಿಶ್ವ ಮಳಿಗೆಗಳನ್ನು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ (RDPR) ಇಲಾಖೆಗೆ ಹಸ್ತಾಂತರಿಸಲು ನಿಗಮದ ಮಂಡಳಿ ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ.
ಇ)	ರಾಜ್ಯದಲ್ಲಿರುವ ವಿಶ್ವ ಷೆಡ್‌ಗಳ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು)	ರಾಜ್ಯದಲ್ಲಿರುವ ವಿಶ್ವ ಮಳಿಗೆಗಳ ಒಟ್ಟು ಸಂಖ್ಯೆ 809 ಇರುತ್ತದೆ. ಮಾಹಿತಿಯನ್ನು **ಅನುಬಂಧ-1**ರಲ್ಲಿ ನೀಡಿದೆ.
ಈ)	ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ವಿಶ್ವ ಷೆಡ್‌ಗಳು ಇವೆ? (ವಿವರ ನೀಡುವುದು)	ನಿಗಮದ ವತಿಯಿಂದ ನಿರ್ಮಿಸಿರುವ ವಿಶ್ವ ಮಳಿಗೆಗಳ ಜಿಲ್ಲಾವಾರು ವಿವರಣಾಪಟ್ಟಿಯನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ.

ಸಿಐ 42 ಸಿಎಸ್‌ಸಿ 2021

(ಸಿ.ಸಿ. ಪಾಟೀಲ್)
ಸಣ್ಣ ಕೈಗಾರಿಕೆ ಹಾಗೂ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3162
ಸದಸ್ಯರ ಹೆಸರು	ಶ್ರೀ ರಘುಪತಿ ಭಟ್ ಕೆ.
ಉತ್ತರಿಸಬೇಕಾದ ದಿನಾಂಕ	19.03.2021.
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ. ಸಂ.	ಪ್ರಶ್ನೆಗಳು	ಉತ್ತರ
ಅ)	ರಾಜ್ಯದ ಕರಾವಳಿ ಭಾಗದಲ್ಲಿ ಪ್ರತ್ಯೇಕ ಮರಳು ನೀತಿ ರೂಪಿಸುವಲ್ಲಿ ಇಲಾಖೆ ಕೈಗೊಂಡ ಕ್ರಮಗಳೇನು; ಈ ಹಿಂದೆ ಸಚಿವರು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವ ಭರವಸೆ ನೀಡಿರುವಂತೆ ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿದೆ; (ಸಂಪೂರ್ಣ ವಿವರಗಳನ್ನು ಒದಗಿಸುವುದು)	ಕರಾವಳಿ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಮರಳು ನೀತಿ ರೂಪಿಸುವ ಬಗ್ಗೆ ಸರ್ಕಾರದಿಂದ ಸಾಧಕ ಬಾಧಕಗಳ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ.
ಆ)	ರಾಜ್ಯದ ಕರಾವಳಿ ಭಾಗದಲ್ಲಿ ಮರಳು ತೆಗೆಯುವಲ್ಲಿ ಕರಾವಳಿ ನಿಯಂತ್ರಣ ವಲಯ (CRZ) ಮತ್ತು ಕರಾವಳಿ ನಿಯಂತ್ರಣ ವಲಯ (Non CRZ) ಎಂದು ಗುರುತಿಸಿರುವುದನ್ನು ಗಮನಿಸಲಾಗಿದೆಯೇ;	ಗಮನಿಸಲಾಗಿರುತ್ತದೆ.
ಇ)	ಪ್ರಸ್ತುತ, ರಾಜ್ಯದ ಕರಾವಳಿ ಭಾಗದ ಜಿಲ್ಲೆಗಳಲ್ಲಿ ಮರಳು ತೆಗೆಯುವಲ್ಲಿ ಜಾರಿಗೊಳಿಸಿರುವ ಮರಳು ನೀತಿಯಲ್ಲಿ ಇರುವ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ಕರಾವಳಿ ಭಾಗದ 3 ಜಿಲ್ಲೆಗಳಿಗೆ ಪ್ರತ್ಯೇಕ ಮರಳು ನೀತಿಯನ್ನು ಜಾರಿಗೊಳಿಸುವಲ್ಲಿ ಸರ್ಕಾರ ನಿಲುವೇನು?	ಕರಾವಳಿ ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಪ್ರತ್ಯೇಕ ಮರಳು ನೀತಿ ರೂಪಿಸುವ ಬಗ್ಗೆ ಸಾಧಕ ಬಾಧಕಗಳ ಕುರಿತು ಪರಿಶೀಲನೆ ನಡಸಲಾಗುತ್ತಿದೆ.

ಸಂಖ್ಯೆ ಸಿಐ 208 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3266

ವಿಧಾನ ಸಭೆ ಸದಸ್ಯರ ಹೆಸರು : ಶ್ರೀಮತಿ ಲಕ್ಷ್ಮೀ ಆರ್.ಹೆಬ್ಬಾಳ್ಕರ್ (ಬೆಳಗಾಂ ಗ್ರಾಮಾಂತರ)

ಉತ್ತರಿಸಬೇಕಾದ ದಿನಾಂಕ : 19.03.2021

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	'ಅನ್ನಭಾಗ್ಯ' ಯೋಜನೆಯಡಿ ಪ್ರತಿ ತಿಂಗಳು ಎಷ್ಟು ಪ್ರಮಾಣದ ಅಕ್ಕಿಯನ್ನು ಖರೀದಿಸುತ್ತದೆ;	ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ಆಹಾರ ಭದ್ರತೆ ಕಾಯಿದೆಯಡಿ ರಾಜ್ಯಕ್ಕೆ ಪ್ರತಿ ಮಾಹೆ 217403 ಎಂ.ಟಿ ಅಕ್ಕಿಯನ್ನು ಪ್ರತಿ ಕೆ.ಜಿ ಗೆ ರೂ.3/- ದರದಲ್ಲಿ ಖರೀದಿಸಲಾಗುತ್ತಿದೆ. ಇದನ್ನು ಹೊರತುಪಡಿಸಿ ಹೆಚ್ಚುವರಿಯಾಗಿ ಅಗತ್ಯವಿರುವ ಅಂದಾಜು 15000 ಮೆ.ಟನ್ ಅಕ್ಕಿ ಯನ್ನು ಭಾರತ ಆಹಾರ ನಿಗಮದ ಮುಕ್ತ ಮಾರುಕಟ್ಟೆ (ಓಎಂಎಸ್ ಎಸ್) ಯೋಜನೆಯಡಿ ಪ್ರತಿ ಕೆ.ಜಿ. ಗೆ ಸರಾಸರಿ ದರ ರೂ 22/-ರಂತೆ ಖರೀದಿಸಲಾಗುತ್ತಿದೆ.
ಆ	ಪ್ರತಿ ತಿಂಗಳು 'ಅನ್ನಭಾಗ್ಯ' ಯೋಜನೆಯ ಅಕ್ಕಿ ಖರೀದಿಗಾಗಿ ಖರ್ಚಾಗುವ ಹಣವೆಷ್ಟು;	ಅನ್ನಭಾಗ್ಯ ಯೋಜನೆಯಡಿ ಅಕ್ಕಿ ಖರೀದಿಗಾಗಿ ಪ್ರತಿ ತಿಂಗಳು ರೂ. 15285.88 ಲಕ್ಷಗಳು ವೆಚ್ಚವಾಗುತ್ತದೆ.
ಇ	ಯಾವ-ಯಾವ ರಾಜ್ಯಗಳಿಂದ ಎಷ್ಟೆಷ್ಟು ಪ್ರಮಾಣ ಅಕ್ಕಿಯನ್ನು ಖರೀದಿಸಲಾಗುತ್ತದೆ;	ಇತರೆ ರಾಜ್ಯಗಳಿಂದ ಅಕ್ಕಿಯನ್ನು ಖರೀದಿಸುತ್ತಿರುವುದಿಲ್ಲ. ಕೇಂದ್ರ ಸರ್ಕಾರದಿಂದ ಹಂಚಿಕೆಯಾಗುವ ಎನ್ ಎಫ್ ಎಸ್ ಎ ಅಕ್ಕಿ ಪ್ರಮಾಣವನ್ನು ಮತ್ತು ಓಎಂಎಸ್ ಎಸ್ ರಡಿ ಖರೀದಿಸುವ ಅಕ್ಕಿ ಪ್ರಮಾಣವನ್ನು ಭಾರತ ಆಹಾರ ನಿಗಮದಿಂದ ಖರೀದಿಸಲಾಗುತ್ತಿದೆ.
ಈ	ಪ್ರತಿ ಕೆ.ಜಿ.ಗೆ ಎಷ್ಟು ರೂಪಾಯಿಯಂತೆ ಅಕ್ಕಿಯನ್ನು ಖರೀದಿಸಲಾಗುತ್ತದೆ?	ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ಆಹಾರ ಭದ್ರತೆ ಕಾಯಿದೆಯಡಿ ರಾಜ್ಯಕ್ಕೆ ಪ್ರತಿ ಮಾಹೆ 217403 ಎಂ.ಟಿ ಅಕ್ಕಿಯನ್ನು ಪ್ರತಿ ಕೆ.ಜಿ ಗೆ ರೂ.3/- ದರದಲ್ಲಿ ಹಂಚಿಕೆ ನೀಡಲಾಗುತ್ತಿದೆ. ಇದನ್ನು ಹೊರತುಪಡಿಸಿ ಹೆಚ್ಚುವರಿಯಾಗಿ ಅಗತ್ಯವಿರುವ ಅಂದಾಜು 15000 ಮೆ.ಟನ್ ಅಕ್ಕಿ ಯನ್ನು ಭಾರತ ಆಹಾರ ನಿಗಮದ ಮುಕ್ತ ಮಾರುಕಟ್ಟೆ (ಓಎಂಎಸ್ ಎಸ್) ಯೋಜನೆಯಡಿ ಪ್ರತಿ ಕೆ.ಜಿ. ಗೆ ಸರಾಸರಿ ದರ ರೂ 22/-ರಂತೆ ಖರೀದಿಸಲಾಗುತ್ತಿದೆ.

ಆನಾಸ 127ಡಿಆರ್ಎ 2021 (ಇ-ಆಫೀಸ್)

(ಉಮೇಶ.ವಿ.ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3270

ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸಿಕೇರೆ)

ಉತ್ತರಿಸಬೇಕಾದ ದಿನಾಂಕ : 19.03.2021

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ನಾಫೆಡ್ ರಾಗಿ ಕೇಂದ್ರ ಇಲ್ಲಿಯವರೆಗೂ ಎಷ್ಟು ರಾಗಿಯನ್ನು ಖರೀದಿ ಮಾಡಲಾಗಿದೆ; ಇದರ ಸಾಗಾಣಿಕೆ ವೆಚ್ಚ ಎಷ್ಟು;	ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರ ಇಲಾಖೆಯ ವತಿಯಿಂದ ನಾಫೆಡ್ ಸಂಸ್ಥೆಯನ್ನು ಖರೀದಿ ಏಜೆನ್ಸಿಯಾಗಿ ನೇಮಿಸಿರುವುದಿಲ್ಲ. ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿಯಮಿತ ವನ್ನು ಖರೀದಿ ಏಜೆನ್ಸಿಯಾಗಿ ನೇಮಿಸಲಾಗಿದೆ. ಸದರಿ ಸಂಸ್ಥೆಯಿಂದ ದಿನಾಂಕ: 14/03/2021 ರವರೆಗೆ 5,42,217 ಕ್ವಿಂಟಾಲ್ ರಾಗಿಯನ್ನು ರೈತರಿಂದ ಖರೀದಿಯಾಗಿರುತ್ತದೆ ಹಾಗೂ ಇದಕ್ಕೆ ಸಾಗಾಣಿಕೆ ವೆಚ್ಚ ರೂ. 1,71,07,685/- ಆಗಿರುತ್ತದೆ.
ಆ	ಸಾಗಣಿಕೆ ಸರಬರಾಜು ಸರಿ ಇಲ್ಲದೆಯೇ ರೈತರು ಕಷ್ಟಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಇ	ಬಂದಿದ್ದಲ್ಲಿ, ತೆಗೆದುಕೊಂಡಿರುವ ಕ್ರಮಗಳೇನು;	ನ್ಯೂನತೆಯನ್ನು ಸರಿಪಡಿಸಲಾಗಿದೆ.
ಈ	ನಾಫೆಡ್ ರಾಗಿ ಕೇಂದ್ರದಲ್ಲಿ ಮಧ್ಯವರ್ತಿಗಳ ಹಾವಳಿಗೆ ಸರ್ಕಾರದ ತೆಗೆದುಕೊಂಡಿರುವ ಕ್ರಮಗಳೇನು;	ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ.

ಆನಾಸ 35 ಆರ್‌ಪಿಆರ್ 2021 (ಇ-ಆಫೀಸ್)

(ಉಮೇಶ ವಿ. ಕತ್ತಿ)

ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1674
2. ಮಾನ್ಯ ಸದಸ್ಯರ ಹೆಸರು : ಡಾ॥ ಶ್ರೀನಿವಾಸಮೂರ್ತಿ ಕೆ.
3. ಉತ್ತರಿಸಬೇಕಾದ ದಿನಾಂಕ : 19.03.2021
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ	ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿರುವ ಸಂತೆ (ಕಿರು ಮಾರುಕಟ್ಟೆ) ಕೇಂದ್ರಗಳೆಷ್ಟು ಹಾಗೂ ಸಂತೆಗಳ ಅಭಿವೃದ್ಧಿಗಾಗಿ ಸರ್ಕಾರ ಯಾವ ಯೋಜನೆ ರೂಪಿಸಲಾಗಿದೆ; (ವಿವರ ನೀಡುವುದು)	ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ (1)ನೆಲಮಂಗಲ, (2)ತ್ಯಾಮಗೊಂಡ್ಲು, (3)ದಾಬಸಪೇಟೆ, (4)ನರಸೀಪುರ ಈ 4 ಸಂತೆ (ಕಿರು ಮಾರುಕಟ್ಟೆ) ಕೇಂದ್ರಗಳಿದ್ದು, ಈ ಸಂತೆಗಳು ಪುರಸಭೆ ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವುದರಿಂದ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ಯಾವುದೇ ಯೋಜನೆ ರೂಪಿಸಿರುವುದಿಲ್ಲ.
ಆ	2019-20ನೇ ಸಾಲಿನ ಆಯವ್ಯಯದಲ್ಲಿ ಸಂತೆಗಳ ಅಭಿವೃದ್ಧಿ ತಲಾ ಒಂದು ಕೋಟಿಯಂತೆ ಅಭಿವೃದ್ಧಿಪಡಿಸಲಾಗುವುದು ಎಂದು ಘೋಷಣೆ ಮಾಡಲಾಗಿದ್ದು, ಈ ಯೋಜನೆ ಯಾವ ಕಾಲಮಿತಿಯೊಳಗೆ ಕಾರ್ಯರೂಪಕ್ಕೆ ಬರುತ್ತದೆ;	2019-20ನೇ ಸಾಲಿನಲ್ಲಿ ಒಂದು ಕೋಟಿಯಂತೆ 600 ಗ್ರಾಮೀಣ ಸಂತೆಗಳನ್ನು 5 ವರ್ಷಗಳ ಅವಧಿಯಲ್ಲಿ ಅಭಿವೃದ್ಧಿಪಡಿಸಲು ಆಯವ್ಯಯದಲ್ಲಿ ಘೋಷಣೆಯಾಗಿದ್ದು, ಈ ಸಾಲಿನಲ್ಲಿ ಯಾವುದೇ ಅನುದಾನ ಹಂಚಿಕೆಯಾಗದಿರುವುದರಿಂದ, 2019-20ನೇ ಸಾಲಿನ ಡಬ್ಲ್ಯೂ.ಐ.ಎಫ್ ಹೆಚ್ಚುವರಿ ಯೋಜನೆಯಡಿ 135 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ 150 ಸಂಖ್ಯೆ ಗ್ರಾಮೀಣ ಸಂತೆಗಳನ್ನು ರೂ. 154.00 ಕೋಟಿಗಳಲ್ಲಿ ಕೈಗೊಳ್ಳಲು ಅನುಮೋದನೆಗಾಗಿ ನಬಾರ್ಡ್ ಸಂಸ್ಥೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ನಬಾರ್ಡ್ ಸಂಸ್ಥೆಯಿಂದ ಅನುಮೋದನೆ ದೊರೆಯದ ಕಾರಣ, ಈ ಯೋಜನೆಯನ್ನು ಅನುಷ್ಠಾನಗೊಳಿಸಿರುವುದಿಲ್ಲ.
ಇ	ಕಿರು ಮಾರುಕಟ್ಟೆ (ಸಂತೆ) ಅಭಿವೃದ್ಧಿಗಾಗಿ ಪ್ರಸಕ್ತ ಸಾಲಿನಲ್ಲಿ ನೆಲಮಂಗಲ ಕ್ಷೇತ್ರಕ್ಕೆ ಅನುದಾನ ನೀಡಲಾಗುವುದೇ;	ಯಾವುದೇ ಅನುದಾನ ನೀಡಿರುವುದಿಲ್ಲ
ಈ	ನಗರ ಪ್ರದೇಶದಲ್ಲಿರುವ ಮಾರುಕಟ್ಟೆಗಳ ಅಭಿವೃದ್ಧಿಗಾಗಿ ಸರ್ಕಾರ ಯಾವ ಯೋಜನೆಗಳನ್ನು ರೂಪಿಸಲಾಗಿದೆ ; (ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು)	ಲಭ್ಯವಾಗುವ ಅನುದಾನಕ್ಕನುಗುಣವಾಗಿ ಅತೀ ಅವಶ್ಯಕವಿರುವ ಅಭಿವೃದ್ಧಿ ಕಾಮಗಾರಿಗಳಾದ ಮುಚ್ಚುಹರಾಜುಕಟ್ಟೆ, ಗೋದಾಮುಗಳು, ಅಂಗಡಿಗಳು, ಶೌಚಾಲಯ, ಕುಡಿಯುವ ನೀರಿನ ಸೌಲಭ್ಯ, ರಸ್ತೆ, ಚರಂಡಿ, ಆಹಾರ ಧಾನ್ಯಗಳ ಶುದ್ಧೀಕರಣ ಘಟಕ, ರೈತಭವನ, ಶ್ರಮಿಕಭವನ, ವಿದ್ಯುತ್, ತೂಕದ ಯಂತ್ರ, ಕ್ಯಾಂಟೀನ್, ಇತ್ಯಾದಿ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ಕೈಗೊಳ್ಳಲಾಗುತ್ತಿದೆ.

.....2

ಉ	ನೆಲಮಂಗಲ ಕ್ಷೇತ್ರದಲ್ಲಿ ಎಪಿಎಂಸಿ ಮಾರುಕಟ್ಟೆ ನಿರ್ಮಾಣ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ; ಇದ್ದಲ್ಲಿ ಯಾವಾಗ ಮಂಜೂರು ಮಾಡಲಾಗುವುದು ?	ನೆಲಮಂಗಲ ತಾಲ್ಲೂಕು, ಸೋಂಪುರ ಹೋಬಳಿ ಯಡೇಹಳ್ಳಿ ಗ್ರಾಮ ಸರ್ವೆ ನಂ. 61 ರಲ್ಲಿ 6 ಎಕರೆ 10 ಗುಂಟೆ ಜಮೀನು ಮಂಜೂರಾಗಿದ್ದು, ಸದರಿ ಜಮೀನಿನಲ್ಲಿ ಸೋಂಪುರ ಉಪ ಮಾರುಕಟ್ಟೆ ನಿರ್ಮಾಣ ಮಾಡಲು 2020-21ನೇ ಸಾಲಿನಲ್ಲಿ ನಬಾರ್ಡ್ ಸಂಸ್ಥೆಯ ಡಬ್ಲ್ಯೂ.ಐ.ಎಫ್ 2014-15ರ ಯೋಜನೆಯಡಿಯಲ್ಲಿ ರೂ.413.00 ಲಕ್ಷಗಳ ಮೊತ್ತದಲ್ಲಿ ಕಾಂಪೌಂಡ್ ಗೋಡೆ, ಸಿ.ಸಿ.ರಸ್ತೆ ಮತ್ತು ಚರಂಡಿ ನಿರ್ಮಾಣ ಮಾಡುವ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.

ಸಂಖ್ಯೆ:ಸಿಒ 110 ಎಂಆರ್ಇ 2021

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1833
ಸದಸ್ಯರ ಹೆಸರು	:	ಶ್ರೀ ಸಂಜೀವ ಮಠಂದೂರ್ (ಪುತ್ತೂರು)
ಉತ್ತರಿಸುವ ದಿನಾಂಕ	:	19/03/2021
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಮತ್ತು ಸಕ್ಕರೆ ಸಚಿವರು.

ಕ.ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಗ್ರಾಮ ಪಂಚಾಯತ್‌ಗಳನ್ನು ಪಟ್ಟಣ ಪಂಚಾಯಿತಿಗಳಾಗಿ ಮೇಲ್ದರ್ಜೆಗೇರಿಸಲು ಇರುವ ಮಾನದಂಡಗಳೇನು; (ಸಂಪೂರ್ಣ ಮಾಹಿತಿ ಒದಗಿರುಸುವುದು)	ಗ್ರಾಮ ಪಂಚಾಯತ್‌ಗಳನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಕರ್ನಾಟಕ ಪುರಸಭೆ ಅಧಿನಿಯಮ 1964 ಕಲಂ 349 ರನ್ವಯ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುವುದು. • ಅಂತಹ ಪ್ರದೇಶದ ಜನಸಂಖ್ಯೆಯು 10,000ಕ್ಕೆ ಕಡಿಮೆ ಇಲ್ಲದಂತೆ ಹಾಗೂ 20,000ಕ್ಕೆ ಹೆಚ್ಚಿಲ್ಲದಂತಿರಬೇಕು. • ಅಂತಹ ಪ್ರದೇಶದ ಜನಸಂಖ್ಯೆಯು ಜನಸಾಂದ್ರತೆಯು ಆ ಪ್ರದೇಶದ ಒಂದು ಚ.ಕಿ.ಮೀ ವಿಸ್ತೀರ್ಣಕ್ಕೆ 400 ಕ್ಕಿಂತ ಕಡಿಮೆ ಇಲ್ಲದಿರುವುದು. • ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ. 50 ಕ್ಕಿಂತ ಕಡಿಮೆ ಇಲ್ಲದಿರುವುದು. . ಮುಂದುವರೆದು, ದಿ:19.03.2015 ರ ಸಚಿವ ಸಂಪುಟ ಸಭೆಯ ನಿರ್ಣಯದಂತೆ 15,000ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಗಳನ್ನು ಮಾತ್ರ ಮೇಲ್ದರ್ಜೆಗೇರಿಸಲು ಕ್ರಮವಹಿಸಲಾಗಿರುತ್ತದೆ.
(ಆ)	2020ನೇ ಸಾಲಿನಲ್ಲಿ ಎಷ್ಟು ಗ್ರಾಮ ಪಂಚಾಯತ್‌ಗಳನ್ನು ಪಟ್ಟಣ ಪಂಚಾಯತಿಗಳಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾವನೆ ಬಂದಿದೆ; ಇವುಗಳಲ್ಲಿ ಎಷ್ಟು ಗ್ರಾಮ ಪಂಚಾಯತ್‌ಗಳನ್ನು ಪಟ್ಟಣ ಪಂಚಾಯತಿಗಳಾಗಿ ಮೇಲ್ದರ್ಜೆಗೇರಿಸಲಾಗಿದೆ? (ಸಂಪೂರ್ಣ ಮಾಹಿತಿ ಒದಗಿರುಸುವುದು)	2020ನೇ ಸಾಲಿನಲ್ಲಿ 27 ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾವನೆ ಬಂದಿದ್ದು, ಇವುಗಳಲ್ಲಿ ಈ ಕೆಳಕಂಡ 17 ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. 1. ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರ 2. ವಿಜಯಪುರ ಜಿಲ್ಲೆಯ ತಿಕೋಟಾ 3. ಕಲಬುರಗಿ ಜಿಲ್ಲೆಯ ಕಮಲಾಪೂರ 4. ಉಡುಪಿ ಜಿಲ್ಲೆಯ ಬೈಂದೂರು 5. ಕಲಬುರಗಿ ಜಿಲ್ಲೆಯ ಯಡ್ರಾಮಿ

6. ದಾವಣಗೆರೆ ಜಿಲ್ಲೆಯ ನ್ಯಾಮತಿ
7. ಬಾಗಲಕೋಟೆ ಜಿಲ್ಲೆಯ ಲೋಕಾಪುರ
8. ಬಾಗಲಕೋಟೆ ಜಿಲ್ಲೆಯ ಶಿರೂರ
9. ದಕ್ಷಿಣ ಕನ್ನಡ ಜಿಲ್ಲೆಯ ಬಜಪೆ & ಮಳವೂರು
10. ಶಿವಮೊಗ್ಗ ಜಿಲ್ಲೆಯ ಆನವಟ್ಟಿ, ಕಬಟೂರು, ಸಮನವಳ್ಳಿ ಮತ್ತು ತಲ್ಲೂರು
11. ಶಿವಮೊಗ್ಗ ಜಿಲ್ಲೆಯ ಹೊಳೆಹೊನ್ನೂರು, ಸಿದ್ಲಿಪುರ, ಎಮ್ಮೆಹಟ್ಟಿ ಮತ್ತು ಹನುಮಂತಾಪುರ
12. ಬೆಳಗಾವಿ ಜಿಲ್ಲೆಯ ಯರಗಟ್ಟಿ
13. ಬೆಳಗಾವಿ ಜಿಲ್ಲೆಯ ಕಾಗವಾಡ
14. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬಾಶೆಟ್ಟಿಹಳ್ಳಿ
15. ರಾಯಚೂರು ಜಿಲ್ಲೆಯ ಜಾಲಹಳ್ಳಿ
16. ಕೋಲಾರ ಜಿಲ್ಲೆಯ ವೇಮಗಲ್-ಕುರುಗಲ್
17. ರಾಮನಗರ ಜಿಲ್ಲೆಯ ಹಾರೋಹಳ್ಳಿ

ಮುಂದುವರೆದು, ಉಳಿದ ಈ ಕೆಳಕಂಡ 10 ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಕರಡು ಅಧಿಸೂಚನೆ ಹೊರಡಿಸಲಾಗಿದೆ.

1. ಬೆಳಗಾವಿ ಜಿಲ್ಲೆಯ ಅಂಕಲಗಿ ಮತ್ತು ಅಕ್ಕತಂಗೇರಹಾಳ
2. ವಿಜಯಪುರ ಜಿಲ್ಲೆಯ ಬಬಲೇಶ್ವರ
3. ಮೈಸೂರು ಜಿಲ್ಲೆಯ ಕಡಕೋಳ
4. ಮೈಸೂರು ಜಿಲ್ಲೆ ಶ್ರೀರಾಂಪುರ
5. ಮೈಸೂರು ಜಿಲ್ಲೆಯ ಬೋಗಾದಿ
6. ಮೈಸೂರು ಜಿಲ್ಲೆಯ ರಮ್ಮನಹಳ್ಳಿ
7. ಬೆಳಗಾವಿ ಜಿಲ್ಲೆಯ ಪೀರನವಾಡಿ
8. ಬೆಳಗಾವಿ ಜಿಲ್ಲೆಯ ಮಚ್ಚೆ
9. ಉತ್ತರ ಕನ್ನಡ ಜಿಲ್ಲೆಯ ಮಂಕಿ
10. ದಕ್ಷಿಣ ಕನ್ನಡ ಜಿಲ್ಲೆಯ ಮನ್ನಬೆಟ್ಟು, ಕನ್ನಿಗೋಳಿ, ಕಟೀಲು

ಸಂಖ್ಯೆ: ನಅಇ/50/ಎಲ್ಎಕ್ಯೂ.2021

(ಎನ್. ನಾಗರಾಜು ಎಂ ಟಿ ಬಿ)
ಪೌರಾಡಳಿತ ಮತ್ತು ಸಕ್ಕರೆ ಸಚಿವರು

<u>ಕರ್ನಾಟಕ ವಿಧಾನ ಸಭೆ</u>

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಸಂಜೀವ್ ಮಠಂದೂರ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1834

ಉತ್ತರಿಸಬೇಕಾದ ದಿನಾಂಕ : 19.03.2021

ಕ್ರಸಂ	ಪ್ರಶ್ನೆ	ಉತ್ತರ
ಅ)	2018–19ನೇ ಸಾಲಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ರೈತರ ಸಾಲಮನ್ನಾ ಮಾಡಲಾಗಿರುತ್ತದೆ ಹಾಗೂ ಎಷ್ಟು ರೈತರ ಸಾಲಮನ್ನಾ ಮಾಡಲು ಬಾಕಿ ಇರುತ್ತದೆ; (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)	2018–19ನೇ ಸಾಲಿನ ಸಹಕಾರ ಸಂಘಗಳ ರೂ.1.00 ಲಕ್ಷಗಳ ಸಾಲಮನ್ನಾ ಯೋಜನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ 58,380 ರೈತರ ಅರ್ಹತೆ ಗುರುತಿಸಿ ಸಾಲಮನ್ನಾ ಮಾಡಲಾಗಿದೆ. ದಿ:10.07.2018 ಕ್ಕೆ ಬೆಳೆ ಸಾಲ ಹೊರಬಾಕಿ ಹೊಂದಿದ ರೈತರ ಪೈಕಿ 5,720 ರೈತರು ಯೋಜನೆಯಲ್ಲಿ ಅರ್ಹತೆ ಹೊಂದದೇ ಇರುವುದರಿಂದ ಮತ್ತು ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ಸಹಕಾರ ಸಂಘಗಳು ತಂತ್ರಾಂಶದಲ್ಲಿ ಇವರನ್ನು ಅನರ್ಹ ಮಾಡಿ ತಿರಸ್ಕರಿಸಿದೆ. 3,520 ರೈತರ ಸಾಲಮನ್ನಾ ಅರ್ಹತೆ ಗುರುತಿಸಲು ಈ ಕೆಳಕಂಡ ಕಾರಣಗಳಿಗೆ ಬಾಕಿ ಇರುತ್ತವೆ.

ಕ್ರ ಸಂ	ಅರ್ಹತೆ ಗುರುತಿಸಲು ಬಾಕಿ ಇರುವ ಕಾರಣಗಳು	ಅರ್ಹತೆ ಗುರುತಿಸಲು ಬಾಕಿ ರೈತರ ಸಂಖ್ಯೆ
1	ದಾಖಲೆಗಳು ಸರಿ ಇದ್ದು, ಸಾಲಮನ್ನಾ ವಿಶೇಷ ಕೋಶದಿಂದ ಹಸಿರು ಪಟ್ಟಿ ನೀಡಲು ಬಾಕಿ ಇರುತ್ತದೆ.	1134
2	ಸಹಕಾರ ಸಂಘಗಳು ರೈತರ ಮಾಹಿತಿಯನ್ನು ತಪ್ಪಾಗಿ ಅಳವಡಿಸಿದ್ದು, ಅವುಗಳನ್ನು ಸರಿಪಡಿಸುವ ವಿವರ	451
3	ಪಡಿತರ ಚೀಟಿಗಳು ಹೊಸದಾಗಿ ಮಾಡಿಸಿದ್ದು, ನಂತರದಲ್ಲಿ ಸಣ್ಣ ಪುಟ್ಟ ಬದಲಾವಣೆಯಾಗಿರುವುದರಿಂದ ಸಾಲಮನ್ನಾ ವಿಶೇಷ ಕೋಶದಿಂದ ಹಸಿರು ಪಟ್ಟಿ ನೀಡಲು ಬಾಕಿ ಇರುವ ರೈತರ ಸಂಖ್ಯೆ	1054
4	ರೂ.1.00 ಲಕ್ಷಗಳಿಗಿಂತ ಹೆಚ್ಚಿನ ಸಾಲವನ್ನು ಸರ್ಕಾರ ಕಾಲಾವಕಾಶ ನೀಡಿದ ಅವಧಿಯಲ್ಲಿ ಮರುಪಾವತಿಸಿದ್ದು, ಹಸಿರು ಪಟ್ಟಿ ನೀಡಲು ಬಾಕಿ ಇರುವ ರೈತರ ಸಂಖ್ಯೆ	520
5	ಆಧಾರ್ ಕಾರ್ಡ್, ಪಡಿತರ ಚೀಟಿ, ಆರ್‌ಟಿಸಿ ದಾಖಲೆಗಳು ಸರಿಇಲ್ಲದೇ ಇರುವ ಮತ್ತು ಅಧಿಕಾರಿಗಳು ಪರಿಶೀಲಿಸಲು ಬಾಕಿ ಇರುವ ರೈತರ ಸಂಖ್ಯೆ	361
	ಒಟ್ಟು	**3,520**

ತಾಲ್ಲೂಕುವಾರು ವಿವರಗಳು ಕೆಳಕಂಡಂತಿರುತ್ತವೆ.

ಕ್ರ ಸಂ.	ತಾಲ್ಲೂಕು	ಸಾಲ ಮನ್ನಾ ಮಾಡಲಾದ ರೈತರ ಸಂಖ್ಯೆ	ಸಾಲ ಮನ್ನಾ ಅರ್ಹತೆ ಗುರುತಿಸಲು ಬಾಕಿ ಇರುವ ರೈತರ ಸಂಖ್ಯೆ
1	ಮಂಗಳೂರು	2,282	154
2	ಮೂಡಬಿದ್ರೆ	981	66
3	ಬಂಟ್ವಾಳ	12,455	739
4	ಬೆಳ್ತಂಗಡಿ	14,651	864
5	ಪುತ್ತೂರು	12,674	751
6	ಕಡಬ	5,574	375
7	ಸುಳ್ಯ	9,763	571
	ಒಟ್ಟು	**58,380**	**3,520**

(ಆ) ಸಾಲ ಮನ್ನಾ ಯೋಜನೆಯಲ್ಲಿ ಇಲ್ಲಿಯವರೆಗೆ ಎಷ್ಟು ರೈತರಿಗೆ ಹಣ ಬಿಡುಗಡೆಯಾಗಲು ಬಾಕಿ ಇದೆ? (ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

ಇದುವರೆಗೆ ಅರ್ಹತೆ ಗುರುತಿಸಿದ ಎಲ್ಲಾ 58,380 ರೈತರಿಗೂ ಸಹ ಹಣ ಬಿಡುಗಡೆ ಮಾಡಲಾಗಿದೆ. ತಾಲ್ಲೂಕುವಾರು ಹಣ ಬಿಡುಗಡೆ ಮಾಡಿದ ರೈತರ ವಿವರ ಕೆಳಕಂಡಂತಿರುತ್ತದೆ.

(ರೂ.ಕೋಟಿಗಳಲ್ಲಿ)

ಕ್ರ ಸಂ.	ತಾಲ್ಲೂಕು	ಸಾಲ ಮನ್ನಾ ಮಾಡಲಾದ ರೈತರ ಸಂಖ್ಯೆ	ಅನುದಾನ ಬಿಡುಗಡೆ ಮಾಡಿದ ಮೊತ್ತ
1	ಮಂಗಳೂರು	2282	15.98
2	ಮೂಡಬಿದ್ರೆ	981	8.19
3	ಬಂಟ್ವಾಳ	12455	92.41
4	ಬೆಳ್ತಂಗಡಿ	14651	108.64
5	ಪುತ್ತೂರು	12674	92.96
6	ಕಡಬ	5574	43.37
7	ಸುಳ್ಯ	9763	71.26
	ಒಟ್ಟು	**58380**	**432.81**

ಸಂಖ್ಯೆ: ಸಿಒ 90 ಸಿಎಲ್‌ಎಸ್ 2021

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2094
2. ಸದಸ್ಯರ ಹೆಸರು : ಶ್ರೀ ಗೌರಿಶಂಕರ್ ಡಿ.ಸಿ. (ತುಮಕೂರು ಗ್ರಾಮಾಂತರ)
3. ಉತ್ತರಿಸುವ ದಿನಾಂಕ : 19.03.2021
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೈಗಾರಿಕ ಪ್ರದೇಶಗಳ ಅಭಿವೃದ್ಧಿಗಾಗಿ ವಿವಿಧ ಯೋಜನೆಗಳಡಿ ಮತ್ತು ಲೆಕ್ಕ ಶೀರ್ಷಿಕೆಗಳಡಿ ಕಳೆದ 3 ವರ್ಷಗಳಲ್ಲಿ ಸರ್ಕಾರ ಮಂಜೂರು ಮಾಡಿ ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು; (ಸಂಪೂರ್ಣ ವಿವರ ನೀಡುವುದು)	ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿಗಾಗಿ 2019-20ನೇ ಸಾಲಿನ ಕ್ಲಿಷ್ಟಕರ ಮೂಲಭೂತ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ರೂ.60.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.
(ಆ)	ಬಿಡುಗಡೆ ಮಾಡಿರುವ ಅನುದಾನದಲ್ಲಿ ಯಾವ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು)	ತುಮಕೂರು ಜಿಲ್ಲೆ, ವಸಂತನರಸಾಪುರ ಕೈಗಾರಿಕಾ ಪ್ರದೇಶದ ವಿದ್ಯುತ್, ಮೂಲಭೂತ ಸೌಕರ್ಯ ಉನ್ನತಿಕರಣ ಕಾಮಗಾರಿಯ ಗುತ್ತಿಗೆ ಮೊತ್ತ ರೂ.73.22 ಲಕ್ಷಗಳಗೆ ಮೆ॥ ಲಕ್ಷ್ಮೀನಾರಾಯಣ ಎಲೆಕ್ಟ್ರಿಕಲ್ಸ್ ರವರಿಗೆ ನೀಡಲಾಗಿದ್ದು, ಈ ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ.
(ಇ)	ಕಳೆದ 3 ವರ್ಷಗಳಲ್ಲಿ ಪ್ರಾರಂಭವಾಗಿರುವ ಕಾಮಗಾರಿಗಳು ಪ್ರಸ್ತುತ ಯಾವ ಹಂತದಲ್ಲಿವೆ; ಇವುಗಳಲ್ಲಿ ಪೂರ್ಣಗೊಂಡಿರುವ, ಅಪೂರ್ಣಗೊಂಡಿರುವ ಹಾಗೂ ಪ್ರಗತಿ ಹಂತದಲ್ಲಿರುವ ಕಾಮಗಾರಿಗಳು ಯಾವುವು; (ಸಂಪೂರ್ಣ ವಿವರ ನೀಡುವುದು)	

(ಈ)	ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೈಗಾರಿಕಾ ಪ್ರದೇಶಗಳ ನಿರ್ವಹಣೆಗೆ (Maintenance) ಯಾವ ಯಾವ ಸಂಸ್ಥೆಗಳಿಗೆ, ಯಾವ ಯಾವ ಕಾಮಗಾರಿಗಳಿಗೆ ಹಾಗೂ ಯಾವ ಯಾವ ಯೋಜನೆಗಳಿಗೆ, ಎಷ್ಟು ಅವಧಿಗೆ ನೀಡಲಾಗಿದೆ (ಸಂಪೂರ್ಣ ವಿವರ ನೀಡುವುದು)?	1) ತುಮಕೂರು ಜಿಲ್ಲೆ, ಹಿರೇಹಳ್ಳಿ, ಅಂತರಸನಹಳ್ಳಿ 1 ಮತ್ತು 2ನೇ ಹಂತ, ಕುಣಿಗಲ್ 1 ಮತ್ತು 2ನೇ ಹಂತ, ಸತ್ಯಮಂಗಲ ಕೈಗಾರಿಕಾ ಪ್ರದೇಶಗಳ ಬೀದಿದೀಪ ದುರಸ್ತಿ ಮತ್ತು ವಾರ್ಷಿಕ ನಿರ್ವಹಣೆ ಕಾಮಗಾರಿಯನ್ನು ಸೆಪ್ಟೆಂಬರ್-2020 ರಿಂದ ಸೆಪ್ಟೆಂಬರ್-2021 ರವರೆಗೆ ನಿರ್ವಹಿಸಲು ಗುತ್ತಿಗೆ ಮೊತ್ತ ರೂ.18.07 ಲಕ್ಷಗಳಿಗೆ ಮೆ॥ ಚಂದನಾ ಎಲೆಕ್ಟ್ರಿಕಲ್ಸ್ ರವರಿಗೆ ನೀಡಲಾಗಿದೆ. 2) ತುಮಕೂರು ಜಿಲ್ಲೆ, ವಸಂತನರಸಾಪುರ 1 ಮತ್ತು 2ನೇ ಹಂತ ಕೈಗಾರಿಕಾ ಪ್ರದೇಶದ ಬೀದಿದೀಪ ದುರಸ್ತಿ ಮತ್ತು ವಾರ್ಷಿಕ ನಿರ್ವಹಣೆ ಕಾಮಗಾರಿಯನ್ನು ಅಕ್ಟೋಬರ್-2020ರಿಂದ ಅಕ್ಟೋಬರ್-2021ರವರೆಗೆ ನಿರ್ವಹಿಸಲು ಗುತ್ತಿಗೆ ಮೊತ್ತ ರೂ.31.20 ಲಕ್ಷಗಳಿಗೆ ಮೆ॥ ಜಿ.ಎಸ್. ಎಲೆಕ್ಟ್ರಿಕಲ್ಸ್ ರವರಿಗೆ ನೀಡಲಾಗಿದೆ.

(ಜಗದೀಶ ಶೆಟ್ಟರ)

ಸಂಖ್ಯೆ: ಸಿಐ 89 ಐಎಪಿ (ಇ) 2021

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆ ಸದಸ್ಯರು : ಶ್ರೀ ಅಪ್ಪಚ್ಚು (ರಂಜನ್) ಎಂ.ಪಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2288

ಉತ್ತರಿಸಬೇಕಾದ ದಿನಾಂಕ : 19.03.2021

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕೊಡಗು ಜಿಲ್ಲೆಯಲ್ಲಿ ಸರ್ಕಾರದ ಸಾಲಮನ್ನಾ ಯೋಜನೆಯ ಸೌಲಭ್ಯ ಘೋಷಣೆಯಾದ ಸಂದರ್ಭದಲ್ಲಿ ಸಹಕಾರ ಸಂಘದ ಮೂಲಕ ಎಷ್ಟು ಜನ ರೈತರು ಬೆಳೆಸಾಲ ಪಡೆದಿದ್ದರು;	ಸಹಕಾರ ಸಂಘಗಳ ರೂ.1.00 ಲಕ್ಷಗಳ ಸಾಲಮನ್ನಾ ಯೋಜನೆ ಘೋಷಣೆಯಾದ ಸಂದರ್ಭದಲ್ಲಿ ಕೊಡಗು ಜಿಲ್ಲೆಯ ಸಹಕಾರ ಸಂಘಗಳಲ್ಲಿ ದಿನಾಂಕ:10.07.2018ಕ್ಕೆ 32,903 ರೈತರು ಬೆಳೆ ಸಾಲ ಹೊರಬಾಕಿ ಹೊಂದಿದ್ದರು.
ಆ)	ಈ ಪೈಕಿ ಎಷ್ಟು ಜನರಿಗೆ ಸಾಲಮನ್ನಾ ಯೋಜನೆಯ ಸೌಲಭ್ಯ ದೊರೆತಿದೆ;	ಈ ಪೈಕಿ ಇದುವರೆಗೆ 27,995 ರೈತರಿಗೆ ಸಾಲಮನ್ನಾ ಸೌಲಭ್ಯ ದೊರೆತಿರುತ್ತದೆ.
ಇ)	ಉಳಿಕೆ ರೈತರಿಗೆ ಯಾವಾಗ ಸಾಲಮನ್ನಾ ಯೋಜನೆಯ ಸೌಲಭ್ಯ ನೀಡಲಾಗುತ್ತದೆ? (ಸಂಪೂರ್ಣ ವಿವರ ನೀಡುವುದು)	ಉಳಿಕೆ 4,908 ರೈತರ ಪೈಕಿ 3,780 ರೈತರು ಯೋಜನೆಯಲ್ಲಿ ಅರ್ಹತೆ ಹೊಂದದೇ ಇರುವುದರಿಂದ ಮತ್ತು ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ಸಹಕಾರ ಸಂಘಗಳು ತಂತ್ರಾಂಶದಲ್ಲಿ ಇವರನ್ನು ಅನರ್ಹ ಮಾಡಿ ತಿರಸ್ಕರಿಸಿರುತ್ತವೆ. ಉಳಿದ 1,128 ರೈತರ ಸಾಲ ಮನ್ನಾ ಅರ್ಹತೆ ಗುರುತಿಸಲು ಈ ಕೆಳಕಂಡ ಕಾರಣಗಳಿಗೆ ಬಾಕಿ ಇರುತ್ತವೆ.

ಕ್ರ ಸಂ	ಅರ್ಹತೆ ಗುರುತಿಸಲು ಬಾಕಿ ಇರುವ ಕಾರಣಗಳು	ಅರ್ಹತೆ ಗುರುತಿಸಲು ಬಾಕಿ ರೈತರ ಸಂಖ್ಯೆ
1	ದಾಖಲೆಗಳು ಸರಿ ಇದ್ದು, ಸಾಲ ಮನ್ನಾ ವಿಶೇಷ ಕೋಶದಿಂದ ಹಸಿರು ಪಟ್ಟಿ ನೀಡಲು ಬಾಕಿ ಇರುತ್ತದೆ.	8
2	ಸಹಕಾರ ಸಂಘಗಳ ರೈತರ ಮಾಹಿತಿಯನ್ನು ತಪ್ಪಾಗಿ ಅಳವಡಿಸಿದ್ದು, ಅವುಗಳನ್ನು ಸರಿಪಡಿಸುವ ವಿವರ.	150

		3	ಪಡಿತರ ಚೀಟಿಗಳು ಹೊಸದಾಗಿ ಮಾಡಿಸಿದ್ದು, ನಂತರದಲ್ಲಿ ಸಣ್ಣ ಪುಟ್ಟಿ ಬದಲಾವಣೆಯಾಗಿರುವುದರಿಂದ ಸಾಲ ಮನ್ನಾ ವಿಶೇಷ ಕೋಶದಿಂದ ಹಸಿರುಪಟ್ಟಿ ನೀಡಲು ಬಾಕಿ ಇರುವ ರೈತರ ಸಂಖ್ಯೆ	507
		4	ರೂ.1.00 ಲಕ್ಷಗಳಿಗಿಂತ ಹೆಚ್ಚಿನ ಸಾಲವನ್ನು ಸರ್ಕಾರ ಕಾಲಾವಕಾಶ ನೀಡಿದ ಅವಧಿಯಲ್ಲಿ ಮರುಪಾವತಿಸಿದ್ದು ಹಸಿರು ಪಟ್ಟಿ ನೀಡಲು ಬಾಕಿ ಇರುವ ರೈತರ ಸಂಖ್ಯೆ	0
		5	ಆಧಾರ್ ಕಾರ್ಡ್, ಪಡಿತರ ಚೀಟಿ, ಆರ್‌ಟಿಸಿ ದಾಖಲೆಗಳು ಸರಿಇಲ್ಲದೇ ಇರುವ ಮತ್ತು ಅಧಿಕಾರಿಗಳು ಪರಿಶೀಲಿಸಲು ಬಾಕಿ ಇರುವ ರೈತರ ಸಂಖ್ಯೆ	463
			ಒಟ್ಟು	**1128**
		ಸಹಕಾರ ಸಂಘಗಳು ರೈತರ ಮಾಹಿತಿಯನ್ನು ತಪ್ಪಾಗಿ ಅಳವಡಿಸಿರುವ ಖಾತೆಗಳನ್ನು ಸರಿಪಡಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸುವಂತೆ ಸಾಲ ಮನ್ನಾ ವಿಶೇಷ ಕೋಶಕ್ಕೆ ಪತ್ರ ಬರೆದಿದ್ದು, ಸರಿಪಡಿಸಲು ಕ್ರಮವಹಿಸಲಾಗಿದ್ದು, ಆದಷ್ಟು ಶೀಘ್ರದಲ್ಲಿ ಸಾಲ ಮನ್ನಾ ಯೋಜನೆಗೆ ಅರ್ಹತೆ ಗುರುತಿಸಲಾಗುತ್ತದೆ.		

ಸಂಖ್ಯೆ: ಸಿಒ 91 ಸಿಎಲ್‌ಎಸ್ 2021

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2304
ಸದಸ್ಯರ ಹೆಸರು	:	ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ)
ಉತ್ತರಿಸುವವರು	:	ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು
ಉತ್ತರಿಸುವ ದಿನಾಂಕ	:	19.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಕೋಲಾರ ಜಿಲ್ಲೆಯಲ್ಲಿ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮಗಳು ಯಾವುವು;	• ಕೈಗಾರಿಕೆಗಳ ಅಭಿವೃದ್ಧಿಗಾಗಿ ಸರ್ಕಾರವು ಈ ಹಿಂದೆ ಜಾರಿಗೆ ತಂದಿದ್ದ ಕೈಗಾರಿಕಾ ನೀತಿ 2014-19 ಅನುಷ್ಠಾನಗೊಳಿಸುತ್ತಿದೆ ಮತ್ತು ಪ್ರಸ್ತುತ ಹೊಸ ಕೈಗಾರಿಕಾ ನೀತಿ 2020-25ನ್ನು ದಿನಾಂಕ 13.08.2020ರಿಂದ ಜಾರಿಗೊಳಿಸಲಾಗಿರುತ್ತದೆ. ಸದರಿ ನೀತಿಗಳನ್ವಯ ವಿವಿಧ ಪ್ರೋತ್ಸಾಹ ಮತ್ತು ರಿಯಾಯಿಗಳನ್ನು ಕಲ್ಪಿಸಲಾಗಿರುತ್ತದೆ. • ದೇಶ ವಿದೇಶಗಳ ಹಲವಾರು ಪ್ರತಿಷ್ಠಿತ ಕಂಪನಿಗಳೊಂದಿಗೆ ಕರ್ನಾಟಕದಲ್ಲಿ ಬಂಡವಾಳ ಹೂಡಲು ಮಾನ್ಯ ಕೈಗಾರಿಕಾ ಸಚಿವರ/ಪ್ರಧಾನ ಕಾರ್ಯದಶಿಗಳ/ಕೈಗಾರಿಕಾಭಿವೃದ್ಧಿ ಆಯುಕ್ತರ ನೇತೃತ್ವದಲ್ಲಿ ಸರಣಿ ಸಭೆಗಳನ್ನು ನಡೆಸಲಾಗುತ್ತಿದೆ. • ಕೈಗಾರಿಕೆಗಳನ್ನು ಪ್ರಾರಂಭಿಸಲು ಬೇಕಾಗಿರುವ ಭೂಮಿ ಖರೀದಿ ಪ್ರಕ್ರಿಯೆ ಸರಳೀಕರಣಗೊಳಿಸಲಾಗಿದೆ. • ಕೈಗಾರಿಕೆಗಳನ್ನು ಪ್ರಾರಂಭಿಸಲು ಬೇಕಾಗಿರುವ ಎನ್.ಓ.ಸಿ ಗಳನ್ನು ಪಡೆಯಲು 3 ವರ್ಷಗಳವರೆಗೆ ಸಮಯವನ್ನು ವಿಸ್ತರಿಸಿ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ2002ಕ್ಕೆ ತಿದ್ದುಪಡಿ ತರಲಾಗಿದೆ. • ಕೈಗಾರಿಕೆಗಳನ್ನು ಶೀಘ್ರವಾಗಿ ಅಡತಡೆಗಳಿಲ್ಲದೆ, ಪ್ರಾರಂಭಿಸಲು ಇಸ್ ಆಫ್ ಡೂಯಿಂಗ್ ಬಿಸಿನಸ್ಸ್ ಜಾರಿಗೊಳಿಸಲಾಗಿದೆ.
ಆ	ಜಿಲ್ಲೆಯಲ್ಲಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ಜಿಲ್ಲೆಯ ನಿರುದ್ಯೋಗಿ ಯುವಕರಿಗೆ ಉದ್ಯೋಗ ಒದಗಿಸಲು ಸರ್ಕಾರ ಕೈಗೊಂಡ ಕ್ರಮವೇನು;	➢ ಕೋಲಾರ ಜಿಲ್ಲೆಯಲ್ಲಿ 2013-14 ರಿಂದ ಪ್ರಸ್ತುತದವರೆಗೆ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಲು SHLCC & SLWCC ಸಮಿತಿ/ಸಭೆಗಳಲ್ಲಿ ಅನುಮೋದನೆ ನೀಡುತ್ತಿದ್ದು, ಒಟ್ಟು 195 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಇವುಗಳಿಂದ ಒಟ್ಟು ರೂ.10123.61 ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು, 45088 ಜನರಿಗೆ ಉದ್ಯೋಗ ಸೃಜನೆಯಾಗಿಲಿದೆ. ➢ ನಿರುದ್ಯೋಗ ಯುವಕರಿಗೆ ಉದ್ಯೋಗ ಒದಗಿಸಲು ಕೇಂದ್ರ ಸರ್ಕಾರದ ಸಾಲ ಸಹಾಯಧನ ಯೋಜನೆಯಾದ ಪಿ.ಎಂ.ಇ.ಜಿ.ಪಿ ಯೋಜನೆಯನ್ನು ಅನುಷ್ಠಾನ ಮಾಡುತ್ತಿದ್ದು, ಪ್ರಸಕ್ತ ಸಾಲಿನಲ್ಲಿ 36 ಘಟಕಗಳಿಗೆ ರೂ.3,15,59,000/- ಸಾಲ ಮಂಜೂರಾತಿಯಾಗಿರುತ್ತದೆ.

ಇ	ಕೆ.ಜಿ.ಎಫ್.ನ ಭಾರತ್ ಗೋಲ್ಡ್ ಮೈನ್ಸ್ ಲಿ. ಕೈಗಾರಿಕೆಯ ಒಡೆತನದಲ್ಲಿರುವ ಸುಮಾರು 2 ಸಾವಿರಕ್ಕಿಂತ ಅಧಿಕ ಕೈಗಾರಿಕೆಗಳನ್ನು ರಾಜ್ಯ ಸರ್ಕಾರದ ವಶಕ್ಕೆ ಪಡೆದು ಕೋಲಾರ ಜಿಲ್ಲೆಯ ಕೈಗಾರಿಕಾ ವಲಯವನ್ನಾಗಿ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು)?	ಸನ್ಮಾನ್ಯ ಮುಖ್ಯಮಂತ್ರಿಗಳು ದಿನಾಂಕ 09.07.2020ರ ಪತ್ರದಲ್ಲಿ ಕರ್ನಾಟಕ ಸರ್ಕಾರವು ಕೆ.ಜಿ.ಎಫ್.ನಲ್ಲಿ ಕೈಗಾರಿಕಾ ನೋಡ್/ಟೌನ್‌ಶಿಪ್‌ನ್ನು ಅಭಿವೃದ್ಧಿಪಡಿಸಲು ಬಿ.ಜಿ.ಎಂ.ಎಲ್ ಕಂಪನಿಯ ಒಡೆತನದಲ್ಲಿರುವ ಬಳಸಿಕೊಳ್ಳದೇ ಉಳಿದಿರುವಂತಹ 3,212 ಎಕರೆ ಭೂಮಿಯನ್ನು ನೀಡುವಂತೆ ಮಾನ್ಯ ಗಣಿ, ಕಲ್ಲಿದ್ದಲು ಹಾಗೂ ಸಂಸದೀಯ ವ್ಯವಹಾರಗಳ ಕೇಂದ್ರ ಸಚಿವರನ್ನು ಕೋರಿರುತ್ತಾರೆ. ದಿನಾಂಕ 28.08.2020 ರಂದು ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಗಣಿ, ಕಲ್ಲಿದ್ದಲು ಹಾಗು ಸಂಸದೀಯ ವ್ಯವಹಾರಗಳ ಕೇಂದ್ರ ಸಚಿವರ ಜಂಟಿ ಅಧ್ಯಕ್ಷತೆಯಲ್ಲಿ ಬಿ.ಜಿ.ಎಂ.ಎಲ್ ಕಂಪನಿಯ ಒಡೆತನದಲ್ಲಿರುವ ಭೂಮಿಯನ್ನು ಉಪಯೋಗಿಸುವ ಕುರಿತು ಸಭೆ ನಡೆಸಲಾಗಿದ್ದು, ಈ ಕೆಳಕಂಡ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ. 1. Exploration survey be taken up by the MECL at their cost to be completed within six months of the entire unexplored area of BGML. 2. The State Government to take up total station survey of the entire BGML land to be completed within three months. 3. If the land identified to be not suitable for mineral exploitations, the same would be considered for grant to the State Government for development of Industrial Township to the extent of clear vacant land. ಕೋಲಾರ ಜಿಲ್ಲಾಧಿಕಾರಿಗಳ ಕಚೇರಿ ವತಿಯಿಂದ ಖಾಸಗಿ ಏಜೆನ್ಸಿ ಮೂಲಕ ಬಿ.ಜಿ.ಎಂ.ಎಲ್ ಭೂಮಿಯ ಡ್ರೋನ್ ಸರ್ವೆ ಮಾಡಿಸಲಾಗಿದ್ದು ಜಿಲ್ಲಾಧಿಕಾರಿಯವರಿಗೆ ವರದಿ ಸಲ್ಲಿಸಲಾಗಿದೆ. ಮೆ: ಎಂ.ಇ.ಸಿ.ಎಲ್ ಸಂಸ್ಥೆಯು ಸರ್ವೆಯನ್ನು ಕೈಗೆತ್ತಿಕೊಂಡಿರುವುದು ತಿಳಿದುಬಂದಿದ್ದು, ಮಾರ್ಚ್ 2021 ರೊಳಗೆ ಸರ್ವೆ ಕಾರ್ಯವನ್ನು ಮುಗಿಸಬೇಕಾಗಿರುತ್ತದೆ.

ಸಿಐ 112 ಎಸ್‌ಪಿಐ 2021

(ಜಗದೀಶ್ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2307

ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ)

ಉತ್ತರಿಸಬೇಕಾದ ದಿನಾಂಕ : 19.03.2021

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯಾದ್ಯಂತ ಹಾಲಿ ಕಾರ್ಯನಿರ್ವಹಿಸುತ್ತಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು;	ರಾಜ್ಯಾದ್ಯಂತ ಹಾಲಿ 20009 ನ್ಯಾಯಬೆಲೆ ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ.
ಆ	ತಲಾ ಎಷ್ಟು ಕಾರ್ಡುದಾರರಿಗೆ ಸೊಸೈಟಿಯನ್ನು ಮಂಜೂರು ಮಾಡಲಾಗುವುದು;	ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ ನಿಯಂತ್ರಣ ಆದೇಶ 2016 ರ ಕಲಂ 11 ರಂತೆ ನಗರ ಪ್ರದೇಶಗಳಲ್ಲಿ ಕನಿಷ್ಠ 800 ಪಡಿತರ ಚೀಟಿಗಳಿಗೆ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಕನಿಷ್ಠ 500 ಪಡಿತರ ಚೀಟಿಗಳಿಗೆ 1 ನ್ಯಾಯಬೆಲೆ ಅಂಗಡಿಗಳನ್ನು ಮಂಜೂರು ಮಾಡಬಹುದು.
ಇ	ಹಾಲಿ ಕಾರ್ಯನಿರ್ವಹಿಸುತ್ತಿರುವ ಸೊಸೈಟಿಗಳಿಂದ ದೂರದ ಊರಿನಿಂದ ಬಂದ ವಲಸಿಗರಿಗೆ ಆಹಾರ ಸಾಮಗ್ರಿಗಳನ್ನು ಪಡೆಯಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ರಾಜ್ಯದಲ್ಲಿ ಸಾರ್ವಜನಿಕ ವಿತರಣಾ ಪದ್ಧತಿಯಡಿ ಪಡಿತರ ಫಲಾನುಭವಿಗಳ ಆಧಾರ್ ಸಂಖ್ಯೆಯನ್ನು ಅವರ ಪಡಿತರ ಚೀಟಿಯೊಂದಿಗೆ ಜೋಡಣೆ ಮಾಡಲಾಗಿದೆ. ಒಂದು ದೇಶ ಒಂದು ಪಡಿತರ ಚೀಟಿ ಯೋಜನೆಯನ್ವಯ ಪೋರ್ಟಬಿಲಿಟಿ ವ್ಯವಸ್ಥೆಯನ್ನು ರಾಜ್ಯದಲ್ಲಿ ಜಾರಿಗೊಳಿಸಲಾಗಿದೆ. ಈ ಯೋಜನೆಯಡಿ ಹೊರ ರಾಜ್ಯಗಳ ಹಾಗೂ ರಾಜ್ಯದಲ್ಲಿನ ಪಡಿತರ ಫಲಾನುಭವಿಗಳು ರಾಜ್ಯದ ಯಾವುದೇ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಪಡೆದುಕೊಳ್ಳಲು ಅವಕಾಶವಿರುತ್ತದೆ. ಪೋರ್ಟಬಿಲಿಟಿಯಡಿ ಹೆಚ್ಚುವರಿ ಆಹಾರಧಾನ್ಯ ವನ್ನು ನ್ಯಾಯಬೆಲೆ ಅಂಗಡಿಗೆ ಆಹಾರ ನಿರೀಕ್ಷಕರು ಮಂಜೂರು ಮಾಡುವರು, ಅದರಂತೆ ಹೆಚ್ಚುವರಿ ಆಹಾರದಾನ್ಯವನ್ನು ಸಗಟು ಗೋದಾಮುಗಳಿಂದ ನ್ಯಾಯಬೆಲೆ ಅಂಗಡಿಯವರು ಎತ್ತುವಳಿ ಮಾಡಬಹುದಾಗಿದ್ದು ಹೆಚ್ಚುವರಿ ಪ್ರಮಾಣವನ್ನು ಅಗತ್ಯಾನುಸಾರ ಸಗಟು ಮಳಿಗೆಗಳಲ್ಲಿ ದಾಸ್ತಾನಿರಿಸಲಾಗುತ್ತಿದೆ. ಪಡಿತರ ವಿತರಣೆಯು ಆಧಾರ್ ಆಧಾರಿತ ವಾಗಿರುವುದರಿಂದ ಈ ಸೌಲಭ್ಯ ಪಡಿತರ ಚೀಟಿದಾರರಿಗೆ ಪೂರ್ಣ ಪ್ರಮಾಣದಲ್ಲಿ ದೊರಕುತ್ತಿದೆ . ಸದರಿ ಸೌಲಭ್ಯವನ್ನು ಪಡೆಯಲು ವಲಸಿಗರಿಗೆ

		ಯಾವುದೇ ತೊಂದರೆ ಉಂಟಾಗಿರುವುದಿಲ್ಲ.
ಈ	ಅಂತಹ ಸಮಸ್ಯೆಗಳು ಕಂಡು ಬಂದಲ್ಲಿ, ಹೊಸ ನ್ಯಾಯಬೆಲೆ ಅಂಗಡಿಗಳಿಗೆ ಲೈಸೆನ್ಸ್ ವಿತರಿಸಲು ಸರ್ಕಾರದ ಕ್ರಮಕೈಗೊಳ್ಳುವುದೇ?	ಉದ್ಭವಿಸುವುದಿಲ್ಲ.

ಆನಾಸ 27 ಆನಾಸ 2021 (ಇ-ಆಫೀಸ್)

(ಉಮೇಶ ವಿ ಕತ್ತಿ)

ಆಹಾರ, ನಾಗರಿಕ ಸರಬರಾಜು ಮತ್ತು

ಗ್ರಾಹಕರ ವ್ಯವಹಾರಗಳ ಹಾಗೂ

ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2310
ಸದಸ್ಯರ ಹೆಸರು	:	ಶ್ರೀ ಅಜಯ್ ಧರ್ಮ ಸಿಂಗ್ ಡಾ|| (ಜೇವರ್ಗಿ)
ಉತ್ತರಿಸಬೇಕಾದ ದಿನಾಂಕ	:	19.03.2021.
ಉತ್ತರಿಸುವವರು	:	ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು.

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲ್ಪವೃಕ್ಷ ಕಾಯಕ ಯೋಜನೆಯಡಿ ನಾರಿನ ಕೈಗಾರಿಕೆಗಳಿಗಾಗಿ ಮೀಸಲಿಟ್ಟಿರುವ ಸಹಾಯ ಧನದ ಮೊತ್ತವೆಷ್ಟು;</td><td>ಕಲ್ಪವೃಕ್ಷ ಕಾಯಕ ಯೋಜನೆಯಡಿ ತೆಂಗಿನ ನಾರಿನ ಕೈಗಾರಿಕೆಗಳಿಗಾಗಿ ಸರ್ಕಾರಿ ಆದೇಶ ಸಂಖ್ಯೆ: ಸಿಐ 62 ಸಿಎಸ್‌ಸಿ 2019, ಬೆಂಗಳೂರು ದಿನಾಂಕ:29/05/2020ರಲ್ಲಿ, 3 ವರ್ಷಗಳಿಗೆ ರೂ.100.00 ಕೋಟಿಗಳ ಆಯವ್ಯಯ ಅಂದಾಜಿಸಿದ್ದು 2020-21ನೇ ಸಾಲಿನಲ್ಲಿ ರೂ.5.00 ಕೋಟಿಗಳ ಸಹಾಯಧನವನ್ನು ಮೀಸಲಿಟ್ಟಿದೆ.</td></tr>
<tr><td>ಆ)</td><td>ಸದರಿ ಯೋಜನೆಯಡಿ ಯಾವ ಕೈಗಾರಿಕಾ ಘಟಕಗಳಿಗೆ ಯಾವ ಮೊತ್ತದ ಸಹಾಯ ಧನವನ್ನು ನೀಡಲಾಗುತ್ತಿದೆ (ಸಂಪೂರ್ಣ ವಿವರ ನೀಡುವುದು);</td><td>ಕಲ್ಪವೃಕ್ಷ ಕಾಯಕ ಯೋಜನೆಯಡಿ ನಾರಿನ ಕೈಗಾರಿಕೆಗಳಿಗಾಗಿ ನೀಡಲಾಗುತ್ತಿರುವ ಸಹಾಯಧನ ವಿವರಗಳು ಕೆಳಕಂಡಂತಿದೆ.
<table>
<tr><th rowspan="3">ಕ್ರಸಂ</th><th rowspan="3">ಉದ್ದಿಮೆಯ ಪ್ರಕಾರ</th><th colspan="6">ಸಹಾಯಧನ ಪ್ರಮಾಣ (ಗರಿಷ್ಠ ಮಿತಿ) (ರೂ. ಲಕ್ಷಗಳಲ್ಲಿ)</th></tr>
<tr><th colspan="2">ಸಾಮಾನ್ಯ</th><th colspan="2">ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ ಅಥವಾ ಮಹಿಳೆ</th><th colspan="2">ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ ಮತ್ತು ಮಹಿಳೆ</th></tr>
<tr><th>%</th><th>ಗರಿಷ್ಠ ಮಿತಿ</th><th>%</th><th>ಗರಿಷ್ಠ ಮಿತಿ</th><th>%</th><th>ಗರಿಷ್ಠ ಮಿತಿ</th></tr>
<tr><td>1</td><td>ಸೂಕ್ಷ್ಮ ಘಟಕ (ಸ್ವಸಹಾಯ ಸಂಘ/ ಸಹಕಾರಿ ಸಂಘ)</td><td>60</td><td>40.00</td><td>+5</td><td>42.00</td><td>+5</td><td>44.00</td></tr>
<tr><td>2</td><td>ಸೂಕ್ಷ್ಮ ಘಟಕ</td><td>50</td><td>40.00</td><td>+5</td><td>42.00</td><td>+5</td><td>44.00</td></tr>
<tr><td>3</td><td>ಸಣ್ಣ ಕೈಗಾರಿಕೆ</td><td>40</td><td>200.00</td><td>+5</td><td>210.00</td><td>+5</td><td>220.00</td></tr>
<tr><td>4</td><td>ಸಣ್ಣ ಕೈಗಾರಿಕೆ (Thrust Sector)</td><td>45</td><td>250.00</td><td>+5</td><td>265.00</td><td>+5</td><td>280.00</td></tr>
<tr><td>5</td><td>ಮಧ್ಯಮ ಕೈಗಾರಿಕೆ</td><td>30</td><td>300.00</td><td>+5</td><td>310.00</td><td>+5</td><td>320.00</td></tr>
<tr><td>6</td><td>ಮಧ್ಯಮ ಕೈಗಾರಿಕೆ (Thrust Sector)</td><td>35</td><td>350.00</td><td>+5</td><td>365.00</td><td>+5</td><td>380.00</td></tr>
</table>
</td></tr>
<tr><td>ಇ)</td><td>ಕಳೆದ ಮೂರು ವರ್ಷಗಳಿಂದ ನಾರಿನ ಕೈಗಾರಿಕಾ ಅಭಿವೃದ್ಧಿಗಾಗಿ ರಾಜ್ಯದ ಯಾವ ಪ್ರದೇಶಗಳಲ್ಲಿ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲಾಗಿದೆ (ವಿವರಗಳನ್ನು ಒದಗಿಸುವುದು);</td><td>ಕಳೆದ ಮೂರು ವರ್ಷಗಳಲ್ಲಿ ತೆಂಗಿನ ನಾರಿನ ಕೈಗಾರಿಕಾ ಘಟಕಗಳನ್ನು ತುಮಕೂರು. ಹಾಸನ, ಬೆಂಗಳೂರು ನಗರ, ಚಿತ್ರದುರ್ಗ. ಬೆಳಗಾವಿ, ಮಂಡ್ಯ, ರಾಮನಗರ. ಉತ್ತರ ಕನ್ನಡ, ಶಿವಮೊಗ್ಗ, ಬೆಂಗಳೂರು ಗ್ರಾಮಾಂತರ. ದಕ್ಷಿಣ ಕನ್ನಡ. ಉಡುಪಿ, ಬಾಗಲಕೋಟೆ. ಚಿಕ್ಕಮಗಳೂರು, ಮೈಸೂರು ಜಿಲ್ಲೆಗಳಲ್ಲಿ ನೋಂದಣಿ ಮಾಡಲಾಗಿದೆ.</td></tr>
</table>

ಈ) ರಾಜ್ಯದಲ್ಲಿ ನಾರಿನ ಕೈಗಾರಿಕೆಗಳನ್ನು ತೆರೆಯಲು ಉತ್ತಮ ಅವಕಾಶವಿದ್ದರೂ ಹೆಚ್ಚು ತೆಂಗು ಬೆಳೆಯುವ ಜಿಲ್ಲೆಯಲ್ಲಿಯೇ ಇದರ ಉದ್ಯಮಕ್ಕೆ ಹಿನ್ನಡೆಯಾಗಿರುವುದನ್ನು ಯಾವ ರೀತಿ ಉತ್ತೇಜನ ನೀಡಲು ಕ್ರಮಗಳನ್ನು ಕೈಗೊಳ್ಳಲಿದೆ?

ರಾಜ್ಯದಲ್ಲಿ ನಾರಿನ ಕೈಗಾರಿಕೆಗಳನ್ನು ತೆರೆಯಲು ಉತ್ತಮ ಅವಕಾಶವಿರುವುದನ್ನು ಮನಗಂಡು ಸರ್ಕಾರ ಕಲ್ಪವೃಕ್ಷ ಕಾಯಕ ಯೋಜನೆಯನ್ನು ಜಾರಿಗೆ ತಂದಿದ್ದು, ಕೆಳಕಂಡಂತೆ ಸಹಾಯಧನ ನೀಡಲಾಗುತ್ತಿದೆ.

ಕ್ರ.ಸಂ	ಉದ್ದಿಮೆಯ ಪ್ರಕಾರ	ಸಹಾಯಧನ ಪ್ರಮಾಣ (ಗರಿಷ್ಠ ಮಿತಿ) (ರೂ. ಲಕ್ಷಗಳಲ್ಲಿ)					
		ಸಾಮಾನ್ಯ		ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಥವಾ ಮಹಿಳೆ		ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಮಹಿಳೆ	
		%	ಗರಿಷ್ಠ ಮಿತಿ	%	ಗರಿಷ್ಠ ಮಿತಿ	%	ಗರಿಷ್ಠ ಮಿತಿ
1	ಸೂಕ್ಷ್ಮ ಘಟಕ (ಸ್ವ ಸಹಾಯ ಸಂಘ/ಸಹಕಾರಿ ಸಂಘ)	60	40.00	+5	42.00	+5	44.00
2	ಸೂಕ್ಷ್ಮ ಘಟಕ	50	40.00	+5	42.00	+5	44.00
3	ಸಣ್ಣ ಕೈಗಾರಿಕೆ	40	200.00	+5	210.00	+5	220.00
4	ಸಣ್ಣ ಕೈಗಾರಿಕೆ (Thrust Sector)	45	250.00	+5	265.00	+5	280.00
5	ಮಧ್ಯಮ ಕೈಗಾರಿಕೆ	30	300.00	+5	310.00	+5	320.00
6	ಮಧ್ಯಮ ಕೈಗಾರಿಕೆ (Thrust Sector)	35	350.00	+5	365.00	+5	380.00

ತೆಂಗಿನ ನಾರಿನ ಕೈಗಾರಿಕಾ ಘಟಕಗಳಿಗೆ ಕಳೆದ 3 ವರ್ಷಗಳ ಸರಾಸರಿ ವಹಿವಾಟಿನ ಮೇಲೆ ಶೇ.10ರಷ್ಟನ್ನು **ಮಾರುಕಟ್ಟೆ ಅಭಿವೃದ್ಧಿ ಸಹಾಯಧನವನ್ನು** ನೀಡಲಾಗುತ್ತಿದೆ. ಕನಿಷ್ಠ 120 ದಿನಗಳು ಕಾರ್ಯನಿರ್ವಹಿಸುವ ತೆಂಗಿನ ನಾರಿನ ಕುಶಲಕರ್ಮಿಗಳಿಗೆ ರೂ.10,000/-ಗಳ **ಪ್ರೋತ್ಸಾಹ ಮಜೂರಿ** ನೀಡುವುದರ ಮೂಲಕ ತೆಂಗಿನ ನಾರಿನ ಉದ್ಯಮಕ್ಕೆ ಉತ್ತೇಜನ ನೀಡಲಾಗುತ್ತಿದೆ.

ಸಿಐ 40 ಸಿಎಸ್‌ಸಿ 2021

(ಸಿ.ಸಿ. ಪಾಟೀಲ್)
ಸಣ್ಣ ಕೈಗಾರಿಕೆ ಹಾಗೂ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2317
ಸದಸ್ಯರ ಹೆಸರು	:	ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ (ಆಳಂದ)
ಉತ್ತರಿಸುವವರು	:	ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು
ಉತ್ತರಿಸುವ ದಿನಾಂಕ	:	19.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಕಲ್ಯಾಣ ಕರ್ನಾಟಕ ಭಾಗದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸ್ಥಾಪನೆಗೆ ಉತ್ತೇಜನ ನೀಡಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ;	1. ರಾಜ್ಯದಲ್ಲಿ ಹೊಸ ಕೈಗಾರಿಕಾ ನೀತಿ-2020-25ನ್ನು ಜಾರಿಗೆ ತಂದಿದ್ದು,ಈ ನೀತಿಯಡಿ ಕಲ್ಯಾಣ ಕರ್ನಾಟಕದ ಎಲ್ಲಾ ತಾಲ್ಲೂಕುಗಳನ್ನು ವಲಯ-1 (ಅತ್ಯಂತ ಹಿಂದುಳಿದ ತಾಲ್ಲೂಕು) ಎಂದು ವರ್ಗೀಕರಿಸಲಾಗಿದೆ. ಇದರಿಂದ ಈ ಭಾಗದ ತಾಲ್ಲೂಕುಗಳಲ್ಲಿ ಸ್ಥಾಪನೆಯಾಗುವ ಕೈಗಾರಿಕೆಗಳಿಗೆ ಇತರೆ ತಾಲ್ಲೂಕುಗಳಿಗಿಂತ ಹೆಚ್ಚು ಪ್ರೋತ್ಸಾಹ ಮತ್ತು ರಿಯಾಯಿತಿಗಳು ದೊರೆಯಲಿವೆ. 2. ಕರ್ನಾಟಕ ರಾಜ್ಯ ನೂತನ ಕೈಗಾರಿಕಾ ನೀತಿ 2020-25ರಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಈ ಕೆಳಕಂಡಂತೆ ಪ್ರೋತ್ಸಾಹ ಮತ್ತು ರಿಯಾಯಿತಿ ಸೌಲಭ್ಯಗಳನ್ನು ನೀಡಲು ಅವಕಾಶ ಕಲ್ಪಿಸಿದೆ. • ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕ ರಿಯಾಯಿತಿ • ಇಟಿಪಿ ಘಟಕ ಸಹಾಯಧನ. • ಅಂಕರ್ ಘಟಕ ಸಹಾಯಧನ. • ಭೂ ಪರಿವರ್ತನಾ ಶುಲ್ಕ ಮರುಪಾವತಿ. • ವಹಿವಾಟಿನ ಮೇಲೆ ಸಹಾಯಧನ. • ಖಾಸಗಿ ಕೈಗಾರಿಕಾ ಪಾರ್ಕ್ ಅಭಿವೃದ್ದಿದಾರರಿಗೆ ಪ್ರೋತ್ಸಾಹಗಳು. • ಫಾರ್ಮ ಪಾರ್ಕ್ ಮೆಡಿಕಲ್ ಡಿವೈಸ್ ಪಾರ್ಕ್‌ಗಳಿಗೆ ಪ್ರೋತ್ಸಾಹಗಳು. • ಆರೋಗ್ಯ ರಕ್ಷಣೆ ಉದ್ದಿಮೆದಾರರಿಗೆ ಬೆಂಬಲ. • ಸಂಶೋಧನೆ ಮತ್ತು ಅಭಿವೃದ್ದಿ ಕೇಂದ್ರಗಳ ಸ್ಥಾಪನೆಗೆ ಬೆಂಬಲ. • ಕೌಶಲ್ಯಾಭಿವೃದ್ದಿಗೆ ಬೆಂಬಲ.

		ಮುಂದುವರೆದಂತೆ, ವಿವಿಧ ವಲಯಗಳ ಕೈಗಾರಿಕಾಭಿವೃದ್ಧಿಗೆ ಕರ್ನಾಟಕ ಏರೋಸ್ಪೇಸ್ ನೀತಿ 2013-23, ಕರ್ನಾಟಕ ಎಲೆಕ್ಟ್ರಿಕಲ್ ವೆಹಿಕಲ್ ಮತ್ತು ಎನರ್ಜಿ ಸ್ಟೋರೇಜ್ ಪಾಲಿಸಿ-2017 ಮತ್ತು ಹೊಸ ಟೆಕ್ಸ್‌ಟೈಲ್ ಮತ್ತು ಗಾರ್ಮೆಂಟ್ ನೀತಿ 2019-24 ಜಾರಿಯಲ್ಲಿದ್ದು, ಸದರಿ ನೀತಿಗಳಲ್ಲಿ ಸಹ ವಿವಿಧ ಪ್ರೋತ್ಸಾಹ ಮತ್ತು ರಿಯಾಯಿತಿ ನೀಡಲು ಅವಕಾಶ ಕಲ್ಪಿಸಿದೆ.
ಆ	ಸದರಿ ಕೈಗಾರಿಕೆ ಸ್ಥಾಪನೆಗಾಗಿ ಎಷ್ಟು ಅನುದಾನವನ್ನು ಮೀಸಲಿರಿಸಲಾಗಿದೆ; (ವಿವರ ನೀಡುವುದು)	ಕೈಗಾರಿಕಾ ಘಟಕಗಳಿಗೆ ಕೈಗಾರಿಕಾ ನೀತಿ 2020-25ರಡಿ ಬಂಡವಾಳ ಹೂಡಿಕೆ ಸಹಾಯಧನ, ಇಟಿಪಿ ಘಟಕ ಸಹಾಯಧನ, ಅಂಕರ್ ಘಟಕ ಸಹಾಯಧನ, ಭೂ ಪರಿವರ್ತನಾ ಶುಲ್ಕ ಮರುಪಾವತಿ ಮಂಜೂರು ಮಾಡಲು ಅವಕಾಶವಿದ್ದು ಅರ್ಹ ಕೈಗಾರಿಕೆಗಳಿಗೆ ಮಂಜೂರಾತಿ ನಂತರ ಸರ್ಕಾರದಿಂದ ಅನುದಾನ ಲಭ್ಯತೆ ಆಧರಿಸಿ ಆಯವ್ಯಯದ ಮೂಲಕ ಅನುದಾನ ಪಡೆದು ಬಿಡುಗಡೆ ಮಾಡಲಾಗುವುದು.
ಇ	ಆಳಂದ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬೃಹತ್ ಹಾಗೂ ಮಧ್ಯಮ ಕೈಗಾರಿಕೆಗಳಿಲ್ಲದೇ ಇರುವುದರಿಂದ ಈ ಭಾಗದ ನಿರುದ್ಯೋಗಿಗಳು ಬೆಂಗಳೂರು ಹಾಗೂ ಇತರೆ ಮಹಾನಗರಗಳಿಗೆ ವಲಸೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು.
ಈ	ಬಂದಿದ್ದಲ್ಲಿ, ನಿರುದ್ಯೋಗದ ಸಮಸ್ಯೆ ಬಗೆಹರಿಸುವ ದೃಷ್ಟಿಯಿಂದ ಆಳಂದ ತಾಲ್ಲೂಕಿನಲ್ಲಿ ಬೃಹತ್ ಹಾಗೂ ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಲು ರೈತರು ತಮ್ಮ ಜಮೀನುಗಳನ್ನು ನೀಡಲು ಮುಂದೆ ಬಂದಿದ್ದು, ಈ ಬಗ್ಗೆ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗುವುದು? (ವಿವರ ನೀಡುವುದು)	ಆಳಂದ ತಾಲ್ಲೂಕಿನಲ್ಲಿ ಬೃಹತ್ ಹಾಗೂ ಮಧ್ಯಮ ಕೈಗಾರಿಕೆಗಳನ್ನು ಸ್ಥಾಪಿಸಲು ಕೈಗಾರಿಕೋದ್ಯಮಿಗಳು ಮುಂದೆ ಬಂದಲ್ಲಿ ಇಲಾಖೆಯಿಂದ ಬೆಂಬಲ ಸೇವೆ ಒದಗಿಸಲಾಗುವುದು.

ಸಿಐ 113 ಎಸ್‌ಪಿಐ 2021

(ಜಗದೀಶ್ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

ಕರ್ನಾಟಕ ವಿಧಾನಸಭೆ

ಮಾನ್ಯ ವಿಧಾನ ಸಭೆಯ ಸದಸ್ಯರ ಹೆಸರು	:	ಡಾ|| ಯತೀಂದ್ರ ಸಿದ್ಧರಾಮಯ್ಯ (ವರುಣ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2880
ಉತ್ತರಿಸಬೇಕಾದ ದಿನಾಂಕ	:	19.03.2021
ಉತ್ತರಿಸಬೇಕಾದ ಸಚಿವರು	:	ಸಹಕಾರ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಸರ್ಕಾರೇತರ ನೋಂದಾಯಿತ ಗೃಹ ನಿರ್ಮಾಣ ಸಹಕಾರ ಸಂಘಗಳು ಖಾಸಗಿ ಬಡಾವಣೆಗಳನ್ನು ರಚಿಸಿ, ನಿವೇಶನಗಳನ್ನು ಹಂಚಿಕೆ ಮಾಡುತ್ತಿರುವುದು ಸರಿಯಷ್ಟೇ, ಆದರೆ ಕೆಲವು ಗೃಹ ನಿರ್ಮಾಣ ಸಂಘಗಳು 10-12 ವರ್ಷಗಳು ಕಳೆದರೂ ಸಹ ನಿವೇಶನ ಹಂಚಿಕೆ ಮಾಡದೆ ವಿಳಂಬ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಗೃಹ ನಿರ್ಮಾಣ ಸಹಕಾರ ಸಂಘಗಳು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರಡಿ ನೊಂದಾಯಿತಗೊಂಡು ಕಾರ್ಯನಿರ್ವಹಿಸಬೇಕಾಗಿದೆ. ಈ ರೀತಿ ನೊಂದಣಿಯಾದ ಗೃಹ ನಿರ್ಮಾಣ ಸಹಕಾರ ಸಂಘಗಳು 10-12 ವರ್ಷಗಳು ಕಳೆದರೂ ಸಹ ನಿವೇಶನ ಹಂಚಿಕೆ ಮಾಡದೆ ವಿಳಂಬ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ನೋಂದಣಿಯಾಗಿ 10 ವರ್ಷಕ್ಕೂ ಮೇಲ್ಪಟ್ಟ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡದೆ ಬಾಕಿ ಉಳಿಸಿಕೊಂಡಿರುವ ಸಂಘಗಳು ಎಷ್ಟು; ಈ ಸಂಘಗಳ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)	ರಾಜ್ಯದಲ್ಲಿನ ಒಟ್ಟು 265 ಗೃಹ ನಿರ್ಮಾಣ ಸಹಕಾರ ಸಂಘಗಳು 10 ವರ್ಷಕ್ಕೂ ಮೇಲ್ಪಟ್ಟ ತನ್ನ ಸದಸ್ಯರಿಗೆ ನಿವೇಶನ ಹಂಚಿಕೆ ಮಾಡಿರುವುದಿಲ್ಲ. ಈ ಸಂಘಗಳ ಪೈಕಿ 33 ಗೃಹ ನಿರ್ಮಾಣ ಸಹಕಾರ ಸಂಘಗಳ ವಿರುದ್ಧ ಸಹಕಾರ ಸಂಘಗಳ ಅಧಿನಿಯಮ 1959 ರ ಕಲಂ 64 ರ ವಿಚಾರಣೆಗೆ, 08 ಗೃಹ ನಿರ್ಮಾಣ ಸಹಕಾರ ಸಂಘಗಳ ವಿರುದ್ಧ ಕಲಂ 65 ರ ಪರಿವೀಕ್ಷಣೆಗೆ ಆದೇಶಿಸಲಾಗಿದೆ. ಮುಂದುವರೆದು ನಿವೇಶನ ಹಂಚಿಕೆಯಲ್ಲಿ ವಿಳಂಬ/ಮೋಸ ವಂಚನೆ ಸಂಬಂಧ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 69 ರಡಿ 02 ಅಧಿಭಾರ ಪ್ರಕರಣಗಳು ದಾಖಲಾಗಿರುತ್ತವೆ. 256 ದಾವಾ ಪ್ರಕರಣಗಳು ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 70 ರಡಿ ದಾಖಲಾಗಿರುತ್ತವೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.
ಇ)	ಈ ರೀತಿ ವಿಳಂಬದಿಂದ ನಿವೇಶನ ಆಕಾಂಕ್ಷಿಗಳಿಗೆ ತೊಂದರೆಯಾಗಿರುವುದು ಮತ್ತು ಮನೆ ನಿರ್ಮಾಣ ವೆಚ್ಚ ಸಹ ಹೊರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ನಿಗದಿತ ಕಾಲಮಿತಿಯಲ್ಲಿ ನಿವೇಶನ ಹಂಚಿಕೆ ಮಾಡಲು ಯಾವ ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು? (ವಿವರ ನೀಡುವುದು)	ಗೃಹ ನಿರ್ಮಾಣ ಸಹಕಾರ ಸಂಘಗಳು ನಿವೇಶನ ನೀಡುವ ಉದ್ದೇಶವನ್ನು ಹೊಂದಿದ್ದು, ಸದರಿ ಉದ್ದೇಶಕ್ಕನುಗುಣವಾಗಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಿ ನಿವೇಶನಗಳನ್ನು ಕಾಲಮಿತಿಯಲ್ಲಿ ಹಂಚಿಕೆ ಮಾಡುವ ಜವಾಬ್ದಾರಿಯು ಸಂಘದ ಆಡಳಿತ ಮಂಡಳಿಯದ್ದಾಗಿರುತ್ತದೆ. ಸರ್ಕಾರದಿಂದ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಕಾಲಮಿತಿಯನ್ನು ನಿಗದಿಪಡಿಸಲಾಗಿರುವುದಿಲ್ಲ. ಕಾಲಮಿತಿಯಲ್ಲಿ ನಿವೇಶನ ಹಂಚಿಕೆ ಮಾಡದ ಬಗ್ಗೆ, ಬಾಧಿತ ಸದಸ್ಯರು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 70 ರಡಿ ದಾವಾ ದಾಖಲಿಸಿ ಪರಿಹಾರ ಕಂಡು ಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಸಿಒ 13 ಸಿಹೆಚ್‌ಎಸ್ 2021 (ಇ)

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು

ಅನುಬಂಧ -1

ಕ್ರ ಸಂ	ಜಿಲ್ಲೆ ಹೆಸರು	ಪ್ರಕರಣ 64 ರಡಿವಿಚಾರಣೆಗೆ ಆದೇಶಿಸಿರುವ ಪ್ರಕರಣಗಳ ಸಂಖ್ಯೆ	ಪ್ರಕರಣ 65 ರಡಿ ಪರಿವೀಕ್ಷಣೆಗೆ ಆದೇಶಿಸಿರುವ ಪ್ರಕರಣಗಳ ಸಂಖ್ಯೆ	ಪ್ರಕರಣ 69 ರಡಿ ದಾಖಲಾಗಿರುವ ಅಧಿಭಾರ ಪ್ರಕರಣಗಳ ಸಂಖ್ಯೆ	ಪ್ರಕರಣ 70 ರಡಿ ದಾಖಲಾಗಿರುವ ದಾವಾ ಪ್ರಕರಣಗಳ ಸಂಖ್ಯೆ
1	ಬೆಂಗಳೂರು	9	4	2	213
2	ಬೆಂಗಳೂರು ಗ್ರಾಮಾಂತರ ಜಿಲ್ಲೆ	0	0	0	0
3	ತುಮಕೂರು ಜಿಲ್ಲೆ	0	0	0	0
4	ಚಿತ್ರದುರ್ಗ ಜಿಲ್ಲೆ	0	0	0	0
5	ದಾವಣಗೆರೆ ಜಿಲ್ಲೆ	0	0	0	0
6	ಶಿವಮೊಗ್ಗ ಜಿಲ್ಲೆ	0	0	0	0
7	ಕೋಲಾರ ಜಿಲ್ಲೆ	0	0	0	0
8	ಚಿಕ್ಕಬಳ್ಳಾಪುರ ಜಿಲ್ಲೆ	0	0	0	0
9	ರಾಮನಗರ ಜಿಲ್ಲೆ	0	0	0	0
10	ಮೈಸೂರು	19	1	0	0
11	ಚಾಮರಾಜನಗರ.	0	0	0	0
12	ಮಂಡ್ಯ	3	0	0	0
13	ಹಾಸನ	1	0	0	0
14	ಚಿಕ್ಕಮಗಳೂರು	1	2	0	0
15	ಕೊಡಗು	0	0	0	0
16	ದಕ್ಷಿಣ ಕನ್ನಡ	0	0	0	0
17	ಉಡುಪಿ	0	0	0	0
18	ಬೆಳಗಾವಿ	0	1	0	43
19	ವಿಜಯಪುರ	0	0	0	0
20	ಬಾಗಲಕೋಟ	0	0	0	0
21	ಧಾರವಾಡ	0	0	0	0
22	ಗದಗ	0	0	0	0
23	ಹಾವೇರಿ	0	0	0	0
24	ಕಾರವಾರ	0	0	0	0
25	ಬಳ್ಳಾರಿ	0	0	0	0
26	ಬೀದರ	0	0	0	0
27	ಕಲಬುರಗಿ	0	0	0	0
28	ಕೊಪ್ಪಳ	0	0	0	0
29	ರಾಯಚೂರು	0	0	0	0
30	ಯಾದಗಿರಿ	0	0	0	0
	ಒಟ್ಟು	33	8	2	256

(signature)

ಸಹಕಾರ ಸಂಘಗಳ ಅಪರ ನಿಬಂಧಕರು
(ವಸತಿ ಮತ್ತು ಇತರೆ)
ಸಹಕಾರ ಸಂಘಗಳ ನಿಬಂಧಕರ ಕಛೇರಿ.
ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2885
ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ಅಶೋಕ್ ನಾಯಕ್ ಕೆ.ಬಿ. (ಶಿವಮೊಗ್ಗ ಗ್ರಾಮಾಂತರ)
ಉತ್ತರಿಸಬೇಕಾದ ದಿನಾಂಕ	:	19.03.2021
ಉತ್ತರಿಸುವ ಸಚಿವರು	:	ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ನ್ಯಾಯಬೆಲೆ ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ. (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ಶಿವಮೊಗ್ಗ ಜಿಲ್ಲೆಯಲ್ಲಿ 571 ನ್ಯಾಯಬೆಲೆ ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ. ನ್ಯಾಯಬೆಲೆ ಅಂಗಡಿಯ ವಿವರ ಈ ಕೆಳಗಿನಂತಿದೆ;
<table>
<tr><th>ಕ್ರ.ಸಂ</th><th>ತಾಲ್ಲೂಕಿನ ಹೆಸರು</th><th>ಚಾಲ್ತಿಯಲ್ಲಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ</th></tr>
<tr><td>1</td><td>ಶಿವಮೊಗ್ಗ ಪಡಿತರ ಪ್ರದೇಶ</td><td>66</td></tr>
<tr><td>2</td><td>ಶಿವಮೊಗ್ಗ ಗ್ರಾಮಾಂತರ</td><td>64</td></tr>
<tr><td>3</td><td>ಭದ್ರಾವತಿ ಪಡಿತರ ಪ್ರದೇಶ</td><td>51</td></tr>
<tr><td>4</td><td>ಭದ್ರಾವತಿ ಗ್ರಾಮಾಂತರ</td><td>79</td></tr>
<tr><td>5</td><td>ಸಾಗರ</td><td>60</td></tr>
<tr><td>6</td><td>ಶಿಕಾರಿಪುರ</td><td>82</td></tr>
<tr><td>7</td><td>ಸೊರಬ</td><td>69</td></tr>
<tr><td>8</td><td>ತೀರ್ಥಹಳ್ಳಿ</td><td>57</td></tr>
<tr><td>9</td><td>ಹೊಸನಗರ</td><td>43</td></tr>
<tr><td colspan="2">ಒಟ್ಟು</td><td>571</td></tr>
</table></td></tr>
<tr><td>ಆ</td><td>ಈ ನ್ಯಾಯಬೆಲೆ ಅಂಗಡಿಗಳಲ್ಲಿ ಎಷ್ಟು ಅಂಗಡಿಗಳನ್ನು ಸಹಕಾರಿ ಸಂಸ್ಥೆಗಳಿಗೆ ಹಾಗೂ ಖಾಸಗಿಯವರಿಗೆ ವಹಿಸಲಾಗಿದೆ; (ತಾಲ್ಲೂಕುವಾರು, ನ್ಯಾಯಬೆಲೆ ಅಂಗಡಿವಾರು ಮಾಹಿತಿ ನೀಡುವುದು)</td><td>ಶಿವಮೊಗ್ಗ ಜಿಲ್ಲೆಯಲ್ಲಿ ಸಹಕಾರ ಸಂಘಗಳಿಗೆ 186 ನ್ಯಾಯಬೆಲೆ ಅಂಗಡಿಗಳು ಹಾಗೂ ಖಾಸಗಿಯವರಿಗೆ 385 ನ್ಯಾಯಬೆಲೆ ಅಂಗಡಿಗಳನ್ನು ವಹಿಸಲಾಗಿದೆ. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.
<table>
<tr><th>ಕ್ರ.ಸಂ</th><th>ತಾಲ್ಲೂಕಿನ ಹೆಸರು</th><th>ಸಹಕಾರಿ ಸಂಘದಿಂದ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ</th><th>ಖಾಸಗಿ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ</th></tr>
<tr><td>1</td><td>ಶಿವಮೊಗ್ಗ ಪಡಿತರ ಪ್ರದೇಶ</td><td>4</td><td>62</td></tr>
<tr><td>2</td><td>ಶಿವಮೊಗ್ಗ ಗ್ರಾಮಾಂತರ</td><td>23</td><td>41</td></tr>
</table></td></tr>
</table>

		3	ಭದ್ರಾವತಿ ಪಡಿತರ ಪ್ರದೇಶ	4	47
		4	ಭದ್ರಾವತಿ ಗ್ರಾಮಾಂತರ	32	47
		5	ಸಾಗರ	25	35
		6	ಶಿಕಾರಿಪುರ	35	47
		7	ಸೊರಬ	24	45
		8	ತೀರ್ಥಹಳ್ಳಿ	24	33
		9	ಹೊಸನಗರ	15	28
			ಒಟ್ಟು	186	385

ಇ	ಕರ್ನಾಟಕ ರಾಜ್ಯದ ತಾಂಡಗಳಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು?	ಹೌದು. ಕರ್ನಾಟಕ ಅಗತ್ಯ ವಸ್ತುಗಳ ಕಾಯ್ದೆ ಸಾರ್ವಜನಿಕ ವಿತರಣಾ ಪದ್ಧತಿಯ (ನಿಯಂತ್ರಣ) ಆದೇಶ 2016 ರ clause 11(2)ರಂತೆ ಗ್ರಾಮಾಂತರ ಪ್ರದೇಶದಲ್ಲಿ ಕನಿಷ್ಟ 500 ಪಡಿತರ ಚೀಟಿಗಳಿಗೆ ಹಾಗೂ ನಗರ/ಪಟ್ಟಣ ಪ್ರದೇಶಗಳಲ್ಲಿ 800 ಪಡಿತರ ಚೀಟಿಗಳಿಗೆ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಅವಕಾಶವಿರುತ್ತದೆ. ಇದಲ್ಲದೆ ವಿಶೇಷ ಸಂದರ್ಭಗಳಲ್ಲಿ ಗುಡ್ಡಗಾಡು ಪ್ರದೇಶ, ತಾಂಡಗಳು ಇತ್ಯಾದಿ ಪ್ರದೇಶಗಳಲ್ಲಿ ಕಡಿಮೆ ಸಂಖ್ಯೆ ಪಡಿತರ ಚೀಟಿಗಳಿದ್ದರೂ ನ್ಯಾಯಬೆಲೆ ಅಂಗಡಿ ತೆರೆಯಲು ಅವಕಾಶವಿದ್ದು, ಅಗತ್ಯಕ್ಕೆ ಅನುಗುಣವಾಗಿ 100 ಪಡಿತರ ಚೀಟಿಗಳಿಗೆ ಒಂದು ನ್ಯಾಯಬೆಲೆ ಅಂಗಡಿಯನ್ನು ತೆರೆಯಬಹುದು. ಈ ಬಗ್ಗೆ ಜಿಲ್ಲೆಗಳ ಹಂತದಲ್ಲಿ ಜಂಟಿ/ಉಪನಿರ್ದೇಶಕರು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಇವರಿಂದ ಕ್ರಮವಹಿಸಲಾಗುತ್ತದೆ.

ಆನಾಸ 29 ಆನಾಸ 2021 (ಇ-ಆಫೀಸ್)

(ಉಮೇಶ್ ವಿ. ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನಸಭೆ

ಮಾನ್ಯ ವಿಧಾನಸಭೆ ಸದಸ್ಯರ ಹೆಸರು	:	ಶ್ರೀ ಮಂಜುನಾಥ್ ಎ. (ಮಾಗಡಿ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2892
ಉತ್ತರಿಸಬೇಕಾದ ದಿನಾಂಕ	:	19.03.2021
ಉತ್ತರಿಸಬೇಕಾದ ಸಚಿವರು	:	ಸಹಕಾರ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಮಾಗಡಿ ವಿಧಾನಸಭಾ ಕ್ಷೇತ್ರದ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬಾನಂದೂರು ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ ಸುಮಾರು 33 ಎಕರೆ ಕೃಷಿ ಜಮೀನನ್ನು ದಿ ಮೈಕೊ ಅಸೋಸಿಯೇಟ್ಸ್ ಹೌಸಿಂಗ್ ಕೋ-ಅಪರೇಟೀವ್ ಸೊಸೈಟಿ ಲಿ., ವಿಲ್ಸನ್ ಗಾರ್ಡನ್, ಬೆಂಗಳೂರು ಇವರು ನಿವೇಶನ ಹಂಚಿಕೆ ಮಾಡಲು ಅಕ್ರಮವಾಗಿ ಖರೀದಿಸಿರುವುದು ಸಾಭಿತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ದಿ ಮೈಕೊ ಅಸೋಸಿಯೇಟ್ಸ್ ಹೌಸಿಂಗ್ ಕೋ-ಅಪರೇಟೀವ್ ಸೊಸೈಟಿ ಲಿ., ವಿಲ್ಸನ್ ಗಾರ್ಡನ್, ಬೆಂಗಳೂರು ಈ ಸಂಘವು ತನ್ನ ಬೈಲಾ ಉದ್ದೇಶಗಳ ಅವಕಾಶಗಳಿಗೆ ಒಳಪಟ್ಟು ಮಾಗಡಿ ವಿಧಾನ ಸಭಾ ಕ್ಷೇತ್ರದ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬಾನಂದೂರು ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ 33 ಎಕರೆ ಕೃಷಿ ಜಮೀನನ್ನು ಅಭಿವೃದ್ಧಿದಾರರ ಮುಖೇನ ಕರಾರು ಒಪ್ಪಂದ ಮಾಡಿಕೊಂಡು ಭೂ ಮಾಲೀಕರಿಂದ ಜಮೀನು ಖರೀದಿಸಿದ್ದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	2014-15, 2015-16, ಹಾಗೂ 2016-17 ನೇ ಸಾಲಿನ ಲೆಕ್ಕಪರಿಶೀಲನೆಯಲ್ಲಿ ಸದರಿ ಸೊಸೈಟಿಯಲ್ಲಿ ಹಣ ದುರುಪಯೋಗವಾಗಿರುವುದು ಕಂಡು ಬಂದಿದ್ದು, ಈ ಬಗ್ಗೆ ಮರು ಲೆಕ್ಕ ಪರಿಶೀಲನೆಗಾಗಿ ಜಂಟಿ ನಿಬಂಧಕರು, ಬೆಳಗಾವಿ ಇವರ ಹೆಸರನ್ನು ಅಂತಿಮಗೊಳಿಸಿ ಆದೇಶ ಹೊರಡಿಸಲಾಗಿದೆಯೇ;	ಸಂಘದ 2014-15, 2015-16, ಹಾಗೂ 2016-17 ನೇ ಸಾಲುಗಳ ಲೆಕ್ಕಪರಿಶೋಧನೆಯನ್ನು ಸನ್ನದು ಲೆಕ್ಕಪರಿಶೋಧಕರು ನಿರ್ವಹಿಸಿದ್ದು, ಲೆಕ್ಕಪರಿಶೋದಕರು ಲೆಕ್ಕಪರಿಶೋಧನಾ ವರದಿಯಲ್ಲಿ ಹಣ ದುರುಪಯೋಗವನ್ನು ವರದಿ ಮಾಡಿರುವುದಿಲ್ಲ ಆದರೆ 2013-14, 2014-15 ಮತ್ತು 2015-16ನೇ ಸಾಲುಗಳ ಲೆಕ್ಕಪರಿಶೋದನೆಯನ್ನು ಒಬ್ಬರೇ ಲೆಕ್ಕಪರಿಶೋಧಕರು ಸತತವಾಗಿ ಮೂರು ವರ್ಷ ನಿರ್ವಹಿಸಿದ್ದರಿಂದ ಮೂರನೇ ವರ್ಷದ ಅಂದರೆ 2015-16ನೇ ಸಾಲಿನ ಲೆಕ್ಕಪರಿಶೋದನಾ ವರದಿಯನ್ನು ಅಸಿಂಧುಗೊಳಿಸಿ ಬೇರೊಬ್ಬ ಲೆಕ್ಕಪರಿಶೊಧಕರಿಗೆ ಹಂಚಿಕೆ ಮಾಡಲಾಗಿದೆ. ಮುಂದುವರೆದು, ಸಂಘದ ವಿರುದ್ಧ ದೂರು ಸಲ್ಲಿಕೆಯಾದ ಹಿನ್ನೆಲೆಯಲ್ಲಿ ಸದರಿ ಸಂಘದ 2016-17, 2017-18 ಮತ್ತು 2018-19ನೇ ಸಾಲುಗಳ ಮರುಲೆಕ್ಕಪರಿಶೋಧನೆ ಕೈಗೊಳ್ಳಲು ಸಹಕಾರ ಸಂಘಗಳ ಜಂಟಿ ನಿರ್ದೇಶಕರು ಬೆಳಗಾವಿ ಇವರನ್ನು ನೇಮಿಸಿ ದಿನಾಂಕ: 12-11-2020 ರಂದು ಆದೇಶ ಹೊರಡಿಸಲಾಗಿರುತ್ತದೆ.
ಇ)	ದಿ ಮೈಕೋ ಅಸೋಸಿಯೇಟ್ಸ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ., ವಿಲ್ಸನ್ ಗಾರ್ಡನ್, ಬೆಂಗಳೂರು ಇವರ ಹಣದುರುಪಯೋಗ ಕುರಿತು ಮರು ಲೆಕ್ಕ ಪರಿಶೀಲನೆಗಾಗಿ ಜಂಟಿ ನಿಬಂಧಕರು, ಬೆಳಗಾವಿ ಇವರ ಆದೇಶವನ್ನು ಮಾರ್ಪಡಿಸಿ ಖಾಸಗಿ ಲೆಕ್ಕಪರಿಶೋಧಕರಾದಂತಹ ಬೆನಕಪ್ಪ ಮತ್ತು ಕಂಪನಿಯವರಿಗೆ ಮರು ಆದೇಶ ಹೊರಡಿಸಲಾಗಿದೆಯೇ;	ಹೌದು

ಈ)	ದಿ ಮೈಕೊ ಅಸೋಸಿಯೇಟ್ಸ್ ಹೌಸಿಂಗ್ ಕೋ-ಅಪರೇಟೀವ್ ಸೊಸೈಟಿ ಲಿ., ವಿಲ್ಸನ್ ಗಾರ್ಡನ್, ಬೆಂಗಳೂರು ಇವರ ಹಣದುರುಪಯೋಗದಿಂದ ಜಮೀನನ್ನು ಕಳೆದುಕೊಂಡ ರೈತರಿಗೆ ಅನ್ಯಾಯವಾಗಿರುವುದರಿಂದ ಈ ಕುರಿತು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಸಂಘವು ಜಮೀನನ್ನು ಭೂ ಮಾಲೀಕರಿಂದ ಮತ್ತು ಅಭಿವೃದ್ಧಿದಾರರ ಮೂಲಕ ಕ್ರಯ ಮುಖೇನ ಜಮೀನು ಖರೀದಿ ಮಾಡಿರುವುದರಿಂದ ರೈತರಿಗೆ ಅನ್ಯಾಯವಾಗಿರುತ್ತದೆ ಎಂದು ಅಭಿಪ್ರಾಯಿಸಲಾಗುವುದಿಲ್ಲ. ಜಮೀನು ಮಾರಾಟ ಮಾಡಿದ ರೈತರು ಭೂ ಮಾರಾಟ ಮತ್ತು ಹಣ ಪಾವತಿ ಸಂಬಂಧ ಬಾಧಿತರಾಗಿದ್ದಲ್ಲಿ, ಸಕ್ಷಮ ಅಧಿಕಾರ ಹೊಂದಿರುವ ಸಿವಿಲ್ ನ್ಯಾಯಾಲಯದಲ್ಲಿ ವ್ಯಾಜ್ಯ ಹೂಡಿ ಪರಿಹಾರ ಕಂಡುಕೊಳ್ಳಬಹುದಾಗಿದೆ.

ಸಂಖ್ಯೆ:ಸಿಇ 15 ಸಿಹೆಚ್ಎಸ್ 2021 (ಇ)

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3053
ಸದಸ್ಯರ ಹೆಸರು	ಶ್ರೀ ನಿಸರ್ಗ ನಾರಾಯಣ ಸ್ವಾಮಿ ಎಲ್.ಎನ್.
ಉತ್ತರಿಸಬೇಕಾದ ದಿನಾಂಕ	19.03.2021
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ ತಡೆಗಟ್ಟಲು ಸರ್ಕಾರವು ಕೈಗೊಂಡಿರುವ ಸೂಕ್ತ ಕ್ರಮಗಳೇನು; (ಮಾಹಿತಿ ನೀಡುವುದು)	ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿರುವವರ ವಿರುದ್ಧ ತಂದಿರುವ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರಂತೆ ಮೊಕದ್ದಮೆಗಳನ್ನು ದಾಖಲಿಸಿ, ದಂಡ ವಿಧಿಸಿ ಸಂಗ್ರಹಿಸಲು ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುತ್ತಿದೆ. ಅನಧಿಕೃತ ಕಲ್ಲುಗಣಿಗಾರಿಕೆ ಸಂಬಂಧ ಕೈಗೊಂಡ ಕ್ರಮಗಳ ವಿವರ ಕೆಳಕಂಡಂತಿದೆ: **ಕಲ್ಲು ಗಣಿಗಾರಿಕೆ :-** (ರೂ.ಲಕ್ಷಗಳಲ್ಲಿ) (see table below)
ಆ)	ಪೂರ್ಣ ಪ್ರಮಾಣದಲ್ಲಿ ಅಕ್ರಮ ಗಣಿಗಾರಿಕೆ ತಡೆಯದೇ ಅನಾಹುತಗಳು ಪದೇಪದೇ ನಡೆಯುತ್ತಿದ್ದು, ಸರ್ಕಾರವು . ಈ ನಿಟ್ಟಿನಲ್ಲಿ ಕೈಗೊಂಡಿರುವ ಪರಿಣಾಮಕಾರಿ ಕ್ರಮಗಳೇನು (ಪೂರ್ಣ ವಿವರವನ್ನು ನೀಡುವುದು)	• ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ 21 ಎಂಎಂಎನ್ (2) 2014, ದಿನಾಂಕ 21.01.2014 ರಂತೆ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957ರ ಕಲಂ 21 ಹಾಗೂ 22 ರಡಿ ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 43 ಮತ್ತು 46 ರಂತೆ ಅನಧಿಕೃತ ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನು ವಿರುದ್ಧ ಕ್ರಮವಹಿಸಲು, ಕಂದಾಯ, ಅರಣ್ಯ, ಪೊಲೀಸ್ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.

ಕ್ರ. ಸಂ	ವರ್ಷ	ಪತ್ತೆ ಹಚ್ಚಿದ ಪ್ರಕರಣಗಳು	ದಾಖಲಿಸಿರುವ ಮೊಕದ್ದಮೆಗಳ ಸಂಖ್ಯೆ	ವಸೂಲಾದ ದಂಡ
1.	2018-19	413	108	1213.37
2.	2019-20	266	117	908.70
3.	2020-21	580	99	781.06
	ಒಟ್ಟು	**1259**	**324**	**2903.13**

--2

		• ಅನಧಿಕೃತ ಕಲ್ಲು ಗಣಿಗಾರಿಕೆ / ಸಾಗಾಣಿಕೆಯನ್ನು ನಿಯಂತ್ರಿಸಲು ಜಿಲ್ಲಾ ಟಾಸ್ಕ್ ಫೋರ್ಸ್ (ಗಣಿ) ಸಮಿತಿಯಿಂದ ರಾಜ್ಯದಲ್ಲಿ ಆಯಕಟ್ಟಿನ ಪ್ರದೇಶಗಳಲ್ಲಿ ತನಿಖಾ ಠಾಣೆಗಳನ್ನು ತೆರೆದು ಕಾರ್ಯ ನಿರ್ವಹಿಸಲಾಗುತ್ತಿದೆ. ಅಲ್ಲದೆ ಆಯಾ ಜಿಲ್ಲಾ ವ್ಯಾಪ್ತಿಗಳಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಚಾಲಿತ ದಳವನ್ನು ರಚಿಸಿಕೊಂಡು ಅನಧಿಕೃತ ಕಲ್ಲು ಗಣಿಗಾರಿಕೆ/ ಸಾಗಾಣಿಕೆಯನ್ನು ನಿಯಂತ್ರಿಸಲಾಗುತ್ತಿದೆ. • ಕಲ್ಲು ಗಣಿಗಾರಿಕೆಗೆ ಗುತ್ತಿಗೆ / ಲೈಸನ್ಸ್ ಮಂಜೂರು ಮಾಡುವ ಪೂರ್ವದಲ್ಲಿ ಕೇಂದ್ರ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ ಆದೇಶದಂತೆ ಸಂಬಂಧಪಟ್ಟ ಅರ್ಜಿದಾರರಿಂದ ಕಡ್ಡಾಯವಾಗಿ ಕ್ವಾರಿ ಯೋಜನೆ ಮತ್ತು ಪರಿಸರ ಅನುಮತಿ ಪತ್ರ ಪಡೆದು ಗುತ್ತಿಗೆ / ಲೈಸನ್ಸ್ ಗಳನ್ನು ಮಂಜೂರು ಮಾಡಲಾಗುತ್ತದೆ. • ರಾಜ್ಯ ವ್ಯಾಪ್ತಿಯಲ್ಲಿನ DGMS ನಿಂದ ಅನುಮತಿ ಪಡೆದು ಕಲ್ಲು ಗಣಿಗುತ್ತಿಗೆ ಕಾರ್ಯ ನಿರ್ವಹಿಸುವುದನ್ನು ಕಡ್ಡಾಯಗೊಳಿಸಲಾಗಿರುತ್ತದೆ.
ಇ)	ಅಕ್ರಮ ಗಣಿಗಾರಿಕೆ ತಡೆಗಟ್ಟುವಲ್ಲಿ ಪೊಲೀಸ್, ಕಂದಾಯ, ಗ್ರಾಮ ಪಂಚಾಯಿತಿ ಮತ್ತು ಗಣಿಗಾರಿಕೆ ಇಲಾಖೆಯ ಕರ್ತವ್ಯ ಹಾಗೂ ನಿರ್ವಹಿಸಬೇಕಾದ ಕ್ರಮಗಳೇನು? (ಪೂರ್ಣ ಮಾಹಿತಿ ನೀಡುವುದು)	ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ 21 ಎಂಎಂಎನ್ (2) 2014, ದಿನಾಂಕ 21.01.2014 ರಂತೆ ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957ರ ಕಲಂ 21 ಮತ್ತು 22 ರಡಿ ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 43 ಮತ್ತು 46 ರಂತೆ ಅನಧಿಕೃತ ಗಣಿಗಾರಿಕೆ, ಸಾಗಾಣಿಕೆ ಮತ್ತು ದಾಸ್ತಾನು ವಿರುದ್ಧ ಕ್ರಮವಹಿಸಲು, ಕಂದಾಯ, ಅರಣ್ಯ ಪೊಲೀಸ್ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಅಧಿಕಾರಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ. ಅದರಂತೆ ಸದರಿ ಇಲಾಖೆಯ ಅಧಿಕಾರಿಗಳು ಅಕ್ರಮ ಗಣಿ ಚಟುವಟಿಕೆ ತಡೆಗಟ್ಟಲು ಕ್ರಮವಹಿಸಬೇಕಾಗಿರುತ್ತದೆ.

ಸಂಖ್ಯೆ ಸಿಐ 192 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3054
ಸದಸ್ಯರ ಹೆಸರು	:	ಶ್ರೀ ನಿಸರ್ಗ ನಾರಾಯಣಸ್ವಾಮಿ ಎಲ್.ಎನ್. (ದೇವನಹಳ್ಳಿ)
ಉತ್ತರಿಸುವವರು	:	ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು
ಉತ್ತರಿಸುವ ದಿನಾಂಕ	:	19.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಸಾರ್ವಜನಿಕ ಉದ್ದಿಮೆಗಳಲ್ಲಿ ಸ್ಥಳೀಯ ಜನರಿಗೆ ಸರಿಯಾಗಿ ಉದ್ಯೋಗ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ನೀಡುವುದು)	ಡಾ: ಸರೋಜಿನಿ ಮಹಿಷಿ ವರದಿಯ ಪ್ರಕಾರ ರಾಜ್ಯದಲ್ಲಿ ಚಾಲ್ತಿಯಲ್ಲಿರುವ 50 ಕ್ಕಿಂತ ಹೆಚ್ಚು ಕಾರ್ಮಿಕರುಳ್ಳ ಸಾರ್ವಜನಿಕ ಹಾಗೂ ಖಾಸಗಿ ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಘಟಕಗಳಲ್ಲಿ ಎ ಮತ್ತು ಬಿ ವರ್ಗಗಳಲ್ಲಿ ಕ್ರಮವಾಗಿ ಶೇಕಡ 65 ಮತ್ತು ಶೇಕಡ 80 ಹಾಗೂ ಸಿ ಮತ್ತು ಡಿ ವರ್ಗಗಳಲ್ಲಿ ಶೇಕಡ 100 ರಷ್ಟು ಉದ್ಯೋಗಗಳನ್ನು ಕನ್ನಡಿಗರಿಗೆ/ಸ್ಥಳೀಯರಿಗೆ ಒದಗಿಸುವ ಬಗ್ಗೆ ಅಗತ್ಯ ಕ್ರಮಗಳನ್ನು ವಹಿಸಲಾಗುತ್ತಿದೆ. ಡಿಸೆಂಬರ್ 2020ರ ತ್ರೈಮಾಸಿಕ ಅಂತ್ಯಕ್ಕೆ ಡಾ: ಸರೋಜಿನಿ ಮಹಿಷಿ ವರದಿಯನ್ವಯ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವ್ಯಾಪ್ತಿಯಲ್ಲಿ ಕ್ರೂಢೀಕರಿಸಿರುವ ಮಾಹಿತಿಯಂತೆ ರಾಜ್ಯದಲ್ಲಿನ 50 ಕ್ಕಿಂತ ಹೆಚ್ಚು ಕಾರ್ಮಿಕರುಳ್ಳ ಒಟ್ಟು 1413 ಖಾಸಗಿ ಉತ್ಪಾದನಾ ಕೈಗಾರಿಕಾ ಘಟಕಗಳಲ್ಲಿ ಒಟ್ಟಾರೆ ಶೇಕಡ 94 ರಷ್ಟು ಉದ್ಯೋಗಗಳನ್ನು ಕನ್ನಡಿಗರಿಗೆ/ಸ್ಥಳೀಯರಿಗೆ ನೀಡಲಾಗಿದೆ.
ಆ	ಹಾಗಿದ್ದಲ್ಲಿ, ಸ್ಥಳೀಯರಿಗೆ ಉದ್ಯೋಗ ನೀಡಲು ಸರ್ಕಾರ ಉದ್ಯಮಕ್ಕೆ ಅನುಮತಿ ನೀಡುವ ಸಮಯದಲ್ಲಿ ವಿಧಿಸುವ ಷರತ್ತುಗಳೇನು; ನಿಯಮಾವಳಿಗಳೇನು; (ಮಾಹಿತಿ ನೀಡುವುದು)	ಡಾ: ಸರೋಜಿನಿ ಮಹಿಷಿ ವರದಿಯನ್ವಯ ರಾಜ್ಯದಲ್ಲಿ ಚಾಲ್ತಿಯಲ್ಲಿರುವ 50 ಕ್ಕಿಂತ ಹೆಚ್ಚು ಕಾರ್ಮಿಕರುಳ್ಳ ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಘಟಕಗಳಲ್ಲಿ ಕನ್ನಡಿಗರಿಗೆ/ಸ್ಥಳೀಯರಿಗೆ ಉದ್ಯೋಗಗಳನ್ನು ಒದಗಿಸುವಂತೆ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಗಳು ಹಾಗೂ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಗಳಲ್ಲಿ ಹೊಸ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಒಪ್ಪಿಗೆಯನ್ನು ನೀಡುವ ಸಂದರ್ಭದಲ್ಲಿ ಷರತ್ತನ್ನು ವಿಧಿಸಲಾಗುತ್ತಿದೆ. ಸದರಿ ಷರತ್ತಿನನ್ವಯ ಕನ್ನಡಿಗರಿಗೆ/ಸ್ಥಳೀಯರಿಗೆ ಉದ್ಯೋಗ ನೀಡಿರುವ ಬಗ್ಗೆ ಜಿಲ್ಲಾ ಮಟ್ಟದಲ್ಲಿ ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಕ್ರೂಢೀಕರಿಸಿ ಪರಿಶೀಲಿಸಲಾಗುತ್ತಿದೆ. ಮುಂದುವರೆದಂತೆ, ಕೈಗಾರಿಕಾ ನೀತಿ 2020-25ರನ್ವಯ ಸರ್ಕಾರದಿಂದ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಪಡೆಯುವ ಕೈಗಾರಿಕಾ ಘಟಕಗಳು "ಡಿ" ವರ್ಗದ ಉದ್ಯೋಗಗಳಲ್ಲಿ ಶೇಕಡ 100

		ರಷ್ಟು ಹಾಗೂ ಘಟಕದ ಒಟ್ಟಾರೆ ಉದ್ಯೋಗಗಳಲ್ಲಿ ಶೇಕಡ 70 ರಷ್ಟನ್ನು ಕನ್ನಡಿಗರಿಗೆ/ಸ್ಥಳೀಯರಿಗೆ ನೀಡುವ ನಿಬಂಧನೆಯಿದ್ದು ಅದರಂತೆ ಉದ್ಯೋಗಗಳನ್ನು ನೀಡಿದ ಘಟಕಗಳಿಗೆ ಮಾತ್ರ ಅರ್ಹ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಮಂಜೂರು ಮಾಡಲಾಗುತ್ತಿದೆ.
ಇ	ಸರ್ಕಾರದ ನಿಯಮಗಳು ಹಾಗೂ ಷರತ್ತುಗಳನ್ನು ಪಾಲಿಸದ ಉದ್ದಿಮೆದಾರರ ಮೇಲೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ? (ಮಾಹಿತಿ ನೀಡುವುದು)	ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯುವ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಗಳಲ್ಲಿ ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ 50 ಕ್ಕಿಂತ ಹೆಚ್ಚು ಕಾರ್ಮಿಕರುಳ್ಳ ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಘಟಕಗಳಲ್ಲಿ ಕನ್ನಡಿಗರಿಗೆ/ಸ್ಥಳೀಯರಿಗೆ ಉದ್ಯೋಗಗಳನ್ನು ಒದಗಿಸಿರುವ ಬಗ್ಗೆ ಪರಿಶೀಲಿಸಲಾಗುತ್ತದೆ. ನ್ಯೂನ್ಯತೆಗಳು ಕಂಡುಬಂದ ಕೈಗಾರಿಕೆಗಳಿಗೆ ಕೂಡಲೇ ಸರಿಪಡಿಸಲು ಸೂಚನೆಗಳನ್ನು ನೀಡಲಾಗುತ್ತದೆ.

ಸಿಐ 114 ಎಸ್‌ಪಿಐ 2021

(ಜಗದೀಶ್ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**3058**
ಸದಸ್ಯರ ಹೆಸರು	:	ಶ್ರೀ.ಹೂಲಗೇರಿ ಡಿ.ಎಸ್. (ಲಿಂಗಸುಗೂರು)
ಉತ್ತರಿಸಬೇಕಾದ ದಿನಾಂಕ	:	**19.03.2021**
ಉತ್ತರಿಸುವವರು	:	ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಲಿಥಿಯಂ ಖನಿಜ ಯಾವ ಜಿಲ್ಲೆಯಲ್ಲಿ ಪತ್ತೆಯಾಗಿದೆ; ಲಿಥಿಯ ಖನಿಜ ಪತ್ತೆಯಾದ ಸ್ಥಳದಲ್ಲಿ ಖನಿಜಾ ಅನ್ವೇಷಣೆ ಮಾಡಲಾಗುತ್ತಿದೆಯೇ; ಸದರಿ ಖನಿಜಗಳಿಂದಾಗುವ ಉಪಯೋಗಗಳೇನು;	ಭಾರತೀಯ ಸರ್ವೇಕ್ಷಣಾ ಇಲಾಖೆಯು 1988ರಲ್ಲಿ ಸದರಿ ಪ್ರದೇಶದ ಪ್ರಾಥಮಿಕ ಸರ್ವೆ/ ಸ್ಥಳಾನ್ವೇಷಣೆ ಕೈಗೊಂಡು ವರದಿಯನ್ನು ಪ್ರಚುರ ಪಡಿಸಿರುತ್ತದೆ. ಕೇಂದ್ರ ಸರ್ಕಾರದ ಸಾರ್ವಜನಿಕ ಉದ್ದಿಮೆಯಾದ ಮೆ.ಎನ್‌ಎಂಡಿಸಿ ಲಿಮಿಟೆಡ್ ಸಂಸ್ಥೆಯು ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಅಮರೇಶ್ವರ, ಗುಂಟಗೋಳ ಮತ್ತು ಲಿಂಗಸುಗೂರು ಕಾಯ್ದಿರಿಸಿದ ಅರಣ್ಯ ಪ್ರದೇಶದಲ್ಲಿ 25 ಚದರ ಕಿಲೋ. ಮೀಟರ್ ಪ್ರದೇಶಕ್ಕೆ ಲಿಥಿಯಂ ಖನಿಜಕ್ಕೆ ಮೀಸಲಿರಿಸಲು ಕೋರಿ ಅರ್ಜಿ ಸಲ್ಲಿಸಿರುತ್ತದೆ. ಖನಿಜಾನ್ವೇಷಣೆ ಕಾರ್ಯವು ಕೈಗೊಳ್ಳಬೇಕಾಗಿರುತ್ತದೆ. ಲಿಥಿಯಂ ಖನಿಜವನ್ನು ಗಾಜು, ಸೆರಾಮಿಕ್ಸ್, ಔಷಧಗಳು ಅಲ್ಯುಮಿನಿಯಂ ಮತ್ತು ಮೆಗ್ನೀಷಿಯಂ ಸಮ್ಮಿಶ್ರ ಲೋಹಗಳ ತಯಾರಿಕೆ ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಬ್ಯಾಟರಿಗಳ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ.
ಆ)	ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನಲ್ಲಿರುವ ಜನಸಾಮಾನ್ಯರುಗಳಿಗೆ ಮರಳು ಸರಬರಾಜುವಿನಲ್ಲಿ ಆಗುತ್ತಿರುವ ತೊಂದರೆಗಳ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕು ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳಿನ ಕೊರತೆ ನೀಗಿಸಲು ಜಿಲ್ಲೆಯಲ್ಲಿ ಈ ಕೆಳಗಿನಂತೆ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. • ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಾವಳಿ-2016ರ ನಿಯಮ 31-Tರಂತೆ ರಾಯಚೂರು ಜಿಲ್ಲಾ ವ್ಯಾಪ್ತಿಯಲ್ಲಿ 27 ಮರಳು ಬ್ಲಾಕ್‌ಗಳನ್ನು ಟೆಂಡರ್ ಕಂ-ಇ-ಹರಾಜು ಮೂಲಕ ಮಂಜೂರು ಮಾಡಲಾಗಿದ್ದು ಸದರಿ ಮರಳು ಬ್ಲಾಕ್‌ಗಳಿಂದ ಲಿಂಗಸುಗೂರು ತಾಲ್ಲೂಕಿನ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಕೆಯಾಗುತ್ತಿರುತ್ತದೆ. • ರಾಯಚೂರು ಜಿಲ್ಲೆ ಲಿಂಗಸುಗೂರು ತಾಲ್ಲೂಕು ವ್ಯಾಪ್ತಿಯಲ್ಲಿ 4 ಎಂ-ಸ್ಯಾಂಡ್ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಘಟಕಗಳಿಂದ ಸಹ ಲಿಂಗಸುಗೂರು ತಾಲ್ಲೂಕಿನ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಕೆಯಾಗುತ್ತಿರುತ್ತದೆ. • ಅಲ್ಲದೇ ಹೊಸ ಮರಳು ನೀತಿ-2020 ರಂತೆ ರಾಯಚೂರು ಜಿಲ್ಲಾ ವ್ಯಾಪ್ತಿಯ ಕೃಷ್ಣ ಹಾಗೂ ತುಂಗಭದ್ರ ನದಿ ಪಾತ್ರದಲ್ಲಿನ 12 ಮರಳು ಬ್ಲಾಕ್‌ಗಳನ್ನು ಮತ್ತು ಗೂಗಲ್ ಬ್ಯಾರೇಜ್ ಹಿನ್ನೀರಿನ ಪ್ರದೇಶದಲ್ಲಿ

		ಹೂಳಿನಿಂದ ಮರಳು ತೆಗೆಯಲು ಈಗಾಗಲೇ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ ಇವರಿಗೆ ಅಧಿಸೂಚನೆ ಹೊರಡಿಸಿ ಆಶಯ ಪತ್ರ ನೀಡಲಾಗಿದ್ದು, ಸದರಿ ಸಂಸ್ಥೆಗೆ ಮರಳು ಗಣಿಗಾರಿಕೆ ನಡೆಸಲು ಕಾರ್ಯದೇಶ ನೀಡಿದ ನಂತರ ಸದರಿ ಪ್ರದೇಶಗಳಿಂದಲೂ ಸಹ ಲಿಂಗಸುಗೂರು ತಾಲ್ಲೂಕಿನ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಸಲು ಕ್ರಮವಹಿಸಲಾಗಿದೆ
ಇ)	ಹಟ್ಟಿ ಚಿನ್ನದ ಗಣಿ ಕಂಪನಿ ವತಿಯಿಂದ ಹಟ್ಟಿ ಹಾಗೂ ಸುತ್ತಮುತ್ತಲಿನ ಗ್ರಾಮಗಳನ್ನು ಅಭಿವೃದ್ಧಿಗೊಳಿಸಲು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು;	ಹಟ್ಟಿ ಚಿನ್ನದ ಗಣಿ ಕಂಪನಿಯ ಸುತ್ತಮುತ್ತಲಿನ ಗ್ರಾಮಗಳನ್ನು ಅಭಿವೃದ್ಧಿಗೊಳಿಸಲು ಕಂಪನಿಯ ವತಿಯಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಈ ಕೆಳಗಿನಂತಿವೆ. • ಗ್ರಾಮಗಳಲ್ಲಿ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಹಣಕಾಸಿನ ನೆರವನ್ನು ಒದಗಿಸಲಾಗಿರುತ್ತದೆ. • ಶಾಲೆಗಳ ಅಭಿವೃದ್ಧಿಗಾಗಿ ಕಟ್ಟಡ ನಿರ್ಮಾಣ / ಮೂಲಭೂತ ಸೌಲಭ್ಯಗಳ ಉನ್ನತೀಕರಣಗೊಳಿಸಲು ಹಣಕಾಸಿನ ನೆರವನ್ನು ಒದಗಿಸಲಾಗಿರುತ್ತದೆ. • ಕೆಲವು ಗ್ರಾಮಗಳಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಹಣಕಾಸಿನ ನೆರವನ್ನು ಒದಗಿಸಲಾಗಿರುತ್ತದೆ. • ರಸ್ತೆಗಳ ಅಭಿವೃದ್ಧಿಗಾಗಿ ಹಾಗೂ ಇನ್ನಿತರ ಸೌಲಭ್ಯಗಳಿಗಾಗಿ ಕಂಪನಿಯ ವತಿಯಿಂದ ಹಣಕಾಸಿನ ನೆರವನ್ನು ಒದಗಿಸಲಾಗಿರುತ್ತದೆ.
ಈ)	ಹಟ್ಟಿ ಚಿನ್ನದ ಗಣಿ ಕಂಪನಿ ವತಿಯಿಂದ ಹಟ್ಟಿ ಬಸ್ ನಿಲ್ದಾಣದಿಂದ ಗುಡದನಾಳ ಕ್ರಾಸ್ ವರೆಗೂ ಬೈಪಾಸ್ ರಸ್ತೆ ನಿರ್ಮಾಣ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ಈ ಬಗೆಗಿನ ಪ್ರಸ್ತಾವನೆಯನ್ನು ಹಟ್ಟಿ ಚಿನ್ನದ ಗಣಿ ಕಂಪನಿ ವತಿಯಿಂದ ದಿನಾಂಕ:28.11.2013 ಮತ್ತು ದಿನಾಂಕ:17.12.2019ರಂದು ಲೋಕೋಪಯೋಗಿ ಇಲಾಖೆಗೆ ಸಲ್ಲಿಸಿದ್ದು, ಈ ಬಗ್ಗೆ ಲೋಕೋಪಯೋಗಿ ಇಲಾಖೆಯಿಂದ ಕ್ರಮವಹಿಸಬೇಕಾಗಿದೆ.
ಉ)	ರಾಯಚೂರು ಜಿಲ್ಲೆಗೆ DMF ಹಾಗೂ ಇತರೆ ಯೋಜನೆಗಳ ಮುಖಾಂತರ 2020-21ನೇ ಸಾಲಿನಲ್ಲಿ ಮಂಜೂರಾಗಿರುವ ಅನುದಾನ ಎಷ್ಟು; ಇದರಲ್ಲಿ ಲಿಂಗಸುಗೂರು ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿರುವ ಅನುದಾನ ಎಷ್ಟು?.	ರಾಜ್ಯದಲ್ಲಿ ಗಣಿ ಹಾಗೂ ಕಲ್ಲುಗಣಿಗಾರಿಕೆಯಿಂದ ರಾಜಧನದ ಮೇಲೆ ಶೇ.30ಮತ್ತು ಶೇ.10 ಅನುಗುಣವಾಗಿ ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿ (ಡಿಎಂಎಫ್)ಯನ್ನು 2015-16ನೇ ಸಾಲಿನಿಂದ ಸಂಗ್ರಹಿಸಲಾಗುತ್ತಿದೆ. ರಾಯಚೂರು ಜಿಲ್ಲೆಯಲ್ಲಿ 2015-16ನೇ ಸಾಲಿನಿಂದ 2020-21ನೇ ಸಾಲಿನ ಜನವರಿ-2021 ರವರಗೆ ರೂ.39.62 ಕೋಟಿ ಸಂಗ್ರಹಿಸಲಾಗಿದೆ. ಲಿಂಗಸುಗೂರು ವಿಧಾನಸಭಾ ಕ್ಷೇತ್ರಕ್ಕೆ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟನಿಂದ ರೂ.4.40 ಕೋಟಿ ಮೊತ್ತ ಕ್ರಿಯಾ ಯೋಜನೆಯು ಅನುಮೋದನೆಗೊಂಡಿರುತ್ತದೆ.

ಸಂಖ್ಯೆ: ಸಿಐ 45 ಸಿಎಂಸಿ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3067
ಸದಸ್ಯರ ಹೆಸರು	:	ಡಾ॥ ಶ್ರೀನಿವಾಸಮೂರ್ತಿ ಕೆ. (ನೆಲಮಂಗಲ)
ಉತ್ತರಿಸುವ ದಿನಾಂಕ	:	19/03/2021
ಉತ್ತರಿಸುವ ಸಚಿವರು	:	ಮಾನ್ಯ ಪೌರಾಡಳಿತ ಮತ್ತು ಸಕ್ಕರೆ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
(ಅ)	ನೆಲಮಂಗಲ ನಗರಸಭೆಯ ವ್ಯಾಪ್ತಿಯಲ್ಲಿ 31 ವಾರ್ಡಗಳನ್ನು ವಿಂಗಡಿಸಿ, ರಾಜ್ಯ ಪತ್ರ ಹೊರಡಿಸಲಾಗಿದೆಯೇ; (ವಿವರ ನೀಡುವುದು)	2011ರ ಜನಗಣತಿಯನ್ನಾಧರಿಸಿ ನೆಲಮಂಗಲ ನಗರಸಭೆಗೆ ಕ್ಷೇತ್ರ ಪುನರ್ ವಿಂಗಡಣೆ ಕೈಗೊಂಡು 31 ವಾರ್ಡ್‌ಗಳನ್ನು ವಿಂಗಡಿಸಿ ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಅಧಿಸೂಚನೆ ಸಂಖ್ಯೆ:ಇಎಲ್‌ಎನ್(ಪಂ)ಸಿಆರ್:01/2020–21 ದಿನಾಂಕ 11.01.2021ರಂದು ರಾಜ್ಯಪತ್ರದಲ್ಲಿ ಪ್ರಕಟಿಸಿ, ಭಾಧಿತರಾಗಬಹುದಾದಂತಹ ವ್ಯಕ್ತಿಗಳಿಂದ ಆಕ್ಷೇಪಣೆ/ಸಲಹೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.
(ಆ)	ನಗರಸಭೆಯ 31 ವಾರ್ಡಗಳಿಗೆ ಮೀಸಲಾತಿಯನ್ನು ಯಾವ ಕಾಲಮಿತಿಯಲ್ಲಿ ನಿಗದಿಪಡಿಸಲಾಗುವುದು;	2011ರ ಜನಗಣತಿಯನ್ನಾಧರಿಸಿ ನೆಲಮಂಗಲ ನಗರಸಭೆಗೆ ಕ್ಷೇತ್ರ ಪುನರ್ ವಿಂಗಡಣೆ ಅಂತಿಮಗೊಳಿಸಿ ಅಧಿಸೂಚನೆ ಹೊರಡಿಸಿದ ನಂತರ ವಾರ್ಡ್‌ಗಳ ಒಟ್ಟು ಜನಸಂಖ್ಯೆ, ಪರಿಶಿಷ್ಟ ಜಾತಿ ಜನಸಂಖ್ಯೆ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯಾ ವಿವರಗಳನ್ನು ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಂದ ಪಡೆದು ಪರಿಶೀಲಿಸಿ ವಾರ್ಡ್‌ಗಳಿಗೆ ಮೀಸಲಾತಿ ನಿಗದಿಪಡಿಸಲು ಕ್ರಮವಹಿಸಬೇಕಾಗಿರುತ್ತದೆ.
(ಇ)	ಮೀಸಲಾತಿ ನಿಗದಿಪಡಿಸಲು ಇರುವ ಮಾನದಂಡಗಳೇನು;	ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 11ರನ್ವಯ (Karnataka Act 22 of 1964) ಹಾಗೂ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 13 ಶಾಸನ 2012, ಬೆಂಗಳೂರು, ದಿನಾಂಕ:30.08.2012 ರನ್ವಯ (Karnataka Act No. 32 of 2012) ಹಾಗೂ ಮಾರ್ಗಸೂಚಿ ಸಂಖ್ಯೆ:ನಅಇ 240 ಎಂಎಲ್‌ಆರ್ 2013 ದಿನಾಂಕ:18.12.2013 ಮತ್ತು ತಿದ್ದುಪಡಿ ಆದೇಶ ಸಂಖ್ಯೆ:ನಅಇ 21 ಎಂಎಲ್‌ಆರ್ 2016 ದಿನಾಂಕ:09.02.2016ರಲ್ಲಿ ಸ್ಪಷ್ಟಪಡಿಸಿರುವಂತೆ, ನಗರಸಭೆಗೆ ವಾರ್ಡುವಾರು ಮೀಸಲಾತಿಯನ್ನು ನಿಗದಿಪಡಿಸಲು ಕ್ರಮವಹಿಸಲಾಗುವುದು.

...2

(ಈ)	ನೆಲಮಂಗಲ ನಗರಸಭೆ ನೂತನವಾಗಿ ಚುನಾವಣೆ ನಡೆಸಲು ಉಚ್ಚ ನ್ಯಾಯಾಲಯವು ಎರಡು ತಿಂಗಳ ಒಳಗಾಗಿ ಚುನಾವಣಾ ಪ್ರಕ್ರಿಯೆ ನಡೆಸಲು ಸೂಚಿಸಲಾಗಿರುವುದರಿಂದ ಸರ್ಕಾರ ಚುನಾವಣೆ ನಡೆಸಲು ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ;	ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾಖಲಿಸಿದ್ದ, ರಿಟ್ ಅರ್ಜಿ ಸಂಖ್ಯೆ: 11725/2020 c/w 6398/2020 ಪ್ರಕರಣದಲ್ಲಿ ದಿನಾಂಕ 05/01/2021ರಂದು ನೀಡಿರುವ ತೀರ್ಪಿನಲ್ಲಿ ನೆಲಮಂಗಲ ನಗರಸಭೆಗೆ ಚುನಾವಣೆ ನಡೆಸಲು ನಿರ್ದೇಶನ ನೀಡಿದ್ದು, ಸದರಿ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅಪೀಲು ಸಂಖ್ಯೆ: 227/2021 ಅನ್ನು ದಾಖಲಿಸಲಾಗಿದೆ. ರಿಟ್ ಅಪೀಲು ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ. ಈ ಪ್ರಕರಣ ನ್ಯಾಯಾಲಯದಲ್ಲಿ ಇತ್ಯರ್ಥವಾದ ನಂತರ ನಿಯಮಾನುಸಾರ ಪರಿಶೀಲಿಸಿ ನೆಲಮಂಗಲ ನಗರಸಭೆಗೆ ಚುನಾವಣೆ ನಡೆಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.
(ಉ)	ಇದುವರೆವಿಗೂ ಚುನಾವಣೆ ಮಾಡದೆ ಇರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಜರೂರಾಗಿ ಚುನಾವಣೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ?	ಪ್ರಸ್ತುತ ನೆಲಮಂಗಲ ನಗರಸಭೆಯ ಕೌನ್ಸಿಲ್ ಅಸ್ತಿತ್ವದಲ್ಲಿ ಇಲ್ಲದೇ ಇರುವುದರಿಂದ ಆಡಳಿತಾತ್ಮಕ ಹಿತದೃಷ್ಟಿಯಿಂದ ಮುಂದಿನ ಹೊಸ ಚುನಾಯಿತ ಕೌನ್ಸಿಲ್ ಅಸ್ತಿತ್ವಕ್ಕೆ ಬರುವವರೆಗೂ ಕಾರ್ಯನಿರ್ವಹಣೆಗಾಗಿ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರನ್ನು ಆಡಳಿತಾಧಿಕಾರಿಯಾಗಿ ನೇಮಿಸಲಾಗಿದೆ.

ಸಂಖ್ಯೆ: ನಅಇ/51/ಎಲ್ಎಕ್ಯೂ.2021

(ಎನ್. ನಾಗರಾಜು ಎಂ ಟಿ ಬಿ)
ಪೌರಾಡಳಿತ ಮತ್ತು ಸಕ್ಕರೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3083

ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ಸುಬ್ಬಾರೆಡ್ಡಿ ಎಸ್.ಎನ್. (ಬಾಗೇಪಲ್ಲಿ)

ಉತ್ತರಿಸಬೇಕಾದ ದಿನಾಂಕ : 19.03.2021

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರವ್ಯಾಪ್ತಿಯಲ್ಲಿ ಒಟ್ಟು ಗ್ಯಾಸ್ ಸಂಪರ್ಕವಿರುವ ಕುಟುಂಬಗಳ ಸಂಖ್ಯೆ ಎಷ್ಟು;	ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು 64,768 ಕುಟುಂಬಗಳು ಗ್ಯಾಸ್ ಸಂಪರ್ಕವನ್ನು ಹೊಂದಿವೆ.
ಆ	ಗ್ಯಾಸ್ ಸಂಪರ್ಕ ಇಲ್ಲದೇ ಇರುವ ಕುಟುಂಬಗಳ ಸಂಖ್ಯೆ ಎಷ್ಟು;	ಅನ್ವಯಿಸುವುದಿಲ್ಲ.
ಇ	ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಇರುವ ಒಟ್ಟು ಗ್ಯಾಸ್ ಸಂಪರ್ಕ ವಿತರಕರ ಸಂಖ್ಯೆ ಎಷ್ಟು; (ವಿವರ ನೀಡುವುದು)	ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಈ ಕೆಳಕಂಡ ಒಟ್ಟು 6 ಅನಿಲ ವಿತರಕರಿರುತ್ತಾರೆ. 1. ಶ್ರೀ ವಾಸವಿ ಭಾರತ್ ಗ್ಯಾಸ್ ಗ್ರಾಮೀಣ್ ವಿತರಕ್, ಚೇಳೂರು ಗ್ರಾಮ. 2. ಶ್ರೀ ಮದ್ದೇಮ್ಮ ಇಂಡಿಯನ್ ಗ್ರಾಮೀಣ್ ವಿತರಕ್, ಚಾಕವೇಲು ಗ್ರಾಮ. 3. ಎಸ್.ಎಲ್.ವಿ. ಗ್ಯಾಸ್ ಏಜೆನ್ಸಿ ಬಾಗೇಪಲ್ಲಿ, ಬಾಗೇಪಲ್ಲಿ ತಾಲ್ಲೂಕು 4. ಶ್ರೀ ಭೈರವೇಶ್ವರ ಇಂಡಿಯನ್ ಗ್ರಾಮೀಣ್ ವಿತರಕ್, ತಿಮ್ಮಂಪಲ್ಲಿ ಗ್ರಾಮ. 5. ಶ್ರೀ ಎಸ್.ವೈ.ವಿ. ಹೆಚ್.ಪಿ. ಗ್ಯಾಸ್ ಗ್ರಾಮೀಣ್ ವಿತರಕ್, ಜೂಲ ಪಾಳ್ಯ ಗ್ರಾಮ. 6. ಗುಡಿಬಂಡೆ ಇಂಡಿಯನ್ ಗ್ರಾಮೀಣ್ ವಿತರಕ್, ಗುಡಿಬಂಡೆ.
ಈ	ಈ ಎಲ್ಲ ವಿತರಕರು ಗ್ಯಾಸ್ ಗೋಡನ್ ಗಳಲ್ಲಿ ಎಲ್ಲಾ ಸುರಕ್ಷತೆಗಳನ್ನು ಅನುಸರಿಸುತ್ತಿದ್ದಾರೆಯೇ? (ವಿವರ ನೀಡುವುದು)	ಹೌದು. 1. ಅಗ್ನಿ ಅಪಘಾತಗಳು ಸಂಭವಿಸಿದಾಗ ಸುರಕ್ಷತೆಗಾಗಿ ಗೋದಾಮುಗಳಲ್ಲಿ Fire Extingusher ಗಳನ್ನು ಇಟ್ಟಿರುತ್ತಾರೆ. 2. ಪ್ರತಿ ಸಿಲಿಂಡರ್ ನಡುವೆ ಅಂತರ ಬಿಟ್ಟು ಜೋಡಿಸಲಾಗಿರುತ್ತದೆ. 3. ಗ್ಯಾಸ್ ಗೋದಾಮುಗಳಲ್ಲಿ ಸಿಲಿಂಡರ್ ಸಂಗ್ರಹಿಸುವ ಸ್ಥಳ ಮತ್ತು ಅಕ್ಕಪಕ್ಕದಲ್ಲಿ ಸ್ವಚ್ಛವಾಗಿ ಇಟ್ಟಿರುತ್ತಾರೆ. 4. ಸುರಕ್ಷತೆಗಾಗಿ ಬಕೆಟ್‌ಗಳಲ್ಲಿ ಮರಳನ್ನು ತುಂಬಿಡಲಾಗಿರುತ್ತದೆ.

		5. ಸಿಲಿಂಡರ್‌ಗಳನ್ನು ಸಾಗಿಸುವ ವಾಹನಗಳನ್ನು ಗೋದಾಮಿನ ಕಾಂಪೌಂಡ್ ಹೊರಗೆ ನಿಲ್ಲಿಸಿ ಸಾಗಿಸಿಕೊಳ್ಳಲಾಗುತ್ತದೆ. 6. ಅನಿಲ ಸಿಲಿಂಡರ್‌ಗಳ ಗೋದಾಮುಗಳನ್ನು ಜನನಿಬಿಡ ಪ್ರದೇಶಗಳಿಂದ ದೂರದಲ್ಲಿ ಸ್ಥಾಪಿಸಲಾಗುತ್ತದೆ. 7. Mastic Flooring ಅನ್ನು ಅಳವಡಿಸಿರುತ್ತಾರೆ. 8. Electric Goods ಅನ್ನು ಇಟ್ಟಿರುವುದಿಲ್ಲ. 9. Testing Kit ಅನ್ನು ಇಟ್ಟಿರುತ್ತಾರೆ.

ಕಡತ ಸಂಖ್ಯೆ: ಆನಾಸ 40 ಎಫ್‌ಪಿಪಿ 2021 (ಇ-ಆಫೀಸ್)

(ಉಮೇಶ್ ವಿ. ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನಸಭೆ

ಮಾನ್ಯ ವಿಧಾನಸಭೆಯ ಸದಸ್ಯರು : ಶ್ರೀ ದೇವಾನಂದ್ ಫುಲಸಿಂಗ್ ಚವಾಣ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3091

ಉತ್ತರಿಸಬೇಕಾದ ದಿನಾಂಕ : 19.03.2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	2016-17 ಮತ್ತು 2017-18ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ನಮೂದಿಸಿರುವಂತೆ ವಿಜಯಪುರ ಜಿಲ್ಲೆಯ ಶ್ರೀ ಈಶ್ವರ ಪತ್ತಿನ ಸಹಕಾರ ಸಂಘದಿಂದ ಠೇವಣಿದಾರರಿಗೆ ಸುಮಾರು ರೂ.36 ಕೋಟಿಗಳಷ್ಟು ವಂಚನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಠೇವಣಿದಾರರಿಗೆ ನ್ಯಾಯ ಒದಗಿಸಲು ಸರ್ಕಾರದ ಕೈಗೊಂಡ ಕ್ರಮಗಳೇನು; (ವಿವರವಾದ ಮಾಹಿತಿ ನೀಡುವುದು)	ಹೌದು, 2017-18ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಈಶ್ವರ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ ನಿ., ವಿಜಯಪುರ ಇಲ್ಲಿ ರೂ.28,78,03,825.30 ಮೊತ್ತದ ಹಣ ದುರುಪಯೋಗವಾಗಿರುವುದು ಸಾಬೀತಾಗಿರುತ್ತದೆ. ಈ ಬಗ್ಗೆ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ. 1. ಸಂಘದಲ್ಲಿ ಹಣದುರುಪಯೋಗ ಆರೋಪಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 64ರಡಿಯಲ್ಲಿ ವಿಚಾರಣೆ ನಡೆಸಲಾಗಿದೆ. ವಿಚಾರಣೆಯಲ್ಲಿ ಹಣದುರುಪಯೋಗವಾಗಿರುವುದು ಸಾಬೀತಾಗಿದೆ. ಪ್ರಕರಣ 68 ರಡಿಯಲ್ಲಿ ಸಂಘಕ್ಕೆ ನಿರ್ದೇಶನ ನೀಡಿ ಹಣದುರುಪಯೋಗ ಮಾಡಿರುವ ಅಧ್ಯಕ್ಷರು, ಕಾರ್ಯದರ್ಶಿ, ಆಡಳಿತ ಮಂಡಳಿ ಸದಸ್ಯರ ವಿರುದ್ಧ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಹಾಗೂ ಹಣ ವಸೂಲಾತಿಗೆ ಕಾನೂನು ಕ್ರಮ ಜರುಗಿಸಲು ನಿರ್ದೇಶನ ನೀಡಲಾಗಿದೆ. 2. ಸಂಘದ ಆಡಳಿತ ಮಂಡಳಿಯ ಸದಸ್ಯರ ವಿರುದ್ಧ ಪ್ರಕರಣ 29-ಸಿ ರಡಿ ಕ್ರಮ ಕೈಗೊಂಡು, ಎಲ್ಲಾ ಆಡಳಿತ ಮಂಡಳಿ ಸದಸ್ಯರನ್ನು ಅನರ್ಹಗೊಳಿಸಲಾಗಿದೆ. 3. ಪ್ರಕರಣ 31 ರಡಿಯಲ್ಲಿ ಸಂಘಕ್ಕೆ ವಿಶೇಷಾಧಿಕಾರಿ ನೇಮಿಸಲಾಗಿದೆ. 4. ಸಂಘದ ಆಡಳಿತ ಮಂಡಳಿಯ ಸದಸ್ಯರ ವಿರುದ್ಧ ವಿಜಯಪುರ ಗಾಂಧಿಚೌಕ ಪೊಲೀಸ್ ಠಾಣೆಯಲ್ಲಿ ಪ್ರಥಮ ಮಾಹಿತಿ ವರದಿ (FIR) ಸಂಖ್ಯೆ:23/2017 ದಾಖಲಾಗಿದೆ. ಕ್ರಿಮಿನಲ್ ಮೊಕದ್ದಮೆ ದಾಖಲಾಗಿದೆ. 5. ಆಡಳಿತ ಮಂಡಳಿ ಸದಸ್ಯರ ಸ್ಥಿರಾಸ್ತಿಯನ್ನು ಪ್ರಕರಣ 103 ರಡಿಯಲ್ಲಿ ಜಪ್ತಿ ಪೂರ್ವ ಆದೇಶ ಹೊರಡಿಸಲಾಗಿದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಪ್ರಕರಣ 69ರಡಿಯಲ್ಲಿ ಅಧಿಬಾರ ಪ್ರಕರಣ ವಿಚಾರಣೆಯಲ್ಲಿದೆ.

...2

ಆ)	2017ರಿಂದ ಇಲ್ಲಿಯವರೆಗೆ ಅಂದರೆ 2018ರಿಂದು ಸಂಘದ ಪದಾಧಿಕಾರಿಗಳ ಸ್ವರಾಸ್ತಿ ಮೇಲೆ ಬೋಜಾ (ಸಾಲ) ಇದ್ದು, ಇಲ್ಲಿಯವರೆಗೆ ಅವುಗಳ ಲಿಲಾವು (ಹರಾಜು) ಪ್ರಕ್ರಿಯೆ ಆಗಿರುವುದಿಲ್ಲ. ಇದಕ್ಕೆ ಕಾರಣವೇನು.	ಸಂಘದ ಆಡಳಿತ ಮಂಡಳಿ ಸದಸ್ಯರ ಸ್ಥಿರಾಸ್ತಿಯನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 103ರಡಿ ಜಪ್ತಿ ಪೂರ್ವ ಆದೇಶದ ಮೂಲಕ ಜಪ್ತಿ ಮಾಡಲಾಗಿದೆ ಹಾಗೂ ಹಣದುರುಪಯೋಗಕ್ಕೆ ಕಾರಣಕರ್ತರಾದವರ ವಿರುದ್ಧ ಪ್ರಕರಣ 69ರಡಿಯಲ್ಲಿ ಅಧಿಬಾರ ಪ್ರಕರಣ ದಾಖಲಿಸಿದ್ದು, ವಿಚಾರಣೆ ನಡೆಯುತ್ತಿದೆ. ವಿಚಾರಣೆ ಪೂರ್ಣಗೊಂಡು ತೀರ್ಪಿನ ನಂತರ ಕಾನೂನಿನ ರೀತ್ಯಾ ಹರಾಜು ಪ್ರಕ್ರಿಯೆ ಆರಂಭಿಸಲಾಗುವುದು.
ಇ)	ಈಶ್ವರ ಪತ್ತಿನ ಸಹಕಾರ ಸಂಘದ ಪದಾಧಿಕಾರಿಗಳು ಹಣ ದುರುಪಯೋಗಪಡಿಸಿಕೊಂಡ ಬಗ್ಗೆ ಲೆಕ್ಕಪರಿಶೋಧನಾ ಇಲಾಖೆಯ ವರದಿಯಲ್ಲಿ ಉಲ್ಲೇಖವಿರುವುದು ಹಾಗೂ ಸಾಕ್ಷ್ಯಾಧಾರಗಳು ಇರುವುದರಿಂದ ಅವರ ಮೇಲೆ ಮೊಕದ್ದಮೆ ದಾಖಲಿಸದ ಸಿ.ಐ.ಡಿ. ಅಧಿಕಾರಿಗಳು ಕೇವಲ ಅಧ್ಯಕ್ಷ ಮತ್ತು ಕಾರ್ಯದರ್ಶಿ ಮೇಲೆ ಮಾತ್ರ ಚಾರ್ಜ್‌ಶೀಟ್ ದಾಖಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ	ಪ್ರಕರಣದ ಒಟ್ಟು 18 ಆರೋಪಿತರುಗಳ ಪೈಕಿ ಎ-3, ಎ-12, ಎ-13 ಮತ್ತು ಎ-14 ರವರುಗಳು ಮೃತ ಪಟ್ಟಿದ್ದು, ಎ-4 ರಿಂದ 11 ಮತ್ತು ಎ-15ರಿಂದ 18ರವರೆಗಿನ ಆರೋಪಿಗಳ ವಿರುದ್ಧ ಅಪರಾಧ ಕೃತ್ಯಗಳನ್ನು ಸಾಬೀತು ಪಡಿಸುವಂತ ಯಾವುದೇ ಸಾಕ್ಷ್ಯಗಳು ಲಭ್ಯವಾಗಿಲ್ಲದ ಕಾರಣ ಅವರುಗಳನ್ನು ಅಭಿಯೋಗ ಸಾಕ್ಷ್ಯಗಳನ್ನಾಗಿ ಪರಿಗಣಿಸಿ, ಉಳಿದ ಆರೋಪಿ ಎ-1 ನಾಗಪ್ಪ ಹಂಚಿನಾಳ ಮತ್ತು ಎ-2 ಮಲ್ಲಪ್ಪ ಶಿವಬಸಪ್ಪ ಪಟ್ಟಣಶೆಟ್ಟಿ ರವರುಗಳು ಅಪರಾಧವೆಸಗಿರುವುದು ಧೃಡಪಟ್ಟ ಮೇರೆಗೆ ಸದರಿ ಇಬ್ಬರು ಆರೋಪಿಗಳ ವಿರುದ್ಧ ಮಾತ್ರ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿದೆ.
ಈ)	ಈಶ್ವರ ಪತ್ತಿನ ಸಹಕಾರ ಸಂಘ ನಿ., ವಿಜಯಪುರ ಇದರ ಪ್ರಕರಣ ಪ್ರಸ್ತುತ ಯಾವ ಹಂತದಲ್ಲಿದೆ? (ವಿವರವಾದ ಮಾಹಿತಿ ನೀಡುವುದು)	ಸಂಘದ ಎಲ್ಲಾ ನಿರ್ದೇಶಕರುಗಳನ್ನು ಪ್ರಕರಣ 29-ಸಿ ರಡಿಯಲ್ಲಿ ಅನರ್ಹಗೊಳಿಸಿದ ಕಾರಣ ಶೂನ್ಯಾವಸ್ಥೆ ಉಂಟಾದ ಹಿನ್ನೆಲೆಯಲ್ಲಿ ಪ್ರಕರಣ 31ರಡಿಯಲ್ಲಿ ವಿಶೇಷಾಧಿಕಾರಿಯನ್ನು ನೇಮಿಸಲಾಗಿದೆ. ವಿಶೇಷಾಧಿಕಾರಿಯಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ವಿಜಯಪುರ ಉಪ ವಿಭಾಗ, ವಿಜಯಪುರ ಇವರು ಕಾರ್ಯನಿರ್ವಹಿಸುತ್ತಿದ್ದಾರೆ.

ಕಡತ ಸಂಖ್ಯೆ: ಸಿಒ 27 ಸಿಆರ್‌ಸಿ 2021

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು.

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3092
2. ಮಾನ್ಯ ಸದಸ್ಯರ ಹೆಸರು : ಶ್ರೀ ದೇವಾನಂದ್ ಫುಲಸಿಂಗ ಚವಾಣ್
3. ಉತ್ತರಿಸಬೇಕಾದ ದಿನಾಂಕ : 19.03.2021
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ	ಚಡಚಣ ಉಪ ಮಾರುಕಟ್ಟೆಯಲ್ಲಿ ಜಮೀನು ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಒತ್ತುವರಿ ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;	ಚಡಚಣ ಉಪ-ಮಾರುಕಟ್ಟೆಯಲ್ಲಿ ಜಮೀನು ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆದಾಗ್ಯೂ ಸಹ ಸಮಿತಿಯ ವತಿಯಿಂದ ಭೂ-ಮಾಪನ ಇಲಾಖೆಯಿಂದ ಸರ್ವೇ ಮಾಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.
ಆ	ಚಡಚಣ ಉಪ ಮಾರುಕಟ್ಟೆಗೆ ಸರ್ಕಾರದಿಂದ ಮಂಜೂರಾದ ಜಮೀನು ಎಷ್ಟು; ಇದರಲ್ಲಿ ಎಷ್ಟು; ನಿವೇಶನಗಳನ್ನು ರಚನೆ ಮಾಡಲಾಗಿದೆ; ಇದರಲ್ಲಿ ಹಂಚಿಕೆಯಾದ ನಿವೇಶನಗಳು ಎಷ್ಟು; ಹಂಚಿಕೆಯಾಗದಿರುವ ನಿವೇಶನಗಳು ಎಷ್ಟು; ಖಾಲಿ ಉಳಿದಿರುವ ನಿವೇಶನಗಳು ಎಷ್ಟು; ಹಂಚಿಕೆ ಮಾಡಲಾಗಿರುವ ನಿವೇಶನಗಳಲ್ಲಿ ಎಷ್ಟು ಜನ ವ್ಯಾಪಾರಿಗಳು ಕಟ್ಟಡ ನಿರ್ಮಾಣ ಮಾಡಿದ್ದಾರೆ; ಕಟ್ಟಡ ನಿರ್ಮಾಣ ಮಾಡದವರ ಮೇಲೆ ಕೈಗೊಂಡ ಕ್ರಮಗಳೇನು; (ವಿವರವಾದ ಮಾಹಿತಿ ನೀಡುವುದು)	ಚಡಚಣ ಉಪ-ಮಾರುಕಟ್ಟೆಗೆ ಸರ್ಕಾರದಿಂದ ಮಂಜೂರಾದ 6 ಎಕರೆ 11 ಗುಂಟೆ ಜಮೀನಿನಲ್ಲಿ 60 ನಿವೇಶನಗಳನ್ನು ರಚನೆ ಮಾಡಲಾಗಿದ್ದು, ಅದರಲ್ಲಿ 52 ನಿವೇಶನಗಳನ್ನು ಹಂಚಿಕೆ ಮಾಡಲಾಗಿರುತ್ತದೆ. (ನಿವೇಶನ ಸಂ:41 ಮತ್ತು 42ನ್ನು ವಿಲೀನಗೊಳಿಸಲಾಗಿದೆ) ನಿವೇಶನ ಹಂಚಿಕೆ ಪಡೆದುಕೊಂಡಿರುವ 18 ವರ್ತಕರು ಅಂಗಡಿ-ವ-ಗೋದಾಮುಗಳನ್ನು ನಿರ್ಮಿಸಿಕೊಂಡಿದ್ದು, ಉಳಿದ 34 ವರ್ತಕರು ಗೋದಾಮುಗಳನ್ನು ನಿರ್ಮಿಸಿಕೊಂಡಿರುವುದಿಲ್ಲ. 06 ನಿವೇಶನಗಳು ಹಂಚಿಕೆಯಾಗದೇ ಸಮಿತಿಯ ವಶದಲ್ಲಿ ಇರುತ್ತವೆ. 02 ನಿವೇಶನಗಳನ್ನು ಪಾರ್ಕಿಂಗ್‌ಗಾಗಿ ಕಾಯ್ದಿರಿಸಲಾಗಿರುತ್ತದೆ. ನಿವೇಶನದಲ್ಲಿ ನಿಯಮಾನುಸಾರ/ನಿಗಧಿತ ಅವಧಿಯಲ್ಲಿ ಕಟ್ಟಡ ನಿರ್ಮಾಣ ಮಾಡಿಕೊಳ್ಳದ ಹಂಚಿಕೆದಾರರ ವಿರುದ್ಧ ಆಸ್ತಿ ಹಂಚಿಕೆ ನಿಯಮಾವಳಿ-2004ರ ಅನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.
ಇ	ಚಡಚಣ ಕೃಷಿ ಉಪ-ಮಾರುಕಟ್ಟೆಯಲ್ಲಿ ರಚನೆ ಮಾಡಲಾಗಿರುವ ಒಟ್ಟು ನಿವೇಶನಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸಿದ ನಿವೇಶನಗಳು ಎಷ್ಟು; (ವಿವರವಾದ ಮಾಹಿತಿ ನೀಡುವುದು)	ಚಡಚಣ ಕೃಷಿ ಉಪ-ಮಾರುಕಟ್ಟೆ ಪ್ರಾಂಗಣದಲ್ಲಿ ನಿವೇಶನ ಹಂಚಿಕೆಯನ್ನು ಅಗತ್ಯಕ್ಕೆ ಅನುಗುಣವಾಗಿ ಹಂಚಿಕೆ ಮಾಡುವ ಸಂದರ್ಭದಲ್ಲಿ ಆಸ್ತಿ ಹಂಚಿಕೆ ನಿಯಮ-2004ರ, ನಿಯಮ-17ರನ್ವಯ ಮೀಸಲಾತಿಗೆ ಅವಕಾಶ ಕಲ್ಪಿಸಲಾಗಿದೆ. ಆದರೆ ಪ್ರಾಂಗಣದಲ್ಲಿ ನಿರ್ಮಿಸಿರುವ ಒಟ್ಟಾರೆ ನಿವೇಶನದ ಸಂಖ್ಯೆಗೆ ಮೀಸಲಾತಿ ಅವಕಾಶವಿಲ್ಲ. ಪ್ರತಿ ಬಾರಿ ಹಂಚಿಕೆ ಪ್ರಕ್ರಿಯೆ ಕೈಗೊಂಡ ವೇಳೆಯಲ್ಲಿ ಮೀಸಲಾತಿ ನೀಡಲು ಅವಕಾಶ ಕಲ್ಪಿಸಿದೆ.

.....2

ಈ	ಎ.ಪಿ.ಎಂ.ಸಿ ಕಾಯಿದೆ ಒಬ್ಬ ವರ್ತಕನಿಗೆ ಒಂದು ನಿವೇಶನ ಅಥವಾ ಒಂದು ಮಳಿಗೆಯನ್ನು ಗುತ್ತಿಗೆ ಆಧಾರದ ಮೇಲೆ ನೀಡಬೇಕೆಂಬ ನಿಯಮವಿದ್ದರೂ ಸಹ ಎರಡರಿಂದ ಮೂರು ನಿವೇಶನ ಮತ್ತು ಮಳಿಗೆಗಳನ್ನು ಹಂಚಿಕೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ನಿಯಮ ಬಾಹಿರವಾಗಿ ಹಂಚಿಕೆ ಮಾಡಿದವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರವಾದ ಮಾಹಿತಿ ನೀಡುವುದು)	ಗಮನಕ್ಕೆ ಬಂದಿದೆ. ಈ ಬಗ್ಗೆ ನಿರ್ದೇಶಕರ ಕಛೇರಿ ಪತ್ರ ಸಂಖ್ಯೆ:ಕೃಮಾಇ/ ಅಭಿವಿ-3/ ಲೀ&ಲೈ/ 411/ 2020, ದಿನಾಂಕ:10.03.2021 ರಲ್ಲಿ ಸಹಾಯಕ ನಿರ್ದೇಶಕರು ಕೃಷಿ ಮಾರಾಟ ಇಲಾಖೆ ಇವರಿಂದ ವಿವರವಾದ ವರದಿಯನ್ನು ಕೋರಿದ್ದು, ವರದಿ ಬಂದ ನಂತರ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.
ಉ	ಚಡಚಣ ಹೊಸ ತಾಲ್ಲೂಕಾಗಿ ರಚನೆಯಾಗಿರುವುದರಿಂದ ಇಂಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ಚಡಚಣ ಉಪ ಮಾರುಕಟ್ಟೆಯನ್ನು ಬೇರ್ಪಡಿಸಿ ಚಡಚಣದಲ್ಲಿ ಹೊಸ ಕೃಷಿ ಉತ್ಪನ್ನ ಮಾರುಕಟ್ಟೆಯಾಗಿ ರಚನೆ ಮಾಡಲು ರೈತರು ಅಪೇಕ್ಷೆ ವ್ಯಕ್ತಪಡಿಸುತ್ತಿದ್ದು, ಇದಕ್ಕೆ ಸರ್ಕಾರದ ನಿಲುವೇನು ; (ವಿವರವಾದ ಮಾಹಿತಿ ನೀಡುವುದು)	ಚಡಚಣ ಹೊಸ ತಾಲ್ಲೂಕಾಗಿ ರಚನೆಯಾಗಿರುವುದರಿಂದ ಇಂಡಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ಚಡಚಣ ಉಪ ಮಾರುಕಟ್ಟೆಯನ್ನು ಬೇರ್ಪಡಿಸಿ ಚಡಚಣದಲ್ಲಿ ಹೊಸ ಕೃಷಿ ಉತ್ಪನ್ನ ಮಾರುಕಟ್ಟೆಯಾಗಿ ರಚನೆ ಮಾಡುವ ಕುರಿತು ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.
ಊ	ಚಡಚಣ ಉಪ ಮಾರುಕಟ್ಟೆ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ಕಳೆದ ಮೂರು ವರ್ಷಗಳಲ್ಲಿ ವಿವಿಧ ಮೂಲಗಳಿಂದ ಸಂಗ್ರಹವಾದ ಮೊತ್ತವೆಷ್ಟು; ಇದರಲ್ಲಿ ಕೈಗೊಂಡ ಕಾಮಗಾರಿಗಳಾವುವು?	ಚಡಚಣ ಉಪ-ಮಾರುಕಟ್ಟೆಯಿಂದ ಕಳೆದ ಮೂರು ವರ್ಷಗಳಲ್ಲಿ ವಿವಿಧ ಮೂಲಗಳಿಂದ ಸಂಗ್ರಹವಾದ ಮೊತ್ತದ ವಿವರ <table><tr><td>ಕ್ರ.ಸಂ</td><td>ವರ್ಷ</td><td>ಆದಾಯ</td></tr><tr><td>01</td><td>2017-18</td><td>78,04,050-00</td></tr><tr><td>02</td><td>2018-19</td><td>44,72,375-00</td></tr><tr><td>03</td><td>2019-20</td><td>55,51,958-00</td></tr></table> ಚಡಚಣ ಉಪ ಮಾರುಕಟ್ಟೆ ಪ್ರಾಂಗಣದಲ್ಲಿ ಕೈಕೊಂಡ ಅಭಿವೃದ್ಧಿ ಕಾಮಗಾರಿಗಳ ವಿವರ. 1) ಚಡಚಣ ಉಪ-ಮಾರುಕಟ್ಟೆ ಪ್ರಾಂಗಣದಲ್ಲಿ ಸಿ.ಸಿ ರಸ್ತೆ ಮತ್ತು ಆರ್.ಸಿ.ಸಿ ಚರಂಡಿ ನಿರ್ಮಾಣ. 2) 100 ಮೀಟರ್ ಕಂಪೌಂಡ ಗೋಡೆ ನಿರ್ಮಾಣ. 3) ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ. 4) ಶೌಚಾಲಯ ನಿರ್ಮಾಣ. 5) ಆರ್ಚ್‌ಗೇಟ್ ನಿರ್ಮಾಣ.

ಸಂಖ್ಯೆ:ಸಿಓ 113 ಎಂಆರ್‌ಇ 2021

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3103
2.	ಸದಸ್ಯರ ಹೆಸರು	:	ಶ್ರೀ ಬಂಡೆಪ್ಪ ಖಾಶೆಂಪುರ್ (ಬೀದರ್ ದಕ್ಷಿಣ)
3.	ಉತ್ತರಿಸುವ ದಿನಾಂಕ	:	19.03.2021
4.	ಉತ್ತರಿಸುವ ಸಚಿವರು	:	ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಬೀದರ್ ಜಿಲ್ಲೆಯಲ್ಲಿರುವ ಕೈಗಾರಿಕಾ ಪ್ರದೇಶಗಳು ಯಾವುವು ಹಾಗೂ ಸದರಿ ಕೈಗಾರಿಕಾ ಪ್ರದೇಶಗಳ ವಿಸ್ತೀರ್ಣವೆಷ್ಟು;</td><td>ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಬೀದರ ಜಿಲ್ಲೆಯಲ್ಲಿರುವ ಕೈಗಾರಿಕಾ ಪ್ರದೇಶಗಳ ವಿವರ ಹಾಗೂ ವಿಸ್ತೀರ್ಣ ಈ ಕೆಳಕಂಡಂತಿದೆ:-
<table>
<tr><th>ಕ್ರ. ಸಂ</th><th>ಕೈಗಾರಿಕಾ ಪ್ರದೇಶ</th><th>ವಿಸ್ತೀರ್ಣ (ಎಕರೆಗಳಲ್ಲಿ)</th></tr>
<tr><td>1.</td><td>ನೌಬಾದ</td><td>93.53</td></tr>
<tr><td>2.</td><td>ನೌಬಾದ ಆಟೋನಗರ 1ನೇ ಹಂತ</td><td rowspan="2">28.18</td></tr>
<tr><td>3.</td><td>ನೌಬಾದ ಆಟೋನಗರ 2ನೇ ಹಂತ</td></tr>
<tr><td>4.</td><td>ಕೋಲ್ಹಾರ 1ನೇ ಹಂತ</td><td>895.98</td></tr>
<tr><td>5.</td><td>ಕೋಲ್ಹಾರ 2ನೇ ಹಂತ</td><td>600.00</td></tr>
<tr><td>6.</td><td>ಹುಮನಾಬಾದ್</td><td>482.3</td></tr>
<tr><td>7.</td><td>ಬಸವಕಲ್ಯಾಣ</td><td rowspan="2">96.56</td></tr>
<tr><td>8.</td><td>ಬಸವಕಲ್ಯಾಣ ಆಟೋನಗರ</td></tr>
<tr><td></td><td>ಒಟ್ಟು</td><td>2196.55</td></tr>
</table></td></tr>
<tr><td>(ಆ)</td><td>ಸದರಿ ಕೈಗಾರಿಕಾ ಪ್ರದೇಶಗಳಲ್ಲಿ ಎಷ್ಟು ಕೈಗಾರಿಕೆಗಳಿಗೆ ನಿವೇಶನಗಳನ್ನು ಹಂಚಿಕೆ</td><td>ಸದರಿ ಕೈಗಾರಿಕಾ ಪ್ರದೇಶದಲ್ಲಿ ಒಟ್ಟು 1387 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.
ಬೀದರ್ ಜಿಲ್ಲೆ, ಕೊಲ್ಹಾರ ಕೈಗಾರಿಕಾ ಪ್ರದೇಶದ 2ನೇ ಹಂತದಲ್ಲಿ 152.57 ಎಕರೆ ವಿಸ್ತೀರ್ಣದ ಜಮೀನು ಖಾಲಿ ಉಳಿದಿದ್ದು,</td></tr>
</table>

<table>
<tr>
<td></td>
<td>ಮಾಡಲಾಗಿದೆ ಮತ್ತು ಬಾಕಿ ಇರುವ ನಿವೇಶನಗಳೆಷ್ಟು;</td>
<td>ಈ ಜಮೀನನ್ನು ಈ ಕೆಳಕಂಡ ಉದ್ದೇಶಕ್ಕಾಗಿ ಮೀಸಲಿಡಲಾಗಿದೆ:-
<table>
<tr><th>ಕ್ರ. ಸಂ.</th><th>ಕೈಗಾರಿಕಾ ಪ್ರದೇಶ</th><th>ವಿಸ್ತೀರ್ಣ (ಎಕರೆಗಳಲ್ಲಿ)</th><th>ಷರಾ (ಮೀಸಲಿಟ್ಟ ಉದ್ದೇಶ)</th></tr>
<tr><td>1.</td><td rowspan="4">ಕೋಲ್ಹಾರ ಕೈಗಾರಿಕಾ ಪ್ರದೇಶ 2ನೇ ಹಂತ</td><td>50.00</td><td>ಏರ್‌ಫೋರ್ಸ್</td></tr>
<tr><td>2.</td><td>50.00</td><td>ಅಗ್ರಿಕಲ್ಚರಲ್ ಇಕ್ವಿಪ್‌ಮೆಂಟ್ಸ್</td></tr>
<tr><td>3.</td><td>42.57</td><td>ಮಹಿಳಾ ಪಾರ್ಕ್</td></tr>
<tr><td>4.</td><td>10.00</td><td>ಆಟೋನಗರ 3ನೇ ಹಂತ</td></tr>
<tr><td colspan="2">ಒಟ್ಟು</td><td>152.57</td><td></td></tr>
</table>
</td>
</tr>
<tr>
<td>(ಇ)</td>
<td>ಈ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕಾ ನಿವೇಶನಗಳ ದರ ಎಷ್ಟು? (ಕೈಗಾರಿಕಾವಾರು ವಿವರವಾದ ಮಾಹಿತಿಯನ್ನು ನೀಡುವುದು)</td>
<td>ಬೀದರ ಜಿಲ್ಲೆಯಲ್ಲಿನ ಕೈಗಾರಿಕಾ ಪ್ರದೇಶಗಳ ನಿವೇಶನಗಳ ದರದ ವಿವರ ಈ ಕೆಳಕಂಡಂತಿದೆ:-
<table>
<tr><th>ಕ್ರ. ಸಂ</th><th>ಕೈಗಾರಿಕಾ ಪ್ರದೇಶ</th><th>ನಿವೇಶನದ ದರ (ರೂ. ಲಕ್ಷಗಳಲ್ಲಿ)</th></tr>
<tr><td>1.</td><td>ನೌಬಾದ</td><td>25.00</td></tr>
<tr><td>2.</td><td>ನೌಬಾದ ಆಟೋನಗರ 1ನೇ ಹಂತ</td><td rowspan="2">30.00</td></tr>
<tr><td>3.</td><td>ನೌಬಾದ ಆಟೋನಗರ 2ನೇ ಹಂತ</td></tr>
<tr><td>4.</td><td>ಕೋಲ್ಹಾರ 1ನೇ ಹಂತ</td><td>37.00</td></tr>
<tr><td>5.</td><td>ಕೋಲ್ಹಾರ 2ನೇ ಹಂತ</td><td>37.00</td></tr>
<tr><td>6.</td><td>ಹುಮನಾಬಾದ್</td><td>28.00</td></tr>
<tr><td>7.</td><td>ಬಸವಕಲ್ಯಾಣ</td><td rowspan="2">25.00</td></tr>
<tr><td>8.</td><td>ಬಸವಕಲ್ಯಾಣ ಆಟೋನಗರ</td></tr>
</table>
</td>
</tr>
</table>

ಸಂಖ್ಯೆ: ಸಿಐ 95 ಐಎಪಿ (ಇ) 2021

(ಜಗದೀಶ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

ಕರ್ನಾಟಕ ವಿಧಾನ ಸಭೆ

ಮಾನ್ಯ ವಿಧಾನ ಸಭೆಯ ಸದಸ್ಯರು : ಶ್ರೀ ಬೆಳ್ಳಿಪ್ರಕಾಶ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3114

ಉತ್ತರಿಸಬೇಕಾದ ದಿನಾಂಕ : 19.03.2021

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಾಲು ಒಕ್ಕೂಟ ಇಲ್ಲದೇ ಇರುವುದರಿಂದ ಹೈನುಗಾರಿಕೆ ನಡೆಸುತ್ತಿರುವ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಾಲು ಒಕ್ಕೂಟ ಸ್ಥಾಪನೆ ಮಾಡುವ ಕುರಿತು ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:30.08.2019ರಂದು ನಡೆದ ಸಭೆಯಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಪ್ರತ್ಯೇಕವಾಗಿ ಹಾಲು ಒಕ್ಕೂಟ ಸ್ಥಾಪಿಸಬೇಕೆಂಬ ಬೇಡಿಕೆ ಬಗ್ಗೆ ಚರ್ಚಿಸಲಾಗಿದೆ.
ಆ)	ಈ ಜಿಲ್ಲೆಯಲ್ಲಿ ಹಾಲು ಒಕ್ಕೂಟ ಸ್ಥಾಪನೆ ಕುರಿತಂತೆ ಸರ್ಕಾರಕ್ಕಿರುವ ತೊಂದರೆಗಳೇನು;	ಸರ್ಕಾರಕ್ಕೆ ಯಾವುದೇ ತೊಂದರೆಗಳಿರುವುದಿಲ್ಲ.
ಇ)	ಈ ಕುರಿತು ಪ್ರಸ್ತಾವನೆ ಯಾವ ಹಂತದಲ್ಲಿದೆ; ಯಾವಾಗ ಸ್ಥಾಪನೆ ಮಾಡಲಾಗುವುದು; ಸ್ಥಾಪನೆ ಮಾಡದೇ ಇದ್ದಲ್ಲಿ, ಕಾರಣಗಳೇನು; (ಪೂರ್ಣ ವಿವರಗಳನ್ನು ನೀಡುವುದು)	ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಾಲು ಒಕ್ಕೂಟದ ಸ್ಥಾಪನೆಗೆ ಸಖರಾಯ ಪಟ್ಟಣದಲ್ಲಿ ತೋಟಗಾರಿಕೆ ಇಲಾಖೆಗೆ ಸೇರಿದ ಸುಮಾರು 30 ಎಕರೆ ಪ್ರದೇಶವನ್ನು ಚಿಕ್ಕಮಗಳೂರು ಜಿಲ್ಲಾಡಳಿತದಿಂದ ಗುರುತಿಸಲಾಗಿದೆ. ಒಕ್ಕೂಟದ ಸ್ಥಾಪನೆಗೆ ತಾಂತ್ರಿಕ ಕಾರ್ಯಸಾಧ್ಯತೆಗಳ (viability) ಬಗ್ಗೆ ವರದಿ ಪಡೆದುಕೊಳ್ಳಲು ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ (NDDB) ನಿವೃತ್ತ ಅಧಿಕಾರಿ ಶ್ರೀಕಂಠಾರಾಧ್ಯ ರವರನ್ನು ನಿಯೋಜಿಸಲಾಗಿದ್ದು, ವರದಿಯನ್ನು ನಿರೀಕ್ಷಿಸಲಾಗಿದೆ.
ಈ)	ಹಾಸನ ಹಾಲು ಒಕ್ಕೂಟಕ್ಕೆ ಯಾವ ಯಾವ ಜಿಲ್ಲೆಗಳು ಸೇರ್ಪಡೆಗೊಂಡಿವೆ; ಪ್ರತಿದಿನ ಸರಾಸರಿ ಎಷ್ಟು ಹಾಲು ಸರಬರಾಜಾಗುತ್ತಿದೆ; ಸರಬರಾಜು ಆದ ಹಾಲು ಮಾರಾಟಕ್ಕಾಗಿ ಪ್ರತಿದಿನ ಸರಾಸರಿ ಎಷ್ಟು ಪೂರೈಕೆಯಾಗುತ್ತಿದೆ; (ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು)	ಹಾಸನ ಸಹಕಾರ ಹಾಲು ಒಕ್ಕೂಟವು ಹಾಸನ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳನ್ನು ಒಳಗೊಂಡಿದೆ. 2020-21ನೇ ಸಾಲಿನ ಫೆಬ್ರುವರಿ ಅಂತ್ಯಕ್ಕೆ ಒಕ್ಕೂಟದ ಹಾಲು ಸಂಗ್ರಹಣೆ ಮತ್ತು ಹಾಲು ಮಾರಾಟದ ಜಿಲ್ಲಾವಾರು ವಿವರಗಳು ಈ ಕೆಳಗಿನಂತಿರುತ್ತದೆ.

ಕ್ರ. ಸಂ	ಜಿಲ್ಲೆ	ದಿನವಹಿ ಸರಾಸರಿ ಹಾಲು ಶೇಖರಣೆ (ಕೆ.ಜಿ.ಗಳಲ್ಲಿ)	ದಿನವಹಿ ಸರಾಸರಿ ಹಾಲು ಮಾರಾಟ (ಲೀ.ಗಳಲ್ಲಿ)
1	ಹಾಸನ	836552	58065
2	ಕೊಡಗು	17113	43725
3	ಚಿಕ್ಕಮಗಳೂರು	122960	46311
	ಒಟ್ಟು	976625	148101

ಉ)	ಹಾಸನ ಹಾಲು ಒಕ್ಕೂಟ ವ್ಯಾಪ್ತಿಯಲ್ಲಿರುವ ಜಿಲ್ಲೆಗಳಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಅತೀ ಹೆಚ್ಚು ಮಾರಾಟ ಮಾಡಲಾಗುತ್ತಿರುವ ಬಗ್ಗೆ ಜಿಲ್ಲಾ/ವರ್ಷವಾರು ಕಳೆದ ಮೂರು ವರ್ಷಗಳ ಮಾಹಿತಿಯನ್ನು ನೀಡುವುದು?	ಕಳೆದ ಮೂರು ವರ್ಷಗಳ ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರಾಟದ ವಿವರ.

ಹಾಸನ ಜಿಲ್ಲೆ:

ವಿವರ	2018-19	2019-20	2020-21 (ಫೆಬ್ರುವರಿ ಅಂತ್ಯಕ್ಕೆ)
ಹಾಲು (ದಿನವಹಿ ಲೀ.ಗಳಲ್ಲಿ)	55578	57420	58065
ಮೊಸರು (ದಿನವಹಿ ಕೆ.ಜಿ.ಗಳಲ್ಲಿ)	11403	12852	11696
ಮಜ್ಜಿಗೆ (ದಿನವಹಿ ಲೀ.ಗಳಲ್ಲಿ)	1306	1205	490
ತುಪ್ಪ (ದಿನವಹಿ ಕೆ.ಜಿ.ಗಳಲ್ಲಿ)	189	237	254
ಪೇಡ (ದಿನವಹಿ ಕೆ.ಜಿ.ಗಳಲ್ಲಿ)	27	29	37

ಕೊಡಗು ಜಿಲ್ಲೆ:

ವಿವರ	2018-19	2019-20	2020-21 (ಫೆಬ್ರುವರಿ ಅಂತ್ಯಕ್ಕೆ)
ಹಾಲು (ದಿನವಹಿ ಲೀ.ಗಳಲ್ಲಿ)	46039	45889	43725
ಮೊಸರು (ದಿನವಹಿ ಕೆ.ಜಿ.ಗಳಲ್ಲಿ)	5949	6705	6102
ಮಜ್ಜಿಗೆ (ದಿನವಹಿ ಲೀ.ಗಳಲ್ಲಿ)	681	629	256
ತುಪ್ಪ (ದಿನವಹಿ ಕೆ.ಜಿ.ಗಳಲ್ಲಿ)	99	124	133
ಪೇಡ (ದಿನವಹಿ ಕೆ.ಜಿ.ಗಳಲ್ಲಿ)	14	15	19

ಚಿಕ್ಕಮಗಳೂರು ಜಿಲ್ಲೆ:

ವಿವರ	2018-19	2019-20	2020-21 (ಫೆಬ್ರುವರಿ ಅಂತ್ಯಕ್ಕೆ)
ಹಾಲು (ದಿನವಹಿ ಲೀ.ಗಳಲ್ಲಿ)	46761	47020	46311
ಮೊಸರು (ದಿನವಹಿ ಕೆ.ಜಿ.ಗಳಲ್ಲಿ)	7437	8381	7628
ಮಜ್ಜಿಗೆ (ದಿನವಹಿ ಲೀ.ಗಳಲ್ಲಿ)	852	786	320
ತುಪ್ಪ (ದಿನವಹಿ ಕೆ.ಜಿ.ಗಳಲ್ಲಿ)	123	155	166
ಪೇಡ (ದಿನವಹಿ ಕೆ.ಜಿ.ಗಳಲ್ಲಿ)	18	19	24

ಕಡತ ಸಂಖ್ಯೆ: ಸಿಒ 65 ಸಿಸಿಬಿ 2021

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3115
ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ಬೆಳ್ಳಿಪ್ರಕಾಶ್ (ಕಡೂರು)
ಉತ್ತರಿಸಬೇಕಾದ ದಿನಾಂಕ	:	19.03.2021
ಉತ್ತರಿಸುವ ಸಚಿವರು	:	ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಪಡಿತರ ಚೀಟಿಗಳನ್ನು ನಿಯಮಿತವಾಗಿ (ರೆಗ್ಯೂಲರ್) ವಿತರಣೆ ಮಾಡದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಆದ್ಯತೇತರ ಪಡಿತರ ಚೀಟಿಗಳನ್ನು ತಕ್ಷಣವೇ ವಿತರಿಸಲಾಗುತ್ತಿದೆ. ಆದ್ಯತಾ ಪಡಿತರ ಚೀಟಿಗಳನ್ನು ವಿತರಿಸುವ ಮುನ್ನ ವಾಸಸ್ಥಳ, ಅರ್ಹತೆ ಮತ್ತು ನೈಜನೆಗಳನ್ನು ಪರಿಸೀಲಿಸುವ ಅವಶ್ಯಕತೆ ಇದೆ. ಕೋವಿಡ್-19ರ ಹಿನ್ನೆಲೆಯಲ್ಲಿ ಬಯೋಮೆಟ್ರಿಕ್ ವ್ಯವಸ್ಥೆಯನ್ನು ಬಳಸುವುದಕ್ಕೆ ಅಡಚಣೆಯಾದ ಕಾರಣದಿಂದ ಪಡಿತರ ಚೀಟಿಯನ್ನು ಹೊಸದಾಗಿ ನೀಡುವ ಕಾರ್ಯವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಆದರೆ ಸಕಾಲ ಯೋಜನೆಯಡಿ ಪಡಿತರ ಚೀಟಿಯನ್ನು ಸದಸ್ಯರ ಸೇರ್ಪಡೆ ಮತ್ತು ತಿದ್ದುಪಡಿ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಎಲ್ಲಾ ಅರ್ಹ ಫಲಾನುಭವಿಗಳಿಗೆ ಪಡಿತರ ಚೀಟಿಯನ್ನು ಶೀಘ್ರವೇ ವಿತರಿಸಲಾಗುವುದು.
ಆ	ಇದರಿಂದಾಗಿ ಅರ್ಹ ಫಲಾನುಭವಿಗಳು ಪಡಿತರ, ಆಸ್ಪತ್ರೆಗಳಲ್ಲಿ ಚಿಕಿತ್ಸೆ, ಹಾಗೂ ಮುಂತಾದ ಸೌಲಭ್ಯಗಳಿಂದ ವಂಚಿತರಾಗುತ್ತಿರುವುದನ್ನು ತಡೆಯಲು ಸರ್ಕಾರದ ತೆಗೆದುಕೊಂಡಿರುವ ಕ್ರಮಗಳೇನು;	ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕ ವ್ಯವಹಾರಗಳ ಇಲಾಖೆಯಿಂದ ಅರ್ಹ ಫಲಾನುಭವಿಗಳಿಗೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ವಯ ಆಹಾರಧಾನ್ಯಗಳ ವಿತರಣೆಗಾಗಿ ಮಾತ್ರ ಪಡಿತರ ಚೀಟಿಯನ್ನು ನೀಡಲಾಗುತ್ತಿದೆ.
ಇ	ಅರ್ಹ ಫಲಾನುಭವಿಗಳಿಗೆ ಹೊಸದಾಗಿ ಪಡಿತರ ಚೀಟಿಗಳನ್ನು ವಿತರಣೆ ಮಾಡಲು ಸರ್ಕಾರದ ಕಾಲಮಿತಿಯೇನಾದರೂ ನಿಗದಿಪಡಿಸಿದೆಯೇ; ಹಾಗಿದ್ದಲ್ಲಿ, ಯಾವಾಗ ವಿತರಣೆ ಮಾಡಲಾಗುವುದು;	ಆದ್ಯತೇತರ ಪಡಿತರ ಚೀಟಿಗಳನ್ನು ತಕ್ಷಣವೇ ವಿತರಿಸಲಾಗುತ್ತಿದೆ. ಆದ್ಯತಾ ಪಡಿತರ ಚೀಟಿಗಳನ್ನು ವಿತರಿಸುವ ಸ್ಥಳ ಪರಿಶೀಲನೆ ನಡೆಸಬೇಕಾಗಿರುವುದರಿಂದ ಕೊವೀಡ್-19 ರ ಹಿನ್ನೆಲೆಯಲ್ಲಿ ಸ್ಥಳಾ ಪರಿಶೀಲನಾ ಕಾರ್ಯವನ್ನು ಕೈಗೊಳ್ಳಬೇಕಾಗಿರುವ ಕಾರಣ ಪಡಿತರ ಚೀಟಿ ವಿತರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಈ

ಕಡೂರು ವಿಧಾನ ಸಭಾ ಕ್ಷೇತ್ರದಲ್ಲಿ ಹೊಸದಾಗಿ ಬಿಪಿಎಲ್, ಎಪಿಎಲ್ ಹಾಗೂ ಅಂತ್ಯೋದಯ ಪಡಿತರ ಚೀಟಿಗಳಿಗೆ ಅರ್ಜಿ ಸಲ್ಲಿಸಿದ್ದವರ ಸಂಖ್ಯೆ ಎಷ್ಟು; ಎಷ್ಟು ಫಲಾನುಭವಿಗಳಿಗೆ ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗಿದೆ; ವಿತರಣೆ ಬಾಕಿ ಎಷ್ಟಿದೆ; ಬಾಕಿ ಇರಲು ಕಾರಣಗಳೇನು? (ಪೂರ್ಣ ವಿವರ ನೀಡುವುದು)

ಕಡೂರು ವಿಧಾನ ಸಭಾ ಕ್ಷೇತ್ರದಲ್ಲಿ 2019-20 ಹಾಗೂ 2020-21ನೇ ಸಾಲಿನಲ್ಲಿ ಈ ಕೆಳಕಂಡಂತೆ ಹೊಸ ಆದ್ಯತಾ/ಆದ್ಯತೇತರ ಪಡಿತರ ಚೀಟಿ ಕೋರಿ ಅರ್ಜಿ ಸಲ್ಲಿಕೆ/ವಿತರಣೆ/ಬಾಕಿ ಇರುತ್ತದೆ.

ವರ್ಗ	2019–20ನೇ ಸಾಲಿನಲ್ಲಿ ಸಲ್ಲಿಸಿದ ಅರ್ಜಿಗಳು	ವಿತರಣೆ	ಬಾಕಿ
ಆದ್ಯತಾ	1145	859	286
ಆದ್ಯತೇತರ	810	236	574
ಒಟ್ಟು	1955	1095	860

ವರ್ಗ	2020–21ನೇ ಸಾಲಿನಲ್ಲಿ ಸಲ್ಲಿಸಿದ ಅರ್ಜಿಗಳು	ವಿತರಣೆ	ಬಾಕಿ
ಆದ್ಯತಾ	385	0	385
ಆದ್ಯತೇತರ	35	0	32
ಒಟ್ಟು	420.	0	420

ಆದ್ಯತೇತರ ಪಡಿತರ ಚೀಟಿಗಳನ್ನು ತಕ್ಷಣವೇ ವಿತರಿಸಲಾಗುತ್ತಿದೆ. ಆದ್ಯತಾ ಪಡಿತರ ಚೀಟಿಗಳನ್ನು ವಿತರಿಸುವ ಸ್ಥಳ ಪರಿಶೀಲನೆ ನಡೆಸಬೇಕಾಗಿರುವುದರಿಂದ ಕೋವೀಡ್-19 ರ ಹಿನ್ನೆಲೆಯಲ್ಲಿ ಸ್ಥಳಾ ಪರಿಶೀಲನಾ ಕಾರ್ಯವನ್ನು ಕೈಗೊಳ್ಳಬೇಕಾಗಿರುವ ಕಾರಣ ಪಡಿತರ ಚೀಟಿ ವಿತರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಆನಾಸ 121 ಡಿಆರ್‌ಎ 2021 (ಇ-ಆಫೀಸ್)

(ಉಮೇಶ್ ವಿ ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	3124
ಸದಸ್ಯರ ಹೆಸರು	ಶ್ರೀ ಖಾದರ್ ಯು.ಟಿ
ಉತ್ತರಿಸಬೇಕಾದ ದಿನಾಂಕ	19.03.2021.
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರ
ಅ)	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮರಳು ಅಕ್ರಮ ಸಾಗಾಟ ತಡೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?	ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆ ಚಟುವಟಿಕೆಗಳನ್ನು ತಡೆಗಟ್ಟಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ: • ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ತಡೆಗಟ್ಟಲು ಜಿಲ್ಲಾ ಮರಳು ಸಮಿತಿ ಹಾಗೂ ತಾಲ್ಲೂಕು ಮರಳು ಸಮಿತಿಯನ್ನು ರಚಿಸಲಾಗಿರುತ್ತದೆ. • ಮೇಲ್ಕಂಡ ಸಮಿತಿಯಲ್ಲಿ ಕಂದಾಯ, ಪೊಲೀಸ್, ಅರಣ್ಯ, ಲೋಕೋಪಯೋಗಿ, ಜಿಲ್ಲಾ ಪಂಚಾಯತ್, ಗಣಿ ಮತ್ತು ಭೂವಿಜ್ಞಾನ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಸದಸ್ಯರುಗಳಾಗಿರುತ್ತಾರೆ. ಸದರಿ ಇಲಾಖೆಗಳ ಅಧಿಕಾರಿಗಳಿಗೆ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ತಡೆಯಲು ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957ರ ಕಲಂ 4(1), 4(1-A), 21 ಮತ್ತು 22 ರಡಿ ಯಲ್ಲಿ ಹಾಗೂ ಕರ್ನಾಟಕ ಉಪ ಖನಿಜ (ತಿದ್ದುಪಡಿ) ರಿಯಾಯಿತಿ ನಿಯಮಾವಳಿ 1994ರ ನಿಯಮ 31-R ರ ಉಪ ನಿಯಮ 13 ರಡಿಯಲ್ಲಿ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆ. • ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆಯನ್ನು ನಿಯಂತ್ರಿಸಲು ಜಿಲ್ಲಾ ಮರಳು ಸಮಿತಿಯಿಂದ ತಾಲ್ಲೂಕುವಾರು ಚಾಲಿತ ದಳದ ತಂಡವನ್ನು ರಚಿಸಿಕೊಂಡು ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆಯನ್ನು ನಿಯಂತ್ರಿಸಲಾಗುತ್ತಿದೆ.

		• ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆ ಚಟುವಟಿಕೆಗಳಡಿ ಸಂಗ್ರಹಿಸಲಾದ ದಂಡದ ಮೊತ್ತ ಹಾಗೂ ದಾಖಲಿಸಲಾದ ಮೊಕದ್ದಮೆಗಳ ವಿವರಗಳು ಈ ಕೆಳಕಂಡಂತಿವೆ.

(ರೂ. ಲಕ್ಷಗಳಲ್ಲಿ)

ವರ್ಷ	ಅನಧಿಕೃತ ಮರಳು ಗಣಿಗಾರಿಕೆ / ಸಾಗಾಣಿಕೆ		
	ಪತ್ತೆ ಹಚ್ಚಿದ ಪ್ರಕರಣಗಳ ಸಂಖ್ಯೆ	ವಸೂಲಾದ ದಂಡದ ಮೊತ್ತ	ದಾಖಲಿಸಿದ ಮೊಕದ್ದಮೆಗಳ ಸಂಖ್ಯೆ
2018–19	182	37.6	130
2019–20	144	9.66	127
2020–21 (ಜನವರಿ–2021 ರ ಅಂತ್ಯಕ್ಕೆ)	29	44.21	268
ಒಟ್ಟು	**355**	**91.47**	**525**

ಸಂಖ್ಯೆ ಸಿಐ 202 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	3126
ಸದಸ್ಯರ ಹೆಸರು :	ಶ್ರೀ ಖಾದರ್ ಯು.ಟಿ. (ಮಂಗಳೂರು)
ಉತ್ತರಿಸಬೇಕಾದ ದಿನಾಂಕ :	19-03-2021
ಉತ್ತರಿಸುವವರು :	ಪೌರಾಡಳಿತ ಮತ್ತು ಸಕ್ಕರೆ ಸಚಿವರು

ಕ್ರಸ	ಪ್ರಶ್ನೆ	ಉತ್ತರ
ಅ)	ನಗರ ಮತ್ತು ಪಟ್ಟಣಗಳನ್ನು ಸ್ವಚ್ಛವಾಗಿಡಲು ಶ್ರಮಿಸುತ್ತಿರುವ ಪೌರ ಕಾರ್ಮಿಕರ ಸೇವಾ ಭದ್ರತೆ, ವೇತನ ಹಾಗೂ ಅವರಿಗೆ ವಸತಿ ಒದಗಿಸುವ ವಿಚಾರದಲ್ಲಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?	ಪೌರಕಾರ್ಮಿಕರ ಸೇವಾ ಭದ್ರತೆ, ವೇತನ ಹಾಗೂ ಅವರಿಗೆ ವಸತಿ ಒದಗಿಸುವ ವಿಚಾರದಲ್ಲಿ ಸರ್ಕಾರದ ಹಂತದಲ್ಲಿ ತೆಗೆದುಕೊಂಡಿರುವ ಕ್ರಮಗಳು ಕೆಳಕಂಡಂತ್ತಿರುತ್ತದೆ. **ಸೇವಾ ಭದ್ರತೆ ಹಾಗೂ ವೇತನ:** ಖಾಯಂ ಪೌರಸೇವಾ ನೌಕರರಿಗೆ ನೀಡುವಂತಹ ಎಲ್ಲಾ ಸೇವಾ ಸವಲತ್ತುಗಳನ್ನು ಖಾಯಂ ಪೌರಕಾರ್ಮಿಕರಿಗೂ ನೀಡಲಾಗುತ್ತಿದೆ, ಪೌರಕಾರ್ಮಿಕರಿಗೆ 21 ದಿನಗಳ ವಿಶೇಷ ಭತ್ಯೆ ಹಾಗೂ ಸರ್ಕಾರದ ಆದೇಶ ಸಂಖ್ಯೆ: 126 ಟಿಎಂಎಸ್ 2016 ದಿನಾಂಕ: 04.12.2017ರಲ್ಲಿ ಪೌರಕಾರ್ಮಿಕರನ್ನು ಒಂದು ಬಾರಿಗೆ ವಿಶೇಷ ನೇಮಕಾತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 126 ಟಿಎಂಎಸ್ 2016, ದಿನಾಂಕ: 07.8.2017 ರಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ 700 ಜನಸಂಖ್ಯೆಗೆ ಒಬ್ಬ ಪೌರಕಾರ್ಮಿಕರಂತೆ ನಿಗದಿಪಡಿಸಲಾಗಿದ್ದು, ಹೊರಗುತ್ತಿಗೆ ನೀಡುವುದನ್ನು ಸ್ಥಗಿತಗೊಳಿಸಿ ಸ್ಥಳೀಯ ಸಂಸ್ಥೆಗಳಿಂದ ನೇರವಾಗಿ ಸಂಭಾವನೆಯನ್ನು ನೀಡಲು ಆದೇಶಿಸಲಾಗಿರುತ್ತದೆ. ಖಾಯಂ ಪೌರಸೇವಾ ನೌಕರರಿಗೆ ಸರ್ಕಾರದ ಆದೇಶಾನುಸಾರ ಕಾಲಕಾಲಕ್ಕನುಗುಣವಾಗಿ ಹಾಗೂ ವೇತನ ಆಯೋಗದ ಆದೇಶದಂತೆ ಬದಲಾಗುವ ವೇತನದಂತೆಯೇ ಖಾಯಂ ಪೌರಕಾರ್ಮಿಕರಿಗೂ ಸಹ ವೇತನ ಪಾವತಿಸಲಾಗುತ್ತಿದೆ. ಹಾಗೂ ನೇರ ಪಾವತಿ (ಹೊರಗುತ್ತಿಗೆ) ಹಾಗೂ ಗುತ್ತಿಗೆ ಪೌರಕಾರ್ಮಿಕರಿಗೆ ಕಾರ್ಮಿಕ ಇಲಾಖೆಯು ನಿಗದಿಪಡಿಸಿರುವ ಕನಿಷ್ಠ ವೇತನದ ಪ್ರಕಾರ **ನಗರಸಭೆ ಗ್ರೇಡ್-1 ರೂ.15343/-**

		ನಗರಸಭೆ ಗ್ರೇಡ್-2 ರೂ.14953/ ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ರೂ.14563/-ವೇತನ ನೀಡಲಾಗುತ್ತಿದ್ದು, ESI & PF ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. **<u>ಪೌರಕಾರ್ಮಿಕರ ವಸತಿ ಯೋಜನೆ</u>** ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಅನೈರ್ಮಲ್ಯ ವಾತಾವರಣದಲ್ಲಿ ಸ್ವಚ್ಚತಾ ಕಾರ್ಯ ನಿರ್ವಹಿಸುತ್ತಿರುವ ವಸತಿ ರಹಿತ ಖಾಯಂ ಪೌರಕಾರ್ಮಿಕರು, ಲೋಡರ್, ಯು.ಜಿ.ಡಿ ಹೆಲ್ಪರ್ ಹಾಗೂ ಕ್ಲೀನರ್ ಗಳಿಗೆ ವಸತಿ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ **"ಪೌರಕಾರ್ಮಿಕರ ಗೃಹಭಾಗ್ಯ ಯೋಜನೆ"** ಯನ್ನು 2014-15 ರಿಂದ ಜಾರಿಗೊಳಿಸಲಾಗಿರುತ್ತದೆ. ಅರ್ಹ ಫಲಾನುಭವಿಗಳು ಸ್ವಂತ ನಿವೇಶನ ಹೊಂದಿದ್ದಲ್ಲಿ (ಬಿ.ಎಲ್.ಸಿ) ಮಾದರಿಯಡಿ ಅಥವಾ ನಿವೇಶನ ರಹಿತರಿಗೆ ನಗರ ಸ್ಥಳೀಯ ಸಂಸ್ಥೆಯ ಜಾಗದಲ್ಲಿ ವಸತಿ ಸಮುಚ್ಚಯ (ಎ.ಎಚ್.ಪಿ) ಮಾದರಿಯಡಿ ವಸತಿ ಸೌಲಭ್ಯ ಕಲ್ಪಿಸಲಾಗುತ್ತಿದೆ. ಪ್ರತಿ ಘಟಕಕ್ಕೆ ವೆಚ್ಚ ರೂ.7.50 ಲಕ್ಷಗಳಿದ್ದು, ಇದರಲ್ಲಿ ರಾಜ್ಯದ ಸಹಾಯ ಧನ ರೂ.6.00 ಲಕ್ಷಗಳು ಮತ್ತು ಕೇಂದ್ರ ಸರ್ಕಾರದ PMAY ಯೋಜನೆಯಿಂದ) ಬ್ಯಾಂಕ್ ಸಾಲ ಫಲಾನುಭವಿಗಳಿಂದ ರೂ.1.50 ಲಕ್ಷಗಳನ್ನು ಭರಿಸಲಾಗುತ್ತಿದೆ. ಯೋಜನೆಯಡಿ ಈವರೆಗೆ 4918 ಫಲಾನುಭವಿಗಳನ್ನು (2929 ಎ.ಎಚ್.ಪಿ ಮತ್ತು 1989 ಮಾಡಲಾಗಿರುತ್ತದೆ. ಬಿ.ಎಲ್.ಸಿ)

ಸಂಖ್ಯೆ: ನಅಇ 48 ಜಿಇಎಲ್ 2021

(ಎನ್.ನಾಗರಾಜು, ಎಂ.ಟಿ.ಬಿ)
ಪೌರಾಡಳಿತ ಮತ್ತು ಸಕ್ಕರೆ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3127
ವಿಧಾನಸಭೆ ಸದಸ್ಯರ ಹೆಸರು : ಶ್ರೀ ಖಾದರ್ ಯು.ಟಿ (ಮಂಗಳೂರು)
ಉತ್ತರಿಸುವವರು : ಮಾನ್ಯ ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಸಚಿವರು
ಉತ್ತರಿಸಬೇಕಾದ ದಿನಾಂಕ : 19.03.2021

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಕೈಗಾರಿಕಾ ಕ್ಷೇತ್ರದ ಬೆಳವಣಿಗೆಗೆ ಹಾಗೂ ಕೈಗಾರಿಕೆಗಳಲ್ಲಿ ಹೆಚ್ಚು ಮಂದಿಗೆ ಉದ್ಯೋಗಾವಕಾಶ ಕಲ್ಪಿಸಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ?	ಕೈಗಾರಿಕಾ ಕ್ಷೇತ್ರದ ಬೆಳವಣಿಗೆಗೆ ಹಾಗೂ ಕೈಗಾರಿಕೆಗಳಲ್ಲಿ ಹೆಚ್ಚು ಮಂದಿಗೆ ಉದ್ಯೋಗಾವಕಾಶ ಕಲ್ಪಿಸಲು ಸರ್ಕಾರವು ಈ ಕೆಳಗಿನ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಜಾರಿಗೆ ತಂದಿರುತ್ತದೆ: 1. ಕೇಂದ್ರ ಸರ್ಕಾರದ ಪ್ರಧಾನಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಗರಿಷ್ಠ ಸಾಲ ರೂ.25.00 ಲಕ್ಷಗಳವರೆಗೆ ಬ್ಯಾಂಕ್‌ಗಳ ಮೂಲಕ ಸಾಲ ಸೌಲಭ್ಯ ಒದಗಿಸಿ ಸಣ್ಣ ಉದ್ಯಮಗಳನ್ನು ಸ್ಥಾಪಿಸಿ ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲ ಒದಗಿಸಲಾಗುವುದು ಹಾಗೂ ಯೋಜನಾ ವೆಚ್ಚದ ಮೇಲೆ ಶೇ.15 ರಿಂದ ಶೇ.35 ರವರೆಗೆ ಗರಿಷ್ಠ ರೂ.3.75 ಲಕ್ಷದಿಂದ ರೂ.8.75 ಲಕ್ಷದವರೆಗೆ ಸಹಾಯಧನ ನೀಡಲಾಗುತ್ತಿದೆ. 2. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಸ್ಥಾಪಿಸಲು ರೂ.5.00 ಕೋಟಿಗಳವರೆಗೆ ಸಾಲ ಪಡೆದು ನಿಗದಿತ ಸಮಯದಲ್ಲಿ ಮರುಪಾವತಿ ಮಾಡಿದ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕಾ ಘಟಕಗಳಿಗೆ 5 ವರ್ಷಗಳ ಅವಧಿಗೆ ಶೇ.6 ರಂತೆ ಬಡ್ಡಿ ಸಹಾಯಧನ ನೀಡಲಾಗುವುದು. 3. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಉದ್ಯಮಶೀಲರಿಗೆ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಯಡಿಯಲ್ಲಿ ಶೇ.75 ರಿಯಾಯಿತಿ ದರದಲ್ಲಿ ಕೈಗಾರಿಕಾ ನಿವೇಶನಗಳನ್ನು (ಗರಿಷ್ಠ 2 ಎಕರೆ) ಮತ್ತು ಕೈಗಾರಿಕಾ ಶೆಡ್‌ಗಳನ್ನು ನೀಡಲಾಗುತ್ತಿದೆ. 1. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಉದ್ಯಮಶೀಲರಿಗೆ ವಿಶೇಷ ಘಟಕ ಉಪಯೋಜನೆ ಮತ್ತು ಗಿರಿಜನ ಉಪ ಯೋಜನೆ ಯಡಿಯಲ್ಲಿ ಸ್ವಯಂ ಉದ್ಯೋಗ ಕೈಗೊಳ್ಳಲು ಗರಿಷ್ಠ ರೂ.10.00 ಲಕ್ಷ ಯೋಜನಾ ವೆಚ್ಚದ ಮೇಲೆ ಶೇ.60 ರಷ್ಟು ಗರಿಷ್ಠ ರೂ.5.00 ಲಕ್ಷ ಸಹಾಯಧನ ನೀಡಲಾಗುತ್ತಿದೆ. 4. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ಪಂಗಡದ ಮೊದಲ ಪೀಳಿಗೆಯ ಉದ್ಯಮಿದಾರರು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಸ್ಥಾಪಿಸುವ ಹೊಸ ಘಟಕಗಳಿಗೆ ಗರಿಷ್ಠ ರೂ.2.00 ಕೋಟಿ ಯೋಜನಾ ವೆಚ್ಚದಲ್ಲಿ The Debt Equity Ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮತ್ತು 1/3 ಪ್ರವರ್ತಕರ ಬಂಡವಾಳ) ಘಟಕಕ್ಕೆ ಪ್ರವರ್ತಕ ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50 ರಷ್ಟು ಬಡ್ಡಿರಹಿತ ಗರಿಷ್ಠ ರೂ.33.00 ಲಕ್ಷ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುತ್ತಿದೆ. 5. ಹೊಸ ಕೈಗಾರಿಕಾ ನೀತಿ 2020-25 ರನ್ವಯ ಈ ಕೆಳಗಿನ ಸಹಾಯಧನವನ್ನು ಹೊಸದಾಗಿ ಬಂಡವಾಳ ಹೂಡಿರುವ/ ವಿಸ್ತರಣೆ/ ವೈವಿಧ್ಯೀಕರಣ/ ಆಧುನೀಕರಣ ಕಾರ್ಯಕ್ರಮ ಕೈಗೊಂಡಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ನೀಡಲಾಗಿರುತ್ತದೆ:

		1. ಬಂಡವಾಳ ಹೂಡಿಕೆ ಸಹಾಯಧನ 2. ಮುದ್ರಾಂಕ ಶುಲ್ಕ ವಿನಾಯಿತಿ 3. ನೋಂದಣಿ ಶುಲ್ಕ ರಿಯಾಯಿತಿ ಪ್ರಮಾಣಪತ್ರ 4. ಭೂಪರಿವರ್ತನಾ ಶುಲ್ಕ ಮರುಪಾವತಿ ಸಹಾಯಧನ 5. ವಿದ್ಯುತ್ ಸಹಾಯಧನ 6. ತ್ಯಾಜ್ಯನೀರು ಸಂಸ್ಕರಣಾ ಘಟಕ ಸ್ಥಾಪನೆ ಸಹಾಯಧನ 7. ವಿದ್ಯುತ್ ತೆರಿಗೆ ವಿನಾಯಿತಿ ಪ್ರಮಾಣಪತ್ರ 8. ರಫ್ತು ಕೈಗಾರಿಕೆಗಳಿಗೆ ಪ್ರೋತ್ಸಾಹ 9. ತಾಂತ್ರಿಕ ಉನ್ನತೀಕರಣ, ಗುಣಮಟ್ಟ ಪ್ರಮಾಣ ಪತ್ರ ಸಹಾಯಧನ 10. ಮಳೆ ನೀರುಕೊಯ್ಲು / ಸಂರಕ್ಷಣೆ ಸಹಾಯಧನ 11. ತಂತ್ರಜ್ಞಾನ ಉನ್ನತೀಕರಣಕ್ಕೆ ಬಡ್ಡಿ ಸಹಾಯಧನ. **ಕುಶಲಕರ್ಮಿಗಳಿಗೆ ಇರುವ ಯೋಜನೆಗಳು:** 1. ಕುಶಲಕರ್ಮಿಗಳಿಗೆ ಶೇ.4 ಬಡ್ಡಿದರದಲ್ಲಿ ಅವಧಿ ಸಾಲ (ಟರ್ಮ್ ಲೋನ್) ಮತ್ತು ದುಡಿಮೆ ಬಂಡವಾಳ ಸಾಲ. 2. ಕುಶಲಕರ್ಮಿಗಳ ಕರಕುಶಲ ವಸ್ತುಗಳ ವಹಿವಾಟಿನ ಮೇಲೆ ಶೇ.10 ರಷ್ಟು ಮಾರುಕಟ್ಟೆ ಅಭಿವೃದ್ಧಿ ನೆರವು (ಎಂಡಿಎ) 3. ಕರಕುಶಲ ಸಂಘಟನೆಗಳಿಗೆ, ಕರಕುಶಲ ಕಾಂಪ್ಲೆಕ್ಸ್‌ಗಳಿಗೆ, ಸಮೂಹ ಮೊದಲಾದವುಗಳಿಗೆ ಯಂತ್ರೋಪಕರಣಗಳು, ಬಿಡಿ ಭಾಗಗಳಿಗೆ ಶೇ.75 ರಷ್ಟು ಅನುದಾನ 4. ಆಯ್ದ ಅಭ್ಯರ್ಥಿಗಳಿಗೆ ಎನ್‌ಐಡಿ (ರಾಷ್ಟ್ರೀಯ ವಿನ್ಯಾಸ ಸಂಸ್ಥೆ) ಮತ್ತು ಎನ್‌ಐಎಫ್‌ಟಿ (ರಾಷ್ಟ್ರೀಯ ಫ್ಯಾಷನ್ ತಂತ್ರಜ್ಞಾನ ಸಂಸ್ಥೆ) ಗಳಲ್ಲಿ ಉಚಿತ ತರಬೇತಿ.(ಅಗತ್ಯಕ್ಕೆ ತಕ್ಕಂತೆ). 5. ಇ– ಮಾರುಕಟ್ಟೆ ಮತ್ತು ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನಗಳಂತ ಆಧುನಿಕ ಕೌಶಲ್ಯಗಳಲ್ಲಿ ಕುಶಲಕರ್ಮಿಗಳಿಗೆ ತರಬೇತಿ. 6. ಆಯ್ದ ಕುಶಲಕರ್ಮಿಗಳಿಗೆ ದೇಶದಾದ್ಯಂತ ಅಧ್ಯಯನ ಪ್ರವಾಸ 7. ಮೆಟ್ರೋ ನಿಲ್ದಾಣ, ವಿಮಾನ ನಿಲ್ದಾಣ, ಬಸ್ ನಿಲ್ದಾಣ, ರೈಲ್ವೇ ನಿಲ್ದಾಣ, ಪ್ರಮುಖ ಪಂಚತಾರಾ ಹೋಟೇಲುಗಳಲ್ಲಿ ಮಳಿಗೆ ದರದಲ್ಲಿ ರಿಯಾಯಿತಿ. 8. ಕುಶಲಕರ್ಮಿಗಳು ತಮ್ಮ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೆ ವೇದಿಕೆ ರಾಷ್ಟ್ರಮಟ್ಟದ ವಾರ್ಷಿಕ ಮೇಳವನ್ನು ಆಯೋಜಿಸುವುದು.

ಸಿಐ 49 ಎಸ್‌ಎಸ್‌ಐ 2021

(ಸಿ.ಸಿ ಪಾಟೀಲ್)

ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು

ಸಾರ್ವಜನಿಕ ಸಂಪರ್ಕ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 3131

ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್.ಡಿ. (ಹೊಳೇನರಸೀಪುರ)

ಉತ್ತರಿಸಬೇಕಾದ ದಿನಾಂಕ : 19.03.2021

ಉತ್ತರಿಸುವ ಸಚಿವರು : ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಹಾಸನ ಜಿಲ್ಲೆಯ 07 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ಪಡಿತರ ಚೀಟಿಗಳನ್ನು ಪಡೆದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)	(see table below)

ಕ್ರ.ಸಂ	ವಿಧಾನಸಭಾ ಕ್ಷೇತ್ರದ ಹೆಸರು	ಅಂತ್ಯೋದಯ ಅನ್ನ ಪಡಿತರ ಚೀಟಿಗಳ ಸಂಖ್ಯೆ	ಆದ್ಯತಾ ಪಡಿತರ ಚೀಟಿಗಳ ಸಂಖ್ಯೆ	ಆದ್ಯತೇತರ ಪಡಿತರ ಚೀಟಿಗಳ ಸಂಖ್ಯೆ
1.	ಅರಕಲಗೂಡು	4503	67167	3571
2.	ಅರಸೀಕೆರೆ	3033	66196	2491
3.	ಬೇಲೂರು	3343	58865	4084
4.	ಶ್ರವಣಬೆಳಗೋಳ	3248	59824	4554
5.	ಹಾಸನ	1908	54785	8068
6.	ಹೊಳೆನರಸೀಪುರ	3544	63515	4221
7.	ಸಕಲೇಶಪುರ	3890	58970	6955
	ಒಟ್ಟು	23469	429322	33944

ಕ್ರ. ಸಂ	ಪ್ರಶ್ನೆ	ಉತ್ತರ
ಆ	ಸದರಿ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಪಡಿತರ ಚೀಟಿಗಳನ್ನು ಹಂಚಲು ಬಾಕಿ ಇರುವ ಫಲಾನುಭವಿಗಳ ಸಂಖ್ಯೆ ಎಷ್ಟು; (ವಿಧಾನಸಭಾ ಕ್ಷೇತ್ರವಾರು ಸಂಪೂರ್ಣ ಮಾಹಿತಿ ನೀಡುವುದು)	(see table below)

ಕ್ರ.ಸಂ	ವಿಧಾನಸಭಾ ಕ್ಷೇತ್ರದ ಹೆಸರು	ಪಡಿತರ ಚೀಟಿಗಳನ್ನು ಹಂಚಲು ಬಾಕಿ ಇರುವ ಸಂಖ್ಯೆ
1.	ಅರಕಲಗೂಡು	409
2.	ಅರಸೀಕೆರೆ	503
3.	ಬೇಲೂರು	696
4.	ಶ್ರವಣಬೆಳಗೋಳ	501
5.	ಹಾಸನ	730
6.	ಹೊಳೆನರಸೀಪುರ	373
7.	ಸಕಲೇಶಪುರ	709
ಒಟ್ಟು		3921

ಕ್ರ. ಸಂ	ಪ್ರಶ್ನೆ	ಉತ್ತರ
ಇ	ಈ ಪಡಿತರ ಚೀಟಿಗಳನ್ನು ಪಡೆಯಲು ಬಾಕಿ ಇರುವ ಅರ್ಜಿಗಳನ್ನು ಎಷ್ಟು ದಿನಗಳಲ್ಲಿ ವಿಲೇವಾರಿ ಮಾಡಲಾಗುವುದು;	ಆದ್ಯತೇತರ ಪಡಿತರ ಚೀಟಿಗಳನ್ನು ತಕ್ಷಣವೇ ವಿತರಿಸಲಾಗುತ್ತಿದೆ. ಆದ್ಯತಾ ಪಡಿತರ ಚೀಟಿಗಳನ್ನು ವಿತರಿಸುವ ಸ್ಥಳ ಪರಿಶೀಲನೆ ನಡೆಸಬೇಕಾಗಿರುವುದರಿಂದ ಕೊವಿಡ್-19 ರ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲನಾ ಕಾರ್ಯವನ್ನು ಕೈಗೊಳ್ಳಬೇಕಾಗಿರುವ ಕಾರಣ ಪಡಿತರ ಚೀಟಿ ವಿತರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಈ	ಪಡಿತರ ಚೀಟಿಯನ್ನು ಹಂಚಿಕೆ ಮಾಡಲು ಸರ್ಕಾರದ ನಿಗದಿಪಡಿಸಿರುವ ಮಾನದಂಡಗಳೇನು; ಈ ಪಡಿತರ ಚೀಟಿಗಳನ್ನು ಬಾಕಿ ಇರುವ ಪ್ರಕರಣದಲ್ಲಿ ಎಷ್ಟು ದಿನದೊಳಗೆ ವಿತರಿಸಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)	ಸರ್ಕಾರಿ ಆದೇಶ ಸಂ:ಆನಾಸ 116 ಡಿಆರ್‌ಎ 2015, ಬೆಂಗಳೂರು, ದಿನಾಂಕ:25.03.2017 ಮತ್ತು ಸರ್ಕಾರಿ ಆದೇಶ ಸಂ:ಆನಾಸ 116 ಡಿಆರ್‌ಎ 2015, ಬೆಂಗಳೂರು, ದಿನಾಂಕ:20.05.2017 ರಂತೆ ಕೆಳಕಂಡ ಹೊರಗಿಡುವಿಕೆ ಮಾನದಂಡಗಳ (Exclusion Criteria) ಆಧಾರದ ಮೇಲೆ ಆದ್ಯತಾ (BPL) ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. 1)ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ, ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ, ಸರ್ಕಾರಿ ಸ್ವಾಮ್ಯದಸಂಸ್ಥೆಗಳು/ಮಂಡಳಿಗಳು/ನಿಗಮಗಳು/ಸ್ವಾಯತ್ತ ಸಂಸ್ಥೆಗಳೂ ಇತ್ಯಾದಿ: ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ವ್ಯಾಟ್/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು. 2. ಗ್ರಾಮೀಣ ಪ್ರದೇಶದಲ್ಲಿ 3 ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶಗಳಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು. 3. ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್ ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ, ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು. 4. ಕುಟುಂಬದ ವಾರ್ಷಿಕ ಆದಾಯವು ರೂ.1.20 ಲಕ್ಷಗಳಿಗಿಂತ ಹೆಚ್ಚು ಇರುವ ಕುಟುಂಬಗಳು. ಆದ್ಯತೇತರ ಪಡಿತರ ಚೀಟಿಗಳನ್ನು ತಕ್ಷಣವೇ ವಿತರಿಸಲಾಗುತ್ತಿದೆ. ಆದ್ಯತಾ ಪಡಿತರ ಚೀಟಿಗಳನ್ನು ವಿತರಿಸುವ ಸ್ಥಳ ಪರಿಶೀಲನೆ ನಡೆಸಬೇಕಾಗಿರುವುದರಿಂದ ಕೊವೀಡ್-19 ರ ಹಿನ್ನೆಲೆಯಲ್ಲಿ ಸ್ಥಳಾ ಪರಿಶೀಲನಾ ಕಾರ್ಯವನ್ನು ಕೈಗೊಳ್ಳಬೇಕಾಗಿರುವ ಕಾರಣ ಪಡಿತರ ಚೀಟಿ ವಿತರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ಆನಾಸ 125ಡಿಆರ್‌ಎ 2021 (ಇ-ಆಫೀಸ್)

(ಉಮೇಶ್.ವಿ ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3160
ಸದಸ್ಯರ ಹೆಸರು	:	ಶ್ರೀ ರಘುಪತಿ ಭಟ್ ಕೆ. (ಉಡುಪಿ)
ಉತ್ತರಿಸುವವರು	:	ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು
ಉತ್ತರಿಸುವ ದಿನಾಂಕ	:	19.03.2021

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳು ಸ್ಥಳೀಯರನ್ನು ಕಂಪನಿಗಳಲ್ಲಿ ನೇಮಕಾತಿ ಮಾಡಿಕೊಳ್ಳುವಲ್ಲಿ ಇರುವ ನಿಯಮಗಳೇನು (ಸಂಪೂರ್ಣ ವಿವರಗಳನ್ನು ಒದಗಿಸುವುದು);	ಡಾ: ಸರೋಜಿನಿ ಮಹಿಷಿ ವರದಿಯ ಪ್ರಕಾರ ರಾಜ್ಯದಲ್ಲಿ ಚಾಲ್ತಿಯಲ್ಲಿರುವ 50ಕ್ಕಿಂತ ಹೆಚ್ಚು ಕಾರ್ಮಿಕರುಳ್ಳ ಸಾರ್ವಜನಿಕ ಮತ್ತು ಖಾಸಗಿ ಬೃಹತ್, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಘಟಕಗಳಲ್ಲಿ ಎ ಮತ್ತು ಬಿ ವರ್ಗಗಳಲ್ಲಿ ಕ್ರಮವಾಗಿ ಶೇ.65 ಮತ್ತು ಶೇ.80 ಹಾಗೂ ಸಿ ಮತ್ತು ಡಿ ವರ್ಗಗಳಲ್ಲಿ ಶೇ.100 ರಷ್ಟು ಕನ್ನಡಿಗರಿಗೆ/ಸ್ಥಳೀಯರಿಗೆ ಉದ್ಯೋಗಾವಕಾಶ ನೀಡಬೇಕಾಗಿರುತ್ತದೆ. ಅಲ್ಲದೇ, ಕೈಗಾರಿಕಾ ನೀತಿ 2014-19 ಮತ್ತು 2020-25 ರನ್ವಯ ಸರ್ಕಾರದಿಂದ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಪಡೆಯುವ ಕೈಗಾರಿಕಾ ಘಟಕಗಳು "ಡಿ" ವರ್ಗದ ಉದ್ಯೋಗಗಳಲ್ಲಿ ಶೇ.100 ರಷ್ಟು ಹಾಗೂ ಘಟಕದ ಒಟ್ಟಾರೆ ಉದ್ಯೋಗಗಳಲ್ಲಿ ಶೇ.70 ರಷ್ಟು ಕನ್ನಡಿಗರಿಗೆ/ ಸ್ಥಳೀಯರಿಗೆ ನೀಡುವ ನಿಬಂಧನೆಯಿದ್ದು, ಅದರಂತೆ ಉದ್ಯೋಗಗಳನ್ನು ನೀಡಿದ ಘಟಕಗಳಿಗೆ ಮಾತ್ರ ಅರ್ಹ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಮಂಜೂರು ಮಾಡಲಾಗುತ್ತಿದೆ.
ಆ	ಉಡುಪಿಯಲ್ಲಿ ಎಷ್ಟು ಕಂಪನಿಗಳು ಕಾರ್ಯಾಚರಿಸುತ್ತಿವೆ; ಎಷ್ಟು ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿದ್ದಾರೆ; ಸ್ಥಳೀಯರಲ್ಲಿ ಎಷ್ಟು ಮಂದಿಯನ್ನು ನೇಮಕ ಮಾಡಿಕೊಳ್ಳಲಾಗಿದೆ (ವೃಂದವಾರು ಹೆಸರು, ವಿಳಾಸ ಸಹಿತ ಸಂಪೂರ್ಣ ವಿವರಗಳನ್ನು ಒದಗಿಸುವುದು);	ಉಡುಪಿ ಜಿಲ್ಲೆಯಲ್ಲಿ ಒಟ್ಟು 25 ಬೃಹತ್ ಮತ್ತು ಮಧ್ಯಮ ಉದ್ದಿಮೆಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿ ಒಟ್ಟು 7262 ಜನರಿಗೆ ಉದ್ಯೋಗ ನೀಡಿದ್ದು, ಅದರಲ್ಲಿ 6480 ಸ್ಥಳೀಯ ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಘಟಕವಾರು ಅಂಕಿ ಅಂಶಗಳನ್ನು **ಅನುಬಂಧ-1** ರಲ್ಲಿ ನೀಡಿದೆ.
ಇ	ಕೈಗಾರಿಕೆಗಳು ಸ್ಥಳೀಯರನ್ನು ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?	

ಸಿಐ 116 ಎಸ್‌ಪಿಐ 2021

(ಜಗದೀಶ್ ಶೆಟ್ಟರ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

ಅನುಬಂಧ - 1

ಕ್ರ.ಸಂ	ಕೈಗಾರಿಕೆಗಳ ವಿವರ	ಒಟ್ಟು ಉದ್ಯೋಗಿಗಳು	ಸ್ಥಳೀಯ ಉದ್ಯೋಗಿ
1	ಮೆ: ಕೆಲ್‌ಟೆಕ್ ಎನರ್ಜೀಸ್ ಲಿ. ವಿಶ್ವನಗರ, ವರಂಗ, ಕಾರ್ಕಳ	73	73
2	ಮೆ: ರಾಜ್ ಫಿಶ್ ಮೀಲ್ & ಆಯಿಲ್ ಕಂಪೆನಿ, ಮಧ್ವರಾಜ್ ರೋಡ್, ಮಲ್ಪೆ, ಉಡುಪಿ.	173	127
3	ಮೆ: ಗೋವನ್ ಫ್ರೆಶ್ ಮೆರೈನ್ ಎಕ್ಸ್‌ಪೋರ್ಟ್ಸ್ ಪ್ರೈವೇಟ್ ಲಿಮಿಟೆಡ್, ಮಣೂರು, ಕೋಟ, ಉಡುಪಿ	74	71
4	ಮೆ: ಮಸ್ಸಲ್ಲಿ ಇಂಡಿಯಾ ಪ್ಯಾಕೇಜಿಂಗ್ ಪ್ರೈವೇಟ್ ಲಿಮಿಟೆಡ್, ಬೊಮ್ಮರಬೆಟ್ಟು, ಹಿರಿಯಡ್ಕ, ಉಡುಪಿ.	109	108
5	ಮೆ: ಬಾಳಿಗಾ ಫಿಶ್‌ನೆಟ್ಸ್, ಹನುಮಂತನಗರ, ಉಡುಪಿ	844	639
6	ಮೆ: ಬೆಲ್-ಓ-ಸೀಲ್ ವಾಲ್ವ್ಸ್ ಪ್ರೈವೇಟ್ ಲಿಮಿಟೆಡ್, ಪುತ್ತೂರು, ಉಡುಪಿ	222	220
7	ಮೆ: ಅಶೋಕ್ ಇಂಪೆಕ್ಸ್, ಕಾಪು, ಉಡುಪಿ.	16	16
8	ಮೆ: ಬೋಳ ರಾಘವೇಂದ್ರ ಕಾಮತ್ & ಸನ್ಸ್, ಕಾರ್ಕಳ	580	580
9	ಮೆ: ಸಂಜೀವಿನಿ ಪೈಪ್ಸ್ & ಫಿಟ್ಟಿಂಗ್ಸ್ ಪ್ರೈವೇಟೆ ಲಿಮಿಟೆಡ್, ಕುಂದಾಪುರ	60	50
10	ಮೆ: ಆರ್ಮರ್ ಕಾರ್ಟೂನ್ಸ್, ಆತ್ರಾಡಿ, ಉಡುಪಿ	76	64
11	ಮೆ: ಮಲ್ಪೆ ಫ್ರೆಶ್ ಮರೈನ್ ಎಕ್ಸ್‌ಪೋರ್ಟ್ಸ್ ಪ್ರೈ ಲಿ, ಉಡುಪಿ	250	226
12	ಮೆ: ಓಶನ್ ಫ್ರೇಶ್ ಎಕ್ಸ್‌ಪೋರ್ಟ್ಸ್, ಮಲ್ಪೆ, ಉಡುಪಿ	59	52
13	ಮೆ: ಟ್ರೆಷರ್ಸ್ ಇಂಡಿಯಾ, ಬಜಾಲ್ ಸ್ಟ್ರೀಸ್, ಮಣಿಪಾಲ, ಉಡುಪಿ	100	99
14	ಮೆ: ಮಣಿಪಾಲ ಮೀಡಿಯಾ & ನೆಟ್‌ವರ್ಕ್ ಪ್ರೈ.ಲಿ.. ಮಣಿಪಾಲ, ಉಡುಪಿ	68	68
15	ಮೆ: ಸುಜ್ಲಾನ್ ಎನರ್ಜಿ ಲಿಮಿಟೆಡ್, ಪಡುಬಿದ್ರಿ, ಉಡುಪಿ (RBU Unit)	08	04
16	ಮೆ: ಸುಜ್ಲಾನ್ ಎನರ್ಜಿ ಲಿಮಿಟೆಡ್, ಪಡುಬಿದ್ರಿ, ಉಡುಪಿ (Nacelle Unit)	03	03
17	ಮೆ: ಲ್ಯಾಮಿನಾ ಫೌಂಡ್ರೀಸ್, ಕುಂಟಾಡಿ ರಸ್ತೆ, ನಿಟ್ಟೆ, ಕಾರ್ಕಳ	230	228
18	ಮೆ: ಬೆಸ್ಟ್ ಸೆಲ್ಲರ್ ಅಪೇರಲ್ಸ್ ಪ್ರೈ.ಲಿ., ಬಜಾಲ್ ಸ್ಟ್ರೀಟ್, ಮಣಿಪಾಲ, ಉಡುಪಿ	975	850
19	ಮೆ: ಹಾಂಗ್ಯೋ ಐಸ್ ಕ್ರೀಮ್ ಪ್ರೈವೇಟ್ ಲಿಮಿಟೆಡ್, ಹೇರೂರು, ಬ್ರಹ್ಮಾವರ, ಉಡುಪಿ.	203	199
20	ಮೆ: ಯಶಸ್ವಿ ಫಿಶ್‌ಮೀಲ್ & ಆಯಿಲ್ ಕಂಪೆನಿ, ಪಿತ್ರೋಡಿ, ಉದ್ಯಾವರ, ಉಡುಪಿ.	317	207
21	ಮೆ: ಹ್ಯಾಷ್‌ಟೆಕ್ ಇಂಡಿಯಾ ಪ್ರೈ ಲಿ., ಉಡುಪಿ	185	171
22	ಮೆ: ಬೋಳ ಸುರೇಂದ್ರ ಕಾಮತ್ & ಸನ್ಸ್, ಕಾರ್ಕಳ	436	415
23	ಮೆ: ಬ್ರೈಟ್‌ಫ್ಲೆಕ್ಸಿ ಇಂಟರ್‌ನ್ಯಾಷನಲ್ ಪ್ರೈವೇಟ್ ಲಿಮಿಟೆಡ್, ಇನ್ನಾ ಗ್ರಾಮ, ಕಾರ್ಕಳ.	160	116
24	ಮೆ: ಮಣಿಪಾಲ ಟೆಕ್ನಾಲಾಜೀಸ್ ಲಿ. ಪ್ರೆಸ್ ಕಾರ್ನರ್, ಮಣಿಪಾಲ, ಉಡುಪಿ.	1733	1733
25	ಮೆ: ಉಡುಪಿ ಪವರ್ ಕಾರ್ಪೋರೇಶನ್ ಲಿಮಿಟೆಡ್, ಎಲ್ಲೂರು, ಉಡುಪಿ.	308	161
	ಒಟ್ಟು:	7262	6480

ಕರ್ನಾಟಕ ವಿಧಾನಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	3271
2. ಮಾನ್ಯ ಸದಸ್ಯರ ಹೆಸರು	:	ಶ್ರೀ ಮಸಾಲ ಜಯರಾಮ್
3. ಉತ್ತರಿಸಬೇಕಾದ ದಿನಾಂಕ	:	19.03.2021
4. ಉತ್ತರಿಸುವ ಸಚಿವರು	:	ಸಹಕಾರ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಳೆದ ಮೂರು ವರ್ಷಗಳಿಂದ ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; ಈ ಪೈಕಿ ಖರ್ಚಾದ ಅನುದಾನ ಎಷ್ಟು; ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಅನುದಾನ ಖರ್ಚಾಗಿದೆ; (ಯೋಜನೆವಾರು ಸಂಪೂರ್ಣ ಮಾಹಿತಿ ನೀಡುವುದು)</td><td>ಕಳೆದ ಮೂರು ವರ್ಷಗಳಿಂದ ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆಗೆ ಒದಗಿಸಿರುವ ಅನುದಾನ ಮತ್ತು ಖರ್ಚಾದ ವಿವರಗಳು ಈ ಕೆಳಕಂಡಂತಿರುತ್ತವೆ;
(ರೂ. ಲಕ್ಷಗಳಲ್ಲಿ)
<table>
<tr><th>ವರ್ಷ</th><th>ಯೋಜನೆ ಹೆಸರು</th><th>ಕಾಮಗಾರಿ ಹೆಸರು</th><th>ಒದಗಿಸಿದ ಅನುದಾನ</th><th>ಖರ್ಚಾದ ಅನುದಾನ</th></tr>
<tr><td rowspan="2">2017–18</td><td>ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ</td><td>1000 ಮೆ.ಟನ್ ಸಾಮರ್ಥ್ಯದ ಗೋದಾಮು ನಿರ್ಮಾಣ</td><td>73.83</td><td>73.83</td></tr>
<tr><td>ನಬಾರ್ಡ್‌ಸಂಸ್ಥೆಯ ಆರ್.ಐ.ಡಿ.ಎಫ್–21</td><td>ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಆಂತರಿಕ ರಸ್ತೆಗಳ ಅಭಿವೃದ್ಧಿ</td><td>31.38</td><td>31.38</td></tr>
<tr><td>2018–19</td><td colspan="4">ಯಾವುದು ಇರುವುದಿಲ್ಲ</td></tr>
<tr><td rowspan="2">2019–20</td><td rowspan="2">ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ</td><td>ಮಾಯಸಂದ್ರ ರೈತಸಂತೆ ಅಭಿವೃದ್ಧಿ</td><td>17.226</td><td>17.226</td></tr>
<tr><td>ಡಿ.ಕಲ್ಕೆರೆ ರೈತಸಂತೆ ಅಭಿವೃದ್ಧಿ</td><td>17.226</td><td>17.226</td></tr>
</table></td></tr>
<tr><td>ಆ</td><td>ಕೃಷಿ ಉತ್ಪನ್ನ ಮಾರುಕಟ್ಟೆಯಿಂದ ರೈತರಿಗೆ ಸಿಗುವ ಸೌಲಭ್ಯವೇನು; ರೈತರಿಗೆ ಮಾಹಿತಿ ತಲುಪಿಸುವಲ್ಲಿ ಕೈಗೊಂಡ ಕ್ರಮಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)</td><td>ಕೃಷಿ ಉತ್ಪನ್ನ ಮಾರುಕಟ್ಟೆಯಿಂದ ರೈತರಿಗೆ ಸಿಗುವ ಸೌಲಭ್ಯಗಳು ಈ ಕೆಳಕಂಡಂತಿರುತ್ತವೆ;
1. ರೈತರು ಪ್ರಾಂಗಣಕ್ಕೆ ತರುವ ಉತ್ಪನ್ನಗಳಿಗೆ ಸ್ಪರ್ಧಾತ್ಮಕವಾಗಿ ಬೆಲೆ ದೊರೆಯಲು ಇ–ಟೆಂಡರ್ ವ್ಯವಸ್ಥೆ ಹಾಗೂ ಉತ್ಪನ್ನಗಳನ್ನು ತೂಕ ಮಾಡಲು ಎಲೆಕ್ಟ್ರಾನಿಕ್ ತೂಕದ ಯಂತ್ರವನ್ನು ಅಳವಡಿಸಲಾಗಿದೆ.
2. ಈ ಸಮಿತಿಯಲ್ಲಿ ರೈತರು ಬೆಳೆದ ಉತ್ಪನ್ನಗಳಿಗೆ ಅಡಮಾನ ಸಾಲ ಯೋಜನೆಯಡಿ ಸಾಲ ನೀಡುವ ವ್ಯವಸ್ಥೆ ಜಾರಿಯಲ್ಲಿದೆ.</td></tr>
</table>

		3. ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಉತ್ಪನ್ನಗಳ ಧಾರಣೆ ಕುಸಿತಗೊಂಡ ಸಮಯದಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆ ಅನುಷ್ಠಾನಗೊಳಿಸಲಾಗುತ್ತದೆ. 4. ರೈತ ಕುಟುಂಬ ಸದಸ್ಯರುಗಳಿಗೆ ಕೃಷಿ ಚಟುವಟಿಕೆಯಲ್ಲಿ ತೊಡಗಿದಾಗ ಮರಣ/ಅಂಗವಿಕಲತೆ ಉಂಟಾದಲ್ಲಿ ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆಯಡಿ ಕನಿಷ್ಠ ರೂ.10,000-00ದಿಂದ ಗರಿಷ್ಠ ರೂ.1,00,000-00 ವರೆಗೆ ಪರಿಹಾರ ಮೊತ್ತವನ್ನು ಕಲ್ಪಿಸಲಾಗುವುದು 5. ರೈತರಿಗೆ ಪ್ರಾಂಗಣದಲ್ಲಿ ಮೂಲಭೂತಸೌಕರ್ಯಗಳಾದ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಪ್ರತ್ಯೇಕ ಶೌಚಾಲಯಗಳು, ರೈತಭವನ, ಮುಚ್ಚುಹರಾಜು ಕಟ್ಟೆ, ಶ್ರಮಿಕ ಭವನ, ಹಾಗೂ ಇನ್ನಿತರೆ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. 6. ಕೃಷಿ ಮಾರಾಟ ವಾಹಿನಿ ವೆಬ್‌ಸೈಟ್ ಹಾಗೂ ಉಚಿತ ದೂರವಾಣಿ ಮೂಲಕ ಟೆಂಡರ್ ಆದ ಕೃಷಿ ಉತ್ಪನ್ನಗಳ ಬೆಲೆ ಧಾರಣೆಯ ಮಾಹಿತಿಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಮೇಲ್ಕಂಡ ಯೋಜನೆಗಳ ಮಾಹಿತಿಗಳನ್ನು ಕರಪತ್ರ/ ಸುದ್ದಿ ಮಾಧ್ಯಮಗಳ ಮೂಲಕ ರೈತರಿಗೆ ತಲುಪಿಸುವ ಕ್ರಮಕೈಗೊಳ್ಳಲಾಗುತ್ತಿದೆ.

ಸಂಖ್ಯೆ:ಸಿಒ 114 ಎಂಆರ್‌ಇ 2021

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2312
ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ಅಜಯ್ ಧರ್ಮ ಸಿಂಗ್ ಡಾ|| (ಜೇವರ್ಗಿ)
ಉತ್ತರಿಸಬೇಕಾದ ದಿನಾಂಕ	:	19.03.2021
ಉತ್ತರಿಸುವ ಸಚಿವರು	:	ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಪಡಿತರ ವ್ಯವಸ್ಥೆಗೆ ಅವಶ್ಯ ಪ್ರಮಾಣದ ಯಾವ ಆಹಾರ ಧಾನ್ಯಗಳನ್ನು ಸರಬರಾಜು ಮಾಡಲಾಗುತ್ತಿದೆ (ಸಂಪೂರ್ಣ ಮಾಹಿತಿ ಒದಗಿಸುವುದು);	ಸಾರ್ವಜನಿಕ ವಿತರಣಾ ಪದ್ಧತಿಯಡಿ ಪ್ರತಿ ಅಂತ್ಯೋದಯ ಪಡಿತರ ಚೀಟಿಗೆ 35 ಕೆ.ಜಿ. ಅಕ್ಕಿ, ಆದ್ಯತಾ ಕುಟುಂಬ ಪಡಿತರ ಚೀಟಿಯ ಪ್ರತಿ ಸದಸ್ಯರಿಗೆ 5 ಕೆ.ಜಿ. ಅಕ್ಕಿ ಮತ್ತು ಪ್ರತಿ ಆದ್ಯತಾ ಪಡಿತರ ಚೀಟಿಗೆ 2 ಕೆ.ಜಿ. ಗೋಧಿಯನ್ನು ಪ್ರತಿ ಮಾಹೆ ಉಚಿತವಾಗಿ ವಿತರಿಸಲಾಗುತ್ತಿದೆ. ಏಕ ಸದಸ್ಯ ಆದ್ಯತೇತರ ಪಡಿತರ ಚೀಟಿಗೆ 5 ಕೆ.ಜಿ. ಅಕ್ಕಿ ಮತ್ತು ಎರಡು ಮತ್ತು ಹೆಚ್ಚಿನ ಸದಸ್ಯರಿರುವ ಆದ್ಯತೇತರ ಪಡಿತರ ಚೀಟಿಗೆ 10 ಅಕ್ಕಿಯನ್ನು ಪ್ರತಿ ಕೆ.ಜಿ. ಗೆ ರೂ 15/-ರ ಸಬ್ಸಿಡಿ ದರದಲ್ಲಿ ಪ್ರತಿ ಮಾಹೆ ವಿತರಿಸಲಾಗುತ್ತಿದೆ.
ಆ	ಕಳೆದ ಮೂರು ವರ್ಷಗಳಲ್ಲಿ ಈ ಸಂಬಂಧ ಸರ್ಕಾರವು ಮಾಡಿರುವ ವೆಚ್ಚವೆಷ್ಟು (ವಿವರಗಳನ್ನು ನೀಡುವುದು);	ಕಳೆದ ಮೂರು ವರ್ಷಗಳಲ್ಲಿ ಅನ್ನಭಾಗ್ಯ ಯೋಜನೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಮಾಡಿರುವ ವೆಚ್ಚದ ವಿವರ ಈ ಕೆಳಕಂಡಂತಿದೆ.

ವರ್ಷ	ವೆಚ್ಚ ಮಾಡಿರುವ ವಿವರ (ರೂ. ಲಕ್ಷಗಳಲ್ಲಿ)
2017-18	254171.86
2018-19	357004.47
2019-20	369895.76
ಒಟ್ಟು	981072.09

ಕ್ರ. ಸಂ	ಪ್ರಶ್ನೆ	ಉತ್ತರ
ಇ	ಸದರಿ ಪದ್ಧತಿಯನ್ನು ಸರಳಗೊಳಿಸಿ ಕೇಂದ್ರ ಸರ್ಕಾರದ ಘೋಷಿತ ಬೆಂಬಲ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ರಾಜ್ಯದ ರೈತರಿಂದಲೇ ಖರೀದಿ ಮಾಡಲು ಸರ್ಕಾರದ ಆಲೋಚಿಸಿದೆಯೇ;	ಪ್ರತಿ ವರ್ಷ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಭತ್ತ, ರಾಗಿ ಮತ್ತು ಬಿಳಿ ಜೋಳವನ್ನು ಖರೀದಿಸುತ್ತಿದ್ದು, ಖರೀದಿಸಿದ ಸಂಪೂರ್ಣ ಭತ್ತದ ಪರಿವರ್ತಿತ ಅಕ್ಕಿ, ರಾಗಿ ಮತ್ತು ಬಿಳಿ ಜೋಳವನ್ನು ಸಾರ್ವಜನಿಕ ವಿತರಣಾ ಪದ್ಧತಿಯಡಿ ಪಡಿತರ ಫಲಾನುಭವಿಗಳಿಗೆ ವಿತರಿಸಲಾಗುತ್ತಿದೆ.

ಈ	ಹಾಗಿಲ್ಲದಿದ್ದಲ್ಲಿ, ಸ್ಥಳೀಯ ರೈತರಿಂದಲೇ ಖರೀದಿಸಿದ್ದಲ್ಲಿ, ರಾಜ್ಯದ ರೈತರಿಗೆ ಹಾಗೂ ರಾಜ್ಯ ಸರ್ಕಾರಕ್ಕೆ ಅನುಕೂಲ ಮತ್ತು ಆರ್ಥಿಕ ಉಳಿತಾಯ ಆಗುವುದಿಲ್ಲವೇ; ಹಾಗಿದ್ದಲ್ಲಿ, ಈ ದಿಸೆಯಲ್ಲಿ ಸರ್ಕಾರದ ಯಾವ ಕ್ರಮ ಕೈಗೊಳ್ಳಲಿದೆ?	2020-21ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಜ್ಯದ ರೈತರಿಂದ 12.1 ಲಕ್ಷ ಮೆ.ಟನ್ ಭತ್ತ, 4 ಲಕ್ಷ ಮೆ.ಟನ್ ರಾಗಿ ಮತ್ತು1 ಲಕ್ಷ ಮೆ.ಟನ್ ಬಿಳಿ ಜೋಳವನ್ನು ಖರೀದಿಸುವ ಗುರಿಯನ್ನು ನಿಗಧಿಪಡಿಸಲಾಗಿದೆ. ಸ್ಥಳೀಯ ರೈತರಿಂದ ಖರೀದಿಸಲಾದ ಭತ್ತದ ಪರಿವರ್ತಿತ ಅಕ್ಕಿ, ರಾಗಿ ಮತ್ತು ಜೋಳವನ್ನು ಸಾರ್ವಜನಿಕ ವಿತರಣಾ ಪದ್ಧತಿಯಡಿ ಪಡಿತರ ಫಲಾನುಭವಿಗಳಿಗೆ ವಿತರಿಸಲಾಗುತ್ತಿದೆ.

ಆನಾಸ 115 ಡಿಆರ್‌ಎ 2021 (ಇ-ಆಫೀಸ್)

(ಉಮೇಶ ವಿ. ಕತ್ತಿ)

ಆಹಾರ, ನಾಗರಿಕ ಸರಬರಾಜು ಮತ್ತು

ಗ್ರಾಹಕರ ವ್ಯವಹಾರಗಳ ಹಾಗೂ

ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :	2095
ಸದಸ್ಯರ ಹೆಸರು :	ಶ್ರೀ ಪುಟ್ಟರಂಗಶೆಟ್ಟಿ ಸಿ. (ಚಾಮರಾಜನಗರ)
ಉತ್ತರಿಸಬೇಕಾದ ದಿನಾಂಕ :	19-03-2021.
ಉತ್ತರಿಸುವವರು :	ಪೌರಾಡಳಿತ ಮತ್ತು ಸಕ್ಕರೆ ಸಚಿವರು.

ಕ್ರಸ	ಪ್ರಶ್ನೆ	ಉತ್ತರ
ಅ)	ಚಾಮರಾಜನಗರದ ನಗರಸಭೆ ವ್ಯಾಪ್ತಿಯಲ್ಲಿ ಬರುವ ಪಾರ್ಕ್‌ಗಳ ಸಂಖ್ಯೆ ಎಷ್ಟು; (ವಾರ್ಡ್‌ವಾರು ಸಂಪೂರ್ಣ ವಿವರ ನೀಡುವುದು)	ಚಾಮರಾಜನಗರ ನಗರಸಭೆ ವ್ಯಾಪ್ತಿಯಲ್ಲಿ 22 ಪಾರ್ಕ್‌ಗಳಿರುತ್ತವೆ. ವಾರ್ಡುವಾರು ವಿವರಗಳನ್ನು ಅನುಬಂಧದಲ್ಲಿ ಸಲ್ಲಿಸಿದೆ.
ಆ)	ನಗರಸಭೆಯ ವ್ಯಾಪ್ತಿಯಲ್ಲಿ ಬರುವ ವಾರ್ಡ್ (ಉದ್ಯಾನವನ)ಗಳನ್ನು ನಗರಸಭೆಯು ನಿರ್ವಹಣೆ ಮಾಡುತ್ತಿದೆಯೇ: ಮಾಡದಿದ್ದಲ್ಲಿ, ಕಾರಣವೇನು;	ಚಾಮರಾಜನಗರ ನಗರಸಭೆಯ ವ್ಯಾಪ್ತಿಯಲ್ಲಿ ಬರುವ ವಾರ್ಡ ನಂ.30 ರಲ್ಲಿನ ಒಂದು ಪಾರ್ಕ್ ಹೊರತುಪಡಿಸಿ ಉಳಿದ 21 ಪಾರ್ಕ್‌ಗಳನ್ನು ನಗರಸಭೆ ವತಿಯಿಂದಲೇ ನಿರ್ವಹಣೆ ಮಾಡಲಾಗುತ್ತಿದೆ.
ಇ)	ನಗರಸಭೆಯ 30ನೇ ವಾರ್ಡ್‌ನಲ್ಲಿರುವ ಪಾರ್ಕ್ ಒಟ್ಟು ವಿಸ್ತೀರ್ಣವೆಷ್ಟು; ಅದನ್ನು ನಿರ್ವಹಿಸಲಾಗುತ್ತಿದೆಯೇ;	ಚಾಮರಾಜನಗರದ ನಗರಸಭೆಯ ವಾರ್ಡ ನಂ.30 ರಲ್ಲಿ 01 ಪಾರ್ಕ್ ಇದ್ದು, ಸದರಿ ಪಾರ್ಕ್ ವಿಸ್ತೀರ್ಣ ಈ ಕೆಳಕಂಡಂತೆ ಇದೆ. ಪೂ.ಪ = (34 +60) ಅಡಿ / 2 = 47 ಅಡಿ ಉ. ದ = (70 + 56) ಅಡಿ / 2 = 63 ಅಡಿ ಒಟ್ಟು 47 x 63 ಅಡಿ = 2961 ಚ.ಅಡಿಗಳು ಸದರಿ ಪಾರ್ಕ್‌ನ್ನು ನಗರಸಭೆಯಿಂದ ನಿರ್ವಹಿಸಲಾಗುತ್ತಿರುವುದಿಲ್ಲ.
ಈ)	ನಗರಸಭೆಗೆ ಸೇರಿದ 30ನೇ ವಾರ್ಡ್‌ನಲ್ಲಿರುವ ಉದ್ಯಾನವನಕ್ಕೆ ಮೀಸಲಾದ ಜಾಗವನ್ನು ಒತ್ತುವರಿ ಮಾಡಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ. ಜಿಲ್ಲಾಧಿಕಾರಿಗಳು ಚಾಮರಾಜನಗರ ರವರು ದಿನಾಂಕ: 22.01.2020 ರಂದು ಒತ್ತುವರಿಯನ್ನು ತೆರವುಗೊಳಿಸಲು ಪೌರಾಯುಕ್ತರು ನಗರಸಭೆ, ಚಾಮರಾಜನಗರ ರವರಿಗೆ ನಿರ್ದೇಶನ ನೀಡಿರುತ್ತಾರೆ.
ಉ)	ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದಿಂದ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ?	ಪೌರಾಯುಕ್ತರು, ನಗರಸಭೆ, ಚಾಮರಾಜನಗರ ರವರು ಒತ್ತುವರಿ ಮಾಡಿ ಕೊಂಡಿರುವವರಿಗೆ ನೋಟೀಸ್‌ನ್ನು ಜಾರಿ ಮಾಡಿ ತೆರವುಗೊಳಿಸಲು ಕ್ರಮವಹಿಸಿದ್ದು, ಈ ಬಗ್ಗೆ ನ್ಯಾಯಾಲಯದ ಅಸಲು ದಾವೆ ಸಂಖ್ಯೆ: 32/97 ಮತ್ತು ಹೆಚ್ಚುವರಿ ಸಿವಿಲ್ ನ್ಯಾಯಾಲಯದ ಆರ್.ಎ ನಂಬರ್:103/2006 ರಲ್ಲಿ ಪ್ರಕರಣ ದಾಖಲಾಗಿ, ವಿಚಾರಣೆ ಹಂತದಲ್ಲಿದ್ದು, ಪ್ರಕರಣ ಇತ್ಯರ್ಥಗೊಂಡ ನಂತರ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು.

ಸಂಖ್ಯೆ: ನಅಇ 64 ಜಿಇಎಲ್ 2021(ಇ)

(ಎನ್.ನಾಗರಾಜ್ ಎಂಟಿಬಿ)
ಪೌರಾಡಳಿತ ಮತ್ತು ಸಕ್ಕರೆ ಸಚಿವರು

ಅನುಬಂಧ- 1

ಚಾಮರಾಜನಗರ ನಗರಸಭಾ ವ್ಯಾಪ್ತಿಯಲ್ಲಿ ಬರುವ ಪಾರ್ಕ್‌ಗಳ ಪಟ್ಟಿ

ಕ್ರ. ಸಂ.	ವಾರ್ಡ್ ಸಂಖ್ಯೆ	ಪಾರ್ಕ್ ಹೆಸರು	ಅಗಲ	ಉದ್ದ	ಒಟ್ಟು ವಿಸ್ತೀರ್ಣ
1.	12	ಚಾಮರಾಜೇಶ್ವರ ದೇವಸ್ಥಾನದ ಪಾರ್ಕ್	60.97	87.19	5345.97
2.	17	ಪುಟ್ಟಮಣಿ ಪಾರ್ಕ್	150	400	4967.02
3.	08	ದೊಡ್ಡ ಅರಸನ ಕೊಳದ ಪಾರ್ಕ್	262	243	5916.76
4.	26	ಹೌಸಿಂಗ್ ಬೋರ್ಡ್ ಪಾರ್ಕ್	130+305/2 X 385+300/2	217.5 X 342.5	6923.21
5.	17	ಸುಧಾಮ ನಗರ	4.248		1278.43
6.	09	BGM Layout	2842.00		91.86
7.	26	ಸ.ನಂ. 608	672.3		1383.43
8.	25	ಪ್ರಶಾಂತ ಬಡಾವಣೆ	1530.00		6842.755
9.	01	ಸ.ನಂ 7ರ ಜಮೀನು	691.83		4262.91
10.	10	ಸ.ನಂ 407/5	1453.25		1453.25
11.	26	ರಾಮಸಮುದ್ರ ಸರ್ವೆ ನಂ.396/2 * 397/1	1501.34		566.68
12.	26	ಸರ್ವೆ ನಂ.607 (ಗುರುಸ್ವಾಮಿ ಎಸ್.ಎಂ) ಉದ್ಯಾನವನ	753.30		425.02
13.	25	ಸರ್ವೆ ನಂ.636/1ಬಿ ಬಿಳಿಗಿರಿರಂಗನಾಯ್ಕ ಉದ್ಯಾನವನ	367.68		807.18
14.	23	ಸರ್ವೆ ನಂ. 352/1 ಆನಂದರಾಮಶೆಟ್ಟಿ ಆಟದಮೈದಾನ	645.94		2380.08
15.	09	ಸರ್ವೆ ನಂ.424 ಸಿ.ಪಿ.ಗೋಪಾಲ್ & ಸಿ.ಪಿ.ವೆಂಕಟೇಶ್ ಉದ್ಯಾನವನ	729.22		744.58
16.	25	ಪ್ರಗತಿ ನಗರ	0.127 ಹೆಕ್ಟೇರ್=1.270		2422.59
17.	26	ಕಾನ್ವೆಂಟ್ ಬಡಾವಣೆ ಉಧ್ಯಾನವನ	787.31		352.41
18.	14	ಮುಭಾಕರ್ ಮೊಹಲ್ಲಾ ಉದ್ಯಾನವನ	931.00		1416.72
19.	10	ಕರಿನಂಜಪುರ, ಸರ್ವೆ ನಂ. 441, ಎಂ. ಮಹೇಶ್ ರವರ ಬಾಬ್ತು, ಉದ್ಯಾನವನ	2842 ಚ.ಮೀ.		4590.17

20.	27	ರಾಮಸಮುದ್ರ, ಸರ್ವೆ ನಂ. 396/2 * 397/1, 593/3, 594 (ಗುಪ್ತ)	16.5+15+35 * / 3 62+73.5 / 2 18 1/2 * 66 ಮೀ		2047.87
21.	01	ಆಶ್ರಯ ಲೇಔಟ್ ಉದ್ಯಾನವನ	-		2539.75
22.	30	30ನೇ ವಾರ್ಡಿನಲ್ಲಿರುವ ಉದ್ಯಾನವ	ಪೂ.ಪ=(34 ಅಡಿ +60 ಅಡಿ)/2=47 ಅಡಿ ಉ. ದ= (70 ಅಡಿ +56ಅಡಿ)/2=63 ಅಡಿ 47 ಅಡಿ *63 ಅಡಿ		2961 ಚ.ಅಡಿಗಳು

<u>ನಗರಸಭಾ ಆಸ್ತಿ</u>

1. ಮೂಡ್ಲುಪುರ ಕೊಳ – 100 X 100
2. ಸೋಮವಾರಪೇಟೆ ಕೊಳ – 100 X 100

ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ,
ಚಾಮರಾಜನಗರ.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**2303**
ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ ರವೀಂದ್ರ ಶ್ರೀಕಂಠಯ್ಯ (ಶ್ರೀರಂಗಪಟ್ಟಣ)
ಉತ್ತರಿಸಬೇಕಾದ ದಿನಾಂಕ	:	19.03.2021
ಉತ್ತರಿಸುವ ಸಚಿವರು	:	ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ಮಂಡ್ಯ ಜಿಲ್ಲೆಯಲ್ಲಿ ಭತ್ತ ಖರೀದಿಸಿದ ನಂತರ ರೈತರಿಗೆ ಸರ್ಕಾರದ ಹಣ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಆ	ಹಾಗಿದ್ದಲ್ಲಿ, ಸಕಾಲಕ್ಕೆ ಹಣ ಪಾವತಿಯಾಗದೇ ರೈತರಿಗೆ ತೊಂದರೆಯಾಗಿದ್ದರೂ ಇನ್ನೂ ಸರ್ಕಾರದ ಹಣ ಬಿಡುಗಡೆ ಮಾಡದಿರಲು ಕಾರಣವೇನು;	2020-21ನೇ ಸಾಲಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಭತ್ತ ಖರೀದಿಸಿ ರೈತರಿಗೆ ಖರೀದಿ ಬಾಬ್ತು ಹಣವನ್ನು ಪಾವತಿಸಲು ಕ್ರಮವಹಿಸಲಾಗಿದೆ.
ಇ	ಭತ್ತ ಖರೀದಿಗೆ ಹಣ ಪಾವತಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;	ಕನಿಷ್ಠ ಬೆಂಬಲ ಯೋಜನೆಯಡಿ 2020-21ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ರೈತರಿಂದ ಭತ್ತವನ್ನು ಖರೀದಿಸಲಾಗಿದ್ದು, ಇದುವರೆಗೆ ಭತ್ತವನ್ನು ನೀಡಿದ **16074** ರೈತರಿಗೆ ರೂ **94,54,46,551/-** ಗಳನ್ನು ಪಾವತಿಸಲಾಗಿದೆ. ಬಾಕಿ ಉಳಿದ ರೈತರಿಗೆ ಭತ್ತದ ಬಾಬ್ತನ್ನು ಪಾವತಿಸಲು ಕ್ರಮವಹಿಸಲಾಗುತ್ತಿದೆ.
ಈ	ಮಂಡ್ಯ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಭತ್ತ ಖರೀದಿಸಿದ ವಿವರ ಹಾಗೂ ಬಾಕಿ ವಿವರಗಳನ್ನು ತಾಲ್ಲೂಕುವಾರು ನೀಡುವುದು?	ಕನಿಷ್ಠ ಬೆಂಬಲ ಯೋಜನೆಯಡಿ ಕಳೆದ 3 ವರ್ಷಗಳಲ್ಲಿ ರೈತರಿಂದ ಖರೀದಿಸಲಾದ ಭತ್ತದ ವಿವರ ಹಾಗೂ ಪಾವತಿಸಿದ ಮೊತ್ತದ ಮಾಹಿತಿ ಈ ಕೆಳಕಂಡಂತಿದೆ.

2018-19

ಕ್ರ ಸಂ	ತಾಲ್ಲೂಕು	ಭತ್ತ ಖರೀದಿಸಿದ ರೈತರ ಸಂಖ್ಯೆ	ಭತ್ತ ಸ್ವೀಕೃತಿಯಾದ ಪ್ರಮಾಣ (ಕ್ವಿಂಟಾಲ್ ಗಳಲ್ಲಿ)
1	ಕೆ.ಆರ್.ಪೇಟೆ	430	12301.32
2	ಮದ್ದೂರು	1996	62171.93

3	ಮಳವಳ್ಳಿ	943	32150.56
4	ಮಂಡ್ಯ	5663	210608.97
5	ನಾಗಮಂಗಲ	42	1410.35
6	ಪಾಂಡವಪುರ	728	24493.21
7	ಶ್ರೀರಂಗಪಟ್ಟಣ	5046	178196.52
ಒಟ್ಟು		14848	521332.86

ಒಟ್ಟು ರೂ 91,23,60,515ಗಳನ್ನು ಪಾವತಿಸಲಾಗಿರುತ್ತದೆ.

2019-20

ಕ್ರ ಸಂ	ತಾಲ್ಲೂಕು	ಭತ್ತ ಖರೀದಿಸಿದ ರೈತರ ಸಂಖ್ಯೆ	ಭತ್ತ ಸ್ವೀಕೃತಿಯಾದ ಪ್ರಮಾಣ (ಕ್ವಿಂಟಾಲ್ ಗಳಲ್ಲಿ)
1	ಕೆ.ಆರ್.ಪೇಟೆ	948	20109.76
2	ಮದ್ದೂರು	2238	40278.68
3	ಮಳವಳ್ಳಿ	1256	25106.77
4	ಮಂಡ್ಯ	3938	72471.29
5	ನಾಗಮಂಗಲ	41	783.42
6	ಪಾಂಡವಪುರ	1222	25825.99
7	ಶ್ರೀರಂಗಪಟ್ಟಣ	3785	82196.86
ಒಟ್ಟು		13428	266772.77

ಸದರಿ ಸಾಲಿನಲ್ಲಿ 13,424 ರೈತರಿಗೆ ರೂ.48,56,73,028/-ಗಳನ್ನು ಪಾವತಿಸಲಾಗಿದೆ. ತಾಂತ್ರಿಕ ದೋಷದಿಂದ 4 ಜನ ರೈತರಿಗೆ ರೂ. 1,20,186/-ಗಳನ್ನು ಪಾವತಿಸಲು ಬಾಕಿಯಿದ್ದು ಸದರಿ ಭತ್ತವನ್ನು ಪಾವತಿಸಲು ಕ್ರಮವಹಿಸಲಾಗಿದೆ.

2020-21

ಕ್ರ ಸಂ	ತಾಲ್ಲೂಕು	ಭತ್ತ ಖರೀದಿಸಿದ ರೈತರ ಸಂಖ್ಯೆ	ಭತ್ತ ಸ್ವೀಕೃತಿಯಾದ ಪ್ರಮಾಣ (ಕ್ವಿಂಟಾಲ್ ಗಳಲ್ಲಿ)
1	ಕೆ.ಆರ್.ಪೇಟೆ	1398	46657.6
2	ಮದ್ದೂರು	2995	215068.32
3	ಮಳವಳ್ಳಿ	2298	72242.33
4	ಮಂಡ್ಯ	9215	80172.64
5	ನಾಗಮಂಗಲ	205	68179.9
6	ಪಾಂಡವಪುರ	2005	273838.69
7	ಶ್ರೀರಂಗಪಟ್ಟಣ	6271	5237.29
	ಒಟ್ಟು	**24387**	**761396.79**

ಇದುವರೆಗೆ ಭತ್ತವನ್ನು ಮಾರಾಟ ಮಾಡಿದ 16,073 ರೈತರಿಗೆ ರೂ. 94,54,46,551 ಗಳನ್ನು ಪಾವತಿಸಿದ್ದು ಇನ್ನುಳಿದ 8314 ರೈತರಿಗೆ ರೂ.48,14,11,037/-ಗಳನ್ನುಪಾವತಿಸಲು ಕ್ರಮವಹಿಸಲಾಗುತ್ತಿದೆ.

ಆನಾಸ 37 ಆರ್‌ಪಿಆರ್ 2021 (ಇ-ಆಫೀಸ್)

(ಉಮೇಶ ವಿ. ಕತ್ತಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

<u>ಕರ್ನಾಟಕ ವಿಧಾನ ಸಭೆ</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2320
ಸದಸ್ಯರ ಹೆಸರು	ಶ್ರೀ ಸುರೇಶ್ ಗೌಡ
ಉತ್ತರಿಸಬೇಕಾದ ದಿನಾಂಕ	19.03.2021
ಉತ್ತರಿಸುವ ಸಚಿವರು	ಗಣಿ ಮತ್ತು ಭೂವಿಜ್ಞಾನ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ನಾಗಮಂಗಲ ವಿಧಾನಸಭಾ ವ್ಯಾಪ್ತಿಯಲ್ಲಿ ಸಂಪೂರ್ಣ ಪರವಾನಗಿ ಪಡೆಯದೆ ಕಲ್ಲುಗಣಿಗಾರಿಕೆ ಹಾಗೂ ಕ್ರಷರ್ ನಡೆಸುತ್ತಿರುವವರ ಸಂಖ್ಯೆ ಎಷ್ಟು (ಸಂಪೂರ್ಣ ವಿವರ ನೀಡುವುದು)	ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪರವಾನಗಿ ಪಡೆಯದೇ 02 ಕಲ್ಲುಗಣಿ ಪ್ರದೇಶಗಳಲ್ಲಿ ಗಣಿ ಕಾರ್ಯ ನಡೆಸುತ್ತಿರುವ ಮತ್ತು 03 ಕ್ರಷರ್ ಘಟಕಗಳು ಕಾರ್ಯಾಚರಣೆ ನಡೆಸುತ್ತಿರುವ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. **ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.**
ಆ)	ಪೂರ್ಣ ಪರವಾನಗಿ ಪಡೆಯಲು ಎಷ್ಟು ಹಂತಗಳಿವೆ;	ದಿನಾಂಕ 12.08.2016 ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ಜಾರಿಗೆ ಬಂದಿದ್ದು, ಸದರಿ ನಿಯಮಗಳಂತೆ ಸರ್ಕಾರಿ ಜಮೀನುಗಳಲ್ಲಿ ಲಭ್ಯವಿರುವ ಉಪಖನಿಜ ನಿಕ್ಷೇಪಗಳನ್ನು ಹರಾಜು ಮೂಲಕ ಮಂಜೂರು ಮಾಡಬೇಕಾಗಿರುತ್ತದೆ. ಪಟ್ಟಾ ಜಮೀನುಗಳಲ್ಲಿ ಲಭ್ಯವಿರುವ ಖನಿಜವನ್ನು ತೆಗೆಯಲು ಪಟ್ಟಾದಾರರಿಗೆ ಅಥವಾ ಪಟ್ಟಾದಾರರು ಒಪ್ಪಿಗೆ ನೀಡುವ ವ್ಯಕ್ತಿಗಳಿಗೆ ಕಂದಾಯ ಮತ್ತು ಅರಣ್ಯ ಇಲಾಖೆಯ ನಿರಾಕ್ಷೇಪಣಾ ಪತ್ರಗಳು, ಭೂಪರಿವರ್ತನೆ ಆದೇಶ ಮತ್ತು ಪರಿಸರ ಅನುಮತಿ ಪತ್ರ ಪಡೆದು ಕಲ್ಲುಗಣಿಗಾರಿಕೆಗೆ ಲೈಸೆನ್ಸ್ ನೀಡಲಾಗುತ್ತಿದೆ. ಸ್ಟೋನ್ ಕ್ರಷರ್ ಘಟಕ ಸ್ಥಾಪಿಸಲು ಕರ್ನಾಟಕ ಕಲ್ಲುಪುಡಿ ಘಟಕಗಳ ನಿಯಂತ್ರಣ ಅಧಿನಿಯಮ, 2011 ಮತ್ತು ಕರ್ನಾಟಕ ಕಲ್ಲುಪುಡಿ ಘಟಕಗಳ ನಿಯಂತ್ರಣ ನಿಯಮಗಳು, 2012 ರಂತೆ ಅನುಮತಿ ನೀಡಲಾಗುವುದು. ಕ್ರಷರ್ ಘಟಕಕ್ಕೆ Vertical Impact Shafter (VSI) ಅಳವಡಿಸಿಕೊಂಡಲ್ಲಿ ಎಂ-ಸ್ಯಾಂಡ್ ಉತ್ಪಾದನೆ ಮಾಡಬಹುದಾಗಿದೆ.

-2

		ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011 ಹಾಗೂ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ನಿಯಮಗಳು, 2012 ರಂತೆ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರಕ್ಕೆ ಕ್ರಷರ್ ಘಟಕಗಳನ್ನು ಸ್ಥಾಪಿಸಲು ಪರವಾನಗಿ ನೀಡುವ ಅಧಿಕಾರ ಪ್ರತ್ಯಾಯೋಜಿಸಲಾಗಿದೆ. ಅದರಂತೆ ಕಲಂ 6(3) ರಂತೆ ಕಂದಾಯ, ಅರಣ್ಯ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು ಕ್ರಷರ್ ಪರವಾನಗಿ ಕೋರಿ ಸಲ್ಲಿಸಿರುವ ಅರ್ಜಿತ ಪ್ರದೇಶವನ್ನು ಜಂಟಿ ಸ್ಥಳ ಪರಿಶೀಲನೆ ನಡೆಸಿ ಕಲಂ 6 ಮತ್ತು 6-A ರಲ್ಲಿನ ಎಲ್ಲಾ ಷರತ್ತುಗಳು ಪಾಲನೆಯಾದಲ್ಲಿ ವರದಿ ನೀಡಿದ ನಂತರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರದಿಂದ ಅರ್ಜಿತ ಪ್ರದೇಶವನ್ನು ಕ್ರಷರ್ ಸುರಕ್ಷಿತ ವಲಯವೆಂದು ಘೋಷಿಸಿ ಅಧಿಸೂಚನೆ ಹೊರಡಿಸಿ, ಫಾರಂ-ಬಿ1 ರಲ್ಲಿ ಅನುಪಾಲನಾ ಪ್ರಮಾಣ ಪತ್ರ ನೀಡಲಾಗುವುದು. ಅರ್ಜಿದಾರರು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ Consent for Establishment (CFE) ಹಾಗೂ Consent for Operation (CFO) ಪಡೆದು ಹಾಜರುಪಡಿಸಿದ ನಂತರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರದಿಂದ ಫಾರಂ-ಸಿ (ಕ್ರಷರ್ ಲೈಸೆನ್ಸ್) ರಲ್ಲಿ ಕ್ರಷರ್ ಪರವಾನಗಿ ನೀಡಲಾಗುವುದು.
ಇ)	ಪರವಾನಗಿ ಪಡೆಯಲು ಕಲ್ಲುಗಣಿಗಾರಿಕೆ ನಡೆಸಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡುತ್ತಿರುವವರ ವಿರುದ್ಧ ಸರ್ಕಾರ ಯಾವ ಕ್ರಮ ಜರುಗಿಸಿದೆ;	ಪರವಾನಗಿ ಪಡೆಯದೇ ಕಲ್ಲುಗಣಿಗಾರಿಕೆ ಮತ್ತು ಸ್ಟೋನ್ ಕ್ರಷರ್ ಘಟಕ ನಡೆಸಿರುವವರಿಗೆ ಖನಿಜ ಪ್ರಮಾಣಕ್ಕೆ ವಿಧಿಸಬಹುದಾದ ರಾಜಧನದ 05 ಪಟ್ಟು ದಂಡವನ್ನು ವಿಧಿಸಿ ನೋಟಿಸ್ ಜಾರಿ ಮಾಡಲಾಗಿರುತ್ತದೆ. ಅನಧಿಕೃತ ಗಣಿಗಾರಿಕೆ ನಡೆಸಿದವರು ದಂಡವನ್ನು ಪಾವತಿಸದಿದ್ದಲ್ಲಿ ಭೂಕಂದಾಯ ರೀತ್ಯಾ ವಸೂಲಾತಿಗೆ ಕ್ರಮ ಜರುಗಿಸಲಾಗುತ್ತದೆ.
ಈ)	ಸೀಜ್ ಮಾಡಿರುವ ಕ್ರಷರ್ ಗಳನ್ನು ಯಾರ ಅನುಮತಿ ಪಡೆಯದೇ ತಾವೇ ತೆಗೆದು ಪುನ: ಕ್ರಷರ್ ಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುತ್ತದೆ.

--3

ಉ)	ಬಂದಿದ್ದಲ್ಲಿ, ಅಂತಹವರ ವಿರುದ್ಧ ಸರ್ಕಾರ ಇಲ್ಲಿಯವರೆವಿಗೂ ಯಾವುದೇ ಕ್ರಮ ಜರುಗಿಸದಿರಲು ಕಾರಣಗಳೇನು? (ವಿವರ ನೀಡುವುದು)	ಜಪ್ತಿ ಮಾಡಿರುವ ಕ್ರಷರ್ ಗಳನ್ನು ಯಾರ ಅನುಮತಿ ಪಡೆಯದೇ ತಾವೇ ತೆಗೆದು ಪುನ: ಕ್ರಷರ್‌ಗಳನ್ನು ನಡೆಸುತ್ತಿರುವ ಪ್ರಕರಣಗಳನ್ನು ಪತ್ತೆಹಚ್ಚಿದ್ದು, ಈ ಕೆಳಕಂಡಂತೆ ಕ್ರಮವಹಿಸಲಾಗಿದೆ. ➤ ಮೆ॥ ಮಾರುತಿ ಸ್ಟೋನ್ ಕ್ರಷರ್, ಮಾಲೀಕರು ಶ್ರೀ ಕೆ.ಎಂ. ರವಿ ಬಿನ್ ಮರಿಯಪ್ಪ, ನಾಗಮಂಗಲ ತಾಲ್ಲೂಕು ರವರು ಗೊಲ್ಲರಹಳ್ಳಿ ಗ್ರಾಮದ ಸರ್ವೆ. ನಂ.34 ರಲ್ಲಿ ಅನಧಿಕೃತ ಕ್ರಷರ್ ಘಟಕ ಚಾಲನೆ ಹಾಗೂ 448 ಮೆಟ್ರಿಕ್ ಟನ್ ಮತ್ತು 225 ಮೆಟ್ರಿಕ್ ಟನ್ ಕಟ್ಟಡಕಲ್ಲು ದಾಸ್ತಾನಿಗೆ ಒಟ್ಟು ರೂ.7,14,750/- ಗಳ ದಂಡ ವಿಧಿಸಿ ನೋಟಿಸ್ ಜಾರಿ ಮಾಡಲಾಗಿರುತ್ತದೆ. ➤ ಮೆ॥ ಸ್ವಾಮಿ ಅಯ್ಯಪ್ಪ ಸ್ಟೋನ್ ಕ್ರಷರ್, ಮಾಲೀಕರು ಶ್ರೀಮತಿ ಸರೋಜಮ್ಮ, ನಾಗಮಂಗಲ ತಾಲ್ಲೂಕು ರವರು ಗೊಲ್ಲರಹಳ್ಳಿ ಗ್ರಾಮದ ಸರ್ವೆ. ನಂ.14/1 ರಲ್ಲಿ ಅನಧಿಕೃತ ಕ್ರಷರ್ ಘಟಕ ಚಾಲನೆ ಹಾಗೂ ಕ್ರಷರ್ ಘಟಕದಲ್ಲಿ 14,600 ಮೆಟ್ರಿಕ್ ಟನ್ ಕಟ್ಟಡ ಕಲ್ಲು ಪುಡಿಮಾಡಿ ದಾಸ್ತಾನು ಮಾಡಿರುವುದಕ್ಕೆ ಹಾಗೂ ಸದರಿ ದಾಸ್ತಾನನ್ನು ಸಾಗಾಣಿಕೆ ಮಾಡದಂತೆ ನೋಟಿಸ್ ಜಾರಿ ಮಾಡಲಾಗಿರುತ್ತದೆ. ➤ ಮೆ॥ ಬಸವೇಶ್ವರ ಸ್ಟೋನ್ ಕ್ರಷರ್, ಮಾಲೀಕರು ಶ್ರೀ ರವಿಕುಮಾರ್ ಬಿನ್ ಗಂಗಾಧರಗೌಡ, ನಾಗಮಂಗಲ ತಾಲ್ಲೂಕು ರವರು ವಡೇರಪುರ ಗ್ರಾಮದ ಸರ್ವೆ. ನಂ. 11/ಬಿಎಲ್2ಪಿ8 ರಲ್ಲಿ ಅನಧಿಕೃತ ಕ್ರಷರ್ ಘಟಕ ಚಾಲನೆ ಹಾಗೂ ಕ್ರಷರ್ ಘಟಕದಲ್ಲಿ 1160 ಮೆಟ್ರಿಕ್ ಟನ್ ಕಟ್ಟಡ ಕಲ್ಲು ಪುಡಿ ಮಾಡಿ ದಾಸ್ತನು ಮಾಡಿರುವುದಕ್ಕೆ ರೂ. 6,06,000/- ದಂಡ ವಿಧಿಸುವುದಕ್ಕೆ ನೋಟಿಸ್ ಜಾರಿ ಮಾಡಲಾಗಿರುತ್ತದೆ. ಸದರಿಯವರು ಒಟ್ಟು ದಂಡದ ಮೊತ್ತದಲ್ಲಿ ರೂ. 2,00,000/- ದಂಡವನ್ನು ಪಾವತಿಸಿರುತ್ತಾರೆ.

ಸಂಖ್ಯೆ ಸಿಐ 188 ಎಂಎಂಎನ್ 2021

(ಮುರುಗೇಶ್ ಆರ್. ನಿರಾಣಿ)
ಗಣಿ ಮತ್ತು ಭೂವಿಜ್ಞಾನ ಸಚಿವರು.

ಅನುಬಂಧ

ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪರವಾನಿಗೆ ಪಡೆಯದೇ ಇರುವ ಕಲ್ಲುಗಣಿಗಾರಿಕೆ ಗುತ್ತಿಗೆಗಳು

ಕ್ರ. ಸಂ	ಕಲ್ಲುಗಣಿ ಗುತ್ತಿಗೆದಾರರ ಹೆಸರು	ಕಲ್ಲುಗಣಿ ಗುತ್ತಿಗೆ ಸಂಖ್ಯೆ	ತಾಲ್ಲೂಕು	ಗ್ರಾಮ	ಸರ್ವೆ. ನಂ	ವಿಸ್ತೀರ್ಣ	ಷರಾ
01	ಶ್ರೀ ಪಿ.ಕೆ. ದೇವರಾಜು ಬಿನ್ ಪಾಳೇಗೌಡ	627	ನಾಗಮಂಗಲ	ಪಿ. ಶ್ಯಾನಭೋಗನಹಳ್ಳಿ	18	5.00 ಎಕರೆ	ಅನಧಿಕೃತವಾಗಿ ಕಲ್ಲುಗಣಿಗಾರಿಕೆ ಪ್ರದೇಶದಲ್ಲಿ ಅನಧಿಕೃತವಾಗಿ ದಾಸ್ತನಿಸಿದ್ದ 5000 ಮೆ.ಟನ್ ಗ ಕಟ್ಟಡಕಲ್ಲಿಗೆ ರೂ. 17,50,000/- ದಂಡ ವಿಧಿಸಲಾಗಿರುತ್ತದೆ
02	ಶ್ರೀಮತಿ ಸರೋಜಮ್ಮ ಕೋಂ ಚಿನ್ನೇಗೌಡ	676	ನಾಗಮಂಗಲ	ಗೊಲ್ಲರಹಳ್ಳಿ	12	1.24 ಎಕರೆ	2019-20 ನೇ ಸಾಲಿನ ಲೆಕ್ಕ ತಪಸಾಣೆಯಲ್ಲಿ ಪರವಾಮಿಗೆ ಪಡೆಯದೇ ಸಾಗಾಣಿಕೆ ಮಾಡಿದ 20,424 ಮೆ. ಟನ್ ಕಟ್ಟಡಕಲ್ಲಿಗೆ ಹಾಗೂ ಗುತ್ತಿಗೆಯ ಹೊರಭಾಗದಲ್ಲಿ 85,000 ಮೆ.ಟನ್ ಅನಧಿಕೃತ ಕಟ್ಟಡಕಲ್ಲು ಗಣಿಗಾರಿಕೆ ನಡೆಸಿದ್ದಕ್ಕೆ ರೂ. 3,16,27,200/- ಪಾವತಿಸಲು ನೋಟಿಸ್ ಜಾರಿಮಾಡಲಾಗಿದೆ,

ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪರವಾನಿಗೆ ಪಡೆಯದೇ ಇರುವ ಕ್ರಷರ್ ಘಟಕಗಳ ವಿವರ

ಕ್ರ.ಸಂ	ಕ್ರಷರ್ ಘಟಕದ ಮಾಲೀಕರ ವಿವರ	ತಾಲ್ಲೂಕು	ಗ್ರಾಮ	ಸರ್ವೆ ನಂ	ಷರಾ
1	ಮೆ: ಮಾರುತಿ ಸ್ಟೋನ್ ಕ್ರಷರ್, ಮಾಲೀಕರು ಶ್ರೀ ಕೆ. ಎಂ. ರವಿ ಬಿನ್ ಮರಿಯಪ್ಪ,	ನಾಗಮಂಗಲ	ಗೊಲ್ಲರಹಳ್ಳಿ	34	ಅನಧಿಕೃತ ಕ್ರಷರ್ ಘಟಕ ಚಾಲನೆ ಹಾಗೂ 448 ಮೆ.ಟನ್ ಮತ್ತು 225 ಮೆ.ಟನ್ ಕಟ್ಟಡ ಕಲ್ಲು ದಾಸ್ತಾನಿಗೆ ಒಟ್ಟು ರೂ. 7,14,750/- ದಂಡ ವಿಧಿಸಿ ನೋಟಿಸ್ ಜಾರಿ ಮಾಡಲಾಗಿರುತ್ತದೆ
2	ಮೆ: ಸ್ವಾಮಿ ಅಯ್ಯಪ್ಪ ಸ್ಟೋನ್ ಕ್ರಷರ್, ಮಾಲೀಕರು ಶ್ರೀಮತಿ ಸರೋಜಮ್ಮ,	ನಾಗಮಂಗಲ	ಗೊಲ್ಲರಹಳ್ಳಿ	14/1	ಅನಧಿಕೃತ ಕ್ರಷರ್ ಘಟಕ ಚಾಲನೆ ಹಾಗೂ ಕ್ರಷರ್ ಘಟಕದಲ್ಲಿ 14,600 ಮೆ.ಟನ್ ಕಟ್ಟಡ ಕಲ್ಲು ಪುಡಿಮಾಡಿ ದಾಸ್ತಾನು ಮಾಡಿರುವುದಕ್ಕೆ ಹಾಗೂ ಸದರಿ ದಾಸ್ತಾನನ್ನು ಸಾಗಾಣಿಕೆ ಮಾಡದಂತೆ ನೋಟಿಸ್ ಜಾರಿ ಮಾಡಲಾಗಿರುತ್ತದೆ
3	ಮೆ: ಬಸವೇಶ್ವರ ಸ್ಟೋನ್ ಕ್ರಷರ್, ಮಾಲೀಕರು ರವಿಕುಮಾರ್ ಬಿನ್ ಗಂಗಾಧರ್ ಗೌಡ	ನಾಗಮಂಗಲ	ವಡೇರಪುರ	11/ಬಿ ಎಲ್2ಪಿ8	ಅನಧಿಕೃತ ಕ್ರಷರ್ ಘಟಕ ಚಾಲನೆ ಹಾಗೂ ಕ್ರಷರ್ ಘಟಕದಲ್ಲಿ 1160 ಮೆ.ಟನ್ ಕಟ್ಟಡ ಕಲ್ಲು ಪುಡಿಮಾಡಿ ದಾಸ್ತಾನು ಮಾಡಿರುವುದಕ್ಕೆ ರೂ. 6,06,000/- ದಂಡ ವಿಧಿಸುವುದಕ್ಕೆ ನೋಟಿಸ್ ಜಾರಿ ಮಾಡಲಾಗಿರುತ್ತದೆ. ಸದರಿಯವರು ಒಟ್ಟು ದಂಡದ ಮೊತ್ತದಲ್ಲಿ ರೂ. 2,00,000/- ದಂಡವನ್ನು ಪಾವತಿಸಿರುತ್ತಾರೆ

CI 188 MMN 2021

Deputy Director (Min. Admn)
Dept. of Mines & Geology
Bangalore-560001

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2736
2. ಮಾನ್ಯ ಸದಸ್ಯರ ಹೆಸರು : ಶ್ರೀ ಬೆಳ್ಳಿಪ್ರಕಾಶ್
3. ಉತ್ತರಿಸಬೇಕಾದ ದಿನಾಂಕ : 19.03.2021
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ	ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ಸೂಕ್ತ ಬೆಲೆ ದೊರೆಯದೇ ರೈತರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಯಾವ ಯಾವ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಯನ್ನು ಘೋಷಿಸಲಾಗಿದೆ ; (ವಿವರ ನೀಡುವುದು)	ಕೇಂದ್ರ ಸರ್ಕಾರವು ಮುಂಗಾರು ಹಾಗೂ ಹಿಂಗಾರು ಹಂಗಾಮಿಗೆ ಮುಂಚಿತವಾಗಿ ಬೆಂಬಲ ಬೆಲೆಯನ್ನು ಘೋಷಿಸುತ್ತದೆ. ರಾಜ್ಯದ ಪ್ರಮುಖ ಮಾರುಕಟ್ಟೆಗಳಲ್ಲಿ ಉತ್ಪನ್ನಗಳ ಧಾರಣೆ ಕುಸಿತಗೊಂಡ ಸಂದರ್ಭಗಳಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕಳೆದ 03 ವರ್ಷಗಳಲ್ಲಿ ಬೆಂಬಲ ಬೆಲೆಯನ್ನು ಘೋಷಿಸಲಾಗಿರುವ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.
ಆ	ಯಾವ ಮಾನದಂಡಗಳ ಆಧಾರದ ಮೇಲೆ ಕೃಷಿ ಉತ್ಪನ್ನಗಳ ಬೆಂಬಲ ಬೆಲೆಯನ್ನು ನಿಗಪಡಿಸಲಾಗಿದೆ ; (ವಿವರ ನೀಡುವುದು)	ಕೇಂದ್ರ ಸರ್ಕಾರದ ಕೃಷಿ ವೆಚ್ಚ ಮತ್ತು ಬೆಲೆ ಆಯೋಗವು (CACP) ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಯನ್ನು ನಿಗದಿಪಡಿಸುವ ಪೂರ್ವದಲ್ಲಿ ರಾಜ್ಯವಾರು ಉತ್ಪಾದನಾ ವೆಚ್ಚ (ಉಳುಮೆ, ಕೃಷಿ ಪರಿಕರಗಳ ವೆಚ್ಚ + ಕುಟುಂಬದ ಶ್ರಮ) ಶೇ.50 ರಷ್ಟು ಹೆಚ್ಚಿಸಿ ಬೆಂಬಲ ಬೆಲೆಯನ್ನು ಘೋಷಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ. ಅದರಂತೆ, ಕೇಂದ್ರ ಸರ್ಕಾರವು ಮುಂಗಾರು ಹಾಗೂ ಹಿಂಗಾರು ಹಂಗಾಮಿಗೆ ಮುಂಚಿತವಾಗಿ ಬೆಂಬಲ ಬೆಲೆಯನ್ನು ಘೋಷಿಸುತ್ತದೆ.
ಇ	ರಾಜ್ಯದಲ್ಲಿ ಸತತ ಬರಗಾಲದಿಂದಾಗಿ ತೆಂಗಿನ ಮರಗಳಲ್ಲಿ ಇಳುವರಿ ಕಡಿಮೆಯಾಗಿದ್ದರೂ ಸಹ, ಮಾರುಕಟ್ಟೆಯಲ್ಲಿ ಕೊಬ್ಬರಿ ಬೆಲೆ ಇಳಿಮುಖವಾಗುತ್ತಿರುವುದಕ್ಕೆ ಕಾರಣವೇನು ;	ರಾಜ್ಯದಲ್ಲಿ ಕಳೆದ ಸಾಲಿನಲ್ಲಿ ಬರಗಾಲದಿಂದ ತೆಂಗು ಇಳುವರಿ ಕಡಿಮೆಯಾಗಿದ್ದರೂ ಸಹ, ಕೋವಿಡ್-19 ಲಾಕ್ ಡೌನ್‌ನಿಂದ ಮಾರುಕಟ್ಟೆಯಲ್ಲಿ ಬೇಡಿಕೆ ಕಡಿಮೆಯಾಗಿ ಧಾರಣೆ ಕುಸಿತಗೊಂಡಿತ್ತು. ಆದರೆ, ಪ್ರಸ್ತುತ ಮಾರುಕಟ್ಟೆಯಲ್ಲಿ ನಿಗದಿಪಡಿಸಿರುವ ಕನಿಷ್ಠ ಬೆಂಬಲ ಬೆಲೆಗಿಂತ ಹೆಚ್ಚಿನ ಧಾರಣೆ ದೊರೆಯುತ್ತಿದೆ.

.....2

ಈ	ಹಾಗಿದ್ದಲ್ಲಿ, ಕೊಬ್ಬರಿಗೆ ಪ್ರಸಕ್ತ ಸಾಲಿನಲ್ಲಿ ಬೆಂಬಲ ಬೆಲೆಯನ್ನು ಘೋಷಿಸಲಾಗುವುದೇ; ಈ ಕುರಿತು ಸರ್ಕಾರದ ಕ್ರಮವೇನು? (ವಿವರ ನೀಡುವುದು)	ಭಾರತ ಸರ್ಕಾರದಿಂದ 2021ನೇ ಸಾಲಿಗೆ ಪ್ರತಿ ಕ್ವಿಂಟಾಲ್ ಉಂಡೆ ಕೊಬ್ಬರಿಗೆ ರೂ.10,600/-ಗಳ ಕನಿಷ್ಠ ಬೆಂಬಲ ಬೆಲೆಯನ್ನು ನಿಗಧಿಪಡಿಸಿ ಘೋಷಿಸಲಾಗಿರುತ್ತದೆ. ಪ್ರಸ್ತುತ ಕೊಬ್ಬರಿಗೆ ಕನಿಷ್ಠ ಬೆಂಬಲ ಬೆಲೆಗಿಂತ ಮಾರುಕಟ್ಟೆಯಲ್ಲಿ ಹೆಚ್ಚಿನ ಧಾರಣೆಯಿರುತ್ತದೆ. ಮಾರುಕಟ್ಟೆಯಲ್ಲಿ ಕನಿಷ್ಠ ಬೆಂಬಲ ಬೆಲೆಗಿಂತ ಧಾರಣೆ ಕುಸಿತಗೊಂಡಲ್ಲಿ ಸರ್ಕಾರವು ಮಾರ್ಗಸೂಚಿಯನ್ವಯ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ.

ಸಂಖ್ಯೆ:ಸಿಒ 111 ಎಂಆರ್‌ಇ 2021

(ಎಸ್.ಟಿ.ಸೋಮಶೇಖರ್)

ಸಹಕಾರ ಸಚಿವರು

ಅನುಬಂಧ

ಕೇಂದ್ರ ಸರ್ಕಾರವು ಕಳೆದ 03 ವರ್ಷಗಳಲ್ಲಿ ಘೋಷಿಸಿರುವ ಬೆಂಬಲ ಬೆಲೆಯ ವಿವರ

Rs. per quintal

Commodity	Variety	2017-18	2018-19	2019-20	2020-21
PADDY	Common	1550	1750	1815	1868
	Grade 'A'	1590	1770	1835	1888
JOWAR	Hybrid	1700	2430	2550	2620
	Maldandi	1725	2450	2570	2640
BAJRA		1425	1950	2000	2150
MAIZE		1425	1700	1760	1850
RAGI		1900	2697	3150	3295
Tur (Arhar)		5450^	5675	5800	6000
MOONG		5575^	6975	7050	7196
URAD		5400^	5600	5700	6000
COTTON	Medium Staple	4020	5150	5255	5515
	Long Staple	4320	5450	5550	5825
Groundnut		4450^	4890	5090	5275
SUNFLOWER SEED		4100*	5388	5650	5885
SOYABEAN	Black	3050^	3399	3710	-
	Yellow				3880
SESAMUM	-	5300*	6249	6485	6855
NIGERSEED	-	4050*	5877	5940	6695
RABICROPS					
WHEAT		1735	1840	1925	1975
BARLEY	-	1410	1440	1525	1600
GRAM	-	4400!	4620	4875	5100
MASUR (LENTIL)	-	4250*	4475	4800	5100
Rapeseed & Mustard	-	4000*	4200	4425	4650
SAFFLOWER	-	4100	4945	5215	5327
TORIA	-	3900	4190	4425	-
COPRA	Milling	6500	7511	9521	9960
	Ball	6785	7750	9920	10300
DE-HUSKED COCONUT		1760	2030	2571	2700
JUTE		3500	3700	3950	4225

ವ್ಯವಸ್ಥಾಪಕ ನಿರ್ದೇಶಕರ ಪರವಾಗಿ

ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ
ಬೆಂಗಳೂರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	2881
ವಿಧಾನ ಸಭೆ ಸದಸ್ಯರ ಹೆಸರು	:	ಡಾ|| ಯತೀಂದ್ರ ಸಿದ್ದರಾಮಯ್ಯ (ವರುಣ)
ಉತ್ತರಿಸಬೇಕಾದ ದಿನಾಂಕ	:	19.03.2021
ಉತ್ತರಿಸುವ ಸಚಿವರು	:	ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

ಕ್ರ. ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಪಡಿತರ ಚೀಟಿಗಳನ್ನು ಪಡೆಯಲು ಆನ್‌ಲೈನ್ ವ್ಯವಸ್ಥೆ ಮಾಡಿರುವುದು ಸರಿಯಷ್ಟೆ; ಆದರೆ ಅರ್ಜಿ ಸಲ್ಲಿಸಿ ಸುಮಾರು ತಿಂಗಳುಗಳು ಕಳೆದರೂ ಸಹ ಪಡಿತರ ಚೀಟಿಗಳು ವಿತರಣೆಯಾಗದ ಕಾರಣ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪಡಿತರ ಚೀಟಿ ವಿರಣೆಗೆ ನಿಗದಿಪಡಿಸಿದ ಕಾಲಮಿತಿಯೇನು; 6 ತಿಂಗಳಿಗೂ ಮೇಲ್ಪಟ್ಟು ವಿತರಣೆಗೆ ಬಾಕಿ ಇರುವ ಪಡಿತರ ಚೀಟಿಗಳು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ಆದ್ಯತೇತರ ಪಡಿತರ ಚೀಟಿಗಳನ್ನು ತಕ್ಷಣವೇ ವಿತರಿಸಲಾಗುತ್ತಿದೆ. ಆದ್ಯತಾ ಪಡಿತರ ಚೀಟಿಗಳನ್ನು ವಿತರಿಸುವ ಮುನ್ನ ವಾಸಸ್ಥಳ, ಅರ್ಹತೆ ಮತ್ತು ನೈಜತೆಗಳನ್ನು ಪರಿಶೀಲಿಸುವ ಅವಶ್ಯಕತೆ ಇದೆ. ಆದ್ಯತಾ ಪಡಿತರ ಚೀಟಿ ಅರ್ಜಿಗಳನ್ನು "ಮೊದಲು ಬಂದದ್ದು ಮೊದಲು ಹೊರಗೆ" ಪದ್ಧತಿಯಡಿ ವಿಲೇವಾರಿ ಮಾಡಲಾಗುತ್ತಿದೆ. ಕೋವಿಡ್ -19ರ ಹಿನ್ನೆಲೆಯಲ್ಲಿ ಬಯೋಮೆಟ್ರಿಕ್ ವ್ಯವಸ್ಥೆಯನ್ನು ಬಳಸುವುದಕ್ಕೆ ಅಡಚಣೆಯಾದ ಕಾರಣದಿಂದ ತಾತ್ಕಾಲಿಕವಾಗಿ ಆದ್ಯತಾ ಪಡಿತರ ಚೀಟಿ ವಿತರಣೆ ಕಾರ್ಯವನ್ನು ಸ್ಥಗಿತಗೊಳಿಸಲಾಗಿದೆ. ಆದರೆ ಸಕಾಲ ಯೋಜನೆಯಡಿ ಪಡಿತರ ಚೀಟಿಯಲ್ಲಿ ಸದಸ್ಯರ ಸೇರ್ಪಡೆ ಮತ್ತು ತಿದ್ದುಪಡಿ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಆರು ತಿಂಗಳಿಗೂ ಮೇಲ್ಪಟ್ಟು ವಿತರಣೆಗೆ ಬಾಕಿಯಿರುವ ಪಡಿತರ ಚೀಟಿಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.
